ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 22 ಭಾನುವಾರ 2023

ಸಂಪುಟ: 44 | ಸಂಚಿಕೆ: 187 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಮೈಸೂರಲ್ಲಿ ಇಂದು, ನಾಳೆ ಏರ್ ಶೋ

ಮೈಸೂರು, ಅ. 21(ಆರ್‌ಕೆ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಾಳೆ (ಅ. 22) ಮತ್ತು ಅಕ್ಟೋಬರ್ 23ರಂದು ಏರ್ ಶೋ ನಡೆಯಲಿದೆ.

ಭಾನುವಾರ ರಿಹರ್ಸಲ್ ನಡೆಯುಲಿದ್ದು, ಸೋಮವಾರ ಪೂರ್ಣ ಪ್ರಮಾಣದ ಏರ್ ಶೋ ನಡೆಯಲಿದೆ. ಭಾನುವಾರ ಮತ್ತು ಸೋಮವಾರ ಸಂಜೆ 4ರಿಂದ 4.45 ಗಂಟೆವರೆಗೆ ನಡೆಯುವ ಏರ್ ಶೋನಲ್ಲಿ ಭಾರತೀಯ ವಾಯುಪಡೆಯ ವಿಮಾನಗಳು ಹಾಗೂ ಸೈನಿಕರು ಸಾಹಸ ಪ್ರದರ್ಶನ ನೀಡುವರು. ಮುಡಾ ಅಧಿಕಾರಿಗಳು, ಎನ್‌ಆರ್ ಠಾಣೆ ಪೊಲೀಸರು ವಾಯುಪಡೆ ಅಧಿಕಾರಿಗಳ ಮಾರ್ಗದರ್ಶನದಂತೆ ಪಂಜಿನ ಕವಾಯತು ಮೈದಾನದಲ್ಲಿ ಸಿದ್ಧತಾ ಕಾರ್ಯ ನಡೆಸುತ್ತಿದ್ದಾರೆ.

ಮೈದಾನವನ್ನು ವೈಮಾನಿಕ ಪ್ರದರ್ಶನಕ್ಕೆ ಸಜ್ಜುಗೊಳಿಸಲಾಗಿದ್ದು, ಆಸನಗಳು, ಎನ್‌ಕ್ಲೋಷರ್ ●9ನೇ ಪುಟಕ್ಕೆ





ಏರ್ ಶೋಗೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸಿದ್ಧತೆ.

ನಾಳೆ ಮೈಸೂರಿಗೆ ಸಿಎಂ: ಏರ್ ಶೋ ವೀಕ್ಷಣೆ

ಮೈಸೂರು ದಸರಾ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅ.23 ರಂದು ನಗರಕ್ಕೆ ಆಗಮಿಸಲಿದ್ದು, ಮೂರು ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಅ.23ರಂದು ಮಧ್ಯಾಹ್ನ 1.30 ಗಂಟೆಗೆ ಬೆಂಗಳೂರಿನಿಂದ ರಸ್ತೆ ಮೂಲಕ ಆಗಮಿಸುವ ಸಿದ್ದರಾಮಯ್ಯ, ಸಂಜೆ 4 ಗಂಟೆಗೆ ನಗರದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ ಏರ್ ಶೋ ವೀಕ್ಷಣೆ ಮಾಡಲಿದ್ದಾರೆ.

ಅ.24 ರಂದು ಬೆಳಗ್ಗೆ ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿಯ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಲಿದ್ದಾರೆ. ತರುವಾಯ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಮಧ್ಯಾಹ್ನ ಮೈಸೂರು ಅರಮನೆಯಿಂದ ಹೊರಡುವ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡುವ ಸಿದ್ದರಾಮಯ್ಯ, ರಾತ್ರಿ 7ಕ್ಕೆ ನಗರದ ಬನ್ನಿಮಂಟಪ



ಮೈದಾನದಲ್ಲಿ ನಡೆಯುವ ಟಾರ್ಚ್‌ಲೈಟ್ ಪರೇಡ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಅ.25 ರಂದು ಮಧ್ಯಾಹ್ನ 12.30 ಗಂಟೆಗೆ ರಾಮಕೃಷ್ಣನಗರದ ಲಿಂಗಾಂಬುಧಿ ಸಸ್ಯ ಶಾಸ್ತ್ರೀಯ ತೋಟದ ಉದ್ಘಾಟನೆಯನ್ನು ಸಿದ್ದರಾಮಯ್ಯ ನೆರವೇರಿಸುವರು. ಕರ್ಜನ್ ಪಾರ್ಕ್‌ನಲ್ಲಿ ನಿರ್ಮಿಸಿರುವ ತೋಟಗಾರಿಕೆ ಪಿತಾಮಹ ಡಾ.ಎಂ.ಹೆಚ್.ಮರೀಗೌಡರ ಪ್ರತಿಮೆಯನ್ನು ಮಧ್ಯಾಹ್ನ 1.30 ಗಂಟೆಗೆ ಅನಾವರಣಗೊಳಿಸಲಿದ್ದಾರೆ. ತರುವಾಯ ಸಂಜೆ 4ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ರಾಜ್ಯ ಸರ್ಕಾರಿ ನೌಕರರಿಗೆ ದಸರಾ ಗಿಫ್ಟ್

ಬೆಂಗಳೂರು, ಅ. 21(ಕೆಎಂಶಿ)– ತುಟ್ಟಿಭತ್ಯೆಯನ್ನು ಜುಲೈ 1 ರಿಂದ ಪೂರ್ವಾನ್ವಯವಾಗುವಂತೆ ಶೇ.3.75 ರಷ್ಟು ಹೆಚ್ಚಿಸುವ ಮೂಲಕ ರಾಜ್ಯ ಸರ್ಕಾರಿ ನೌಕರರಿಗೆ ದಸರಾ ಉಡುಗೊರೆಯನ್ನು ಸರ್ಕಾರ ನೀಡಿದೆ.

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದ್ದು, ಇದರಿಂದ ಸರ್ಕಾರಿ ನೌಕರರ ತುಟ್ಟಿಭತ್ಯೆ ಪ್ರಮಾಣ ಶೇ.38.75ಕ್ಕೆ ಏರಿಕೆಯಾಗಿದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳ ಬೋಧಕ ಸಿಬ್ಬಂದಿ ಹಾಗೂ ಎನ್‌ಜೆಪಿಸಿ ವೇತನ ಶ್ರೇಣಿಯ ನ್ಯಾಯಾಂಗ ಅಧಿಕಾರಿಗಳ ತುಟ್ಟಿಭತ್ಯೆಯನ್ನು ಶೇ.4ರಷ್ಟು ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ. ಈ ತುಟ್ಟಿಭತ್ಯೆಯನ್ನು ಶೇ.46ಕ್ಕೆ ಪರಿಷ್ಕರಿಸಿದಂತಾಗಿದೆ. ಇದರಿಂದ ಸರ್ಕಾರಕ್ಕೆ ವಾರ್ಷಿಕ 1109 ಕೋಟಿ ಹೆಚ್ಚುವರಿ ವೆಚ್ಚವಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ

ಬೆಳಗಾಂನ ಮುದೋಳ್ ಪೈ.ಸುನೀಲ್ 'ದಸರಾ ಕಂಠೀರವ'
ಪೈ.ರೋಹನ್ ನಾರಾಯಣ್ ಗವಾಡೆ 'ದಸರಾ ಕೇಸರಿ'
ದಾವಣಗೆರೆ ಪೈ.ಕೊರವರ ಸಂಜೀವ್ 'ದಸರಾ ಕಿಶೋರ'
ಹಳಿಯಾಳದ ಪೈ.ಲಕ್ಷ್ಮಿ ಪಾಟೀಲ್ 'ದಸರಾ ಕಿಶೋರಿ'



ನಾಡಹಬ್ಬ ಮೈಸೂರು ದಸರಾ –2023ರ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ (ಎಡದಿಂದ) ಬೆಳಗಾಂನ ಮುದೋಳ್ ಪೈ.ಸುನೀಲ್ ಪಡತಾರೆ 'ದಸರಾ ಕಂಠೀರವ', ಪೈ.ರೋಹನ್ ನಾರಾಯಣ್ ಗವಾಡೆ 'ದಸರಾ ಕೇಸರಿ', ದಾವಣಗೆರೆ ಪೈ.ಕೊರವರ ಸಂಜೀವ್ 'ದಸರಾ ಕಿಶೋರ', ಹಳಿಯಾಳದ ಪೈ.ಲಕ್ಷ್ಮಿ ಪಾಟೀಲ್ 'ದಸರಾ ಕಿಶೋರಿ' ಪ್ರಶಸ್ತಿ ಜಯಿಸಿದರು.

ಮೈಸೂರು, ಅ.21(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ 'ದಸರಾ ಕಂಠೀರವ' ಪ್ರಶಸ್ತಿಯನ್ನು ಸತತ ಎರಡನೇ ಬಾರಿಗೆ ಬೆಳಗಾಂನ ಮುದೋಳ್ ಪೈಲ್ವಾನ್ ಸುನೀಲ್ ಪಡತಾರೆ ಮುಡಿಗೇರಿಸಿಕೊಂಡರೆ, 'ದಸರಾ ಕೇಸರಿ'ಯಾಗಿ ಬೆಳಗಾಂ ಪೈ.ರೋಹನ್ ನಾರಾಯಣ್ ಗವಾಡೆ, 'ದಸರಾ ಕಿಶೋರ'ನಾಗಿ ದಾವಣಗೆರೆ ಪೈ.ಕೊರವರ ಸಂಜೀವ್ ಹಾಗೂ ಮಹಿಳಾ ವಿಭಾಗದ 'ದಸರಾ ಕಿಶೋರಿ'ಯಾಗಿ ಹಳಿಯಾಳದ ಪೈ.ಲಕ್ಷ್ಮಿ ಪಾಟೀಲ್ ಹೊರಹೊಮ್ಮಿದರು. ನಗರದ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಟೈಟಲ್ ಪ್ರಶಸ್ತಿ ಫೈನಲ್ ಹಣಾಹಣಿಯಲ್ಲಿ ಜಿದ್ದಾಜಿದ್ದಿನ ಹೋರಾಟ ನಡೆಸಿದ ●9ನೇ ಪುಟಕ್ಕೆ

ನಾಡಕುಸ್ತಿ ವೈಭವ...

ಟೈಟಲ್ ಕುಸ್ತಿ ಪಂದ್ಯಗಳ ಬಳಿಕ ನಡೆದ 41 ಜೋಡಿ ನಾಡಕುಸ್ತಿ ಪಂದ್ಯಗಳು ಅಭಿಮಾನಿಗಳ ಮನಸೂರೆಗೊಂಡವು. ಮೇಯರ್ ಕಪ್ ಸೇರಿದಂತೆ ಪ್ರಶಸ್ತಿಗಳಿಗಾಗಿ ನಡೆದ ನಾಡ ಕುಸ್ತಿ ಪಂದ್ಯಾವಳಿಯಲ್ಲಿ ಕೆಲ ಪೈಲ್ವಾನರು ಪ್ರಶಸ್ತಿ ಜಯಿಸಿ, ಸಂಭ್ರಮಿಸಿದರು.

ಹುತಾತ್ಮ ಪೊಲೀಸರ ಸಮೂಹ ವಿಮಾ ಮೊತ್ತ
50 ಲಕ್ಷಕ್ಕೆ ಏರಿಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು: ಕರ್ತವ್ಯದ ವೇಳೆ ಹುತಾತ್ಮರಾದ ಪೊಲೀಸ್ ಸಿಬ್ಬಂದಿಯ ಸಮೂಹ ವಿಮೆ ಮೊತ್ತವನ್ನು 20 ಲಕ್ಷ ರೂ.ಗಳಿಂದ 50 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಘೋಷಿಸಿದ್ದಾರೆ.

ಬೆಂಗಳೂರಿನ ಮೈಸೂರು ರಸ್ತೆಯ ಹುತಾತ್ಮರ ಉದ್ಯಾನವನದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಪೊಲೀಸ್ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಈ ವಿಷಯ ಪ್ರಕಟಿಸಿದರು. ಪೊಲೀಸ್ ವ್ಯವಸ್ಥೆಯು ರಾಜ್ಯ ಮತ್ತು ಸರ್ಕಾರದ ಘನತೆ ಹೆಚ್ಚಿಸುವ ಕೆಲಸ ಮಾಡುತ್ತದೆ. ಅಭಿವೃದ್ಧಿ ಮತ್ತು ಕಾನೂನು ಸುವ್ಯವಸ್ಥೆ ನಡುವೆ ನೇರ ಸಂಬಂಧವಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದ್ದಾಗ ಹೆಚ್ಚಿನ ಬಂಡವಾಳ ಹೂಡಿಕೆಯಾಗುತ್ತದೆ ಎಂದು ಹೇಳಿದರು.

ತಂತ್ರಜ್ಞಾನದ ಪ್ರಗತಿಯಿಂದ ಪೊಲೀಸ್ ಇಲಾಖೆಗೆ ಹೊಸ ಸವಾಲುಗಳು ಎದುರಾಗುತ್ತಿದ್ದು, ಸೈಬರ್ ತಂತ್ರಜ್ಞಾನದ ಜತೆಗೆ ಸೈಬರ್ ಅಪರಾಧಗಳೂ ಹೆಚ್ಚುತ್ತಿವೆ, ಇದನ್ನು ಪರಿಣಾಮಕಾರಿಯಾಗಿ ತಡೆಯಬೇಕು ಎಂದು ಸೂಚನೆ ನೀಡಿದರು. ಎಲ್ಲ ಜನರನ್ನು ಸಮಾನವಾಗಿ ಕಾಣುವುದು ಮತ್ತು ನೋಡುವುದು ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆಯ ಜವಾಬ್ದಾರಿಯಾಗಿದೆ. ಮಹಿಳೆ, ಮಕ್ಕಳು ಮತ್ತು ಹಿರಿಯ ●9ನೇ ಪುಟಕ್ಕೆ



ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಿ

ಬೆಂಗಳೂರು: ಸುಳ್ಳು ಸುದ್ದಿ ಹರಡುವುದರಿಂದ ರಾಜ್ಯದ ಅಭಿವೃದ್ಧಿಗೆ ಮಾರಕವಾಗಲಿದ್ದು, ಇಂಥವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶ ಮಾಡಿದ್ದಾರೆ. ಸುಳ್ಳು ಮತ್ತು ದ್ವೇಷದ ಸುದ್ದಿಗಳು ನಾಡಿನ ಜಿಡಿಪಿಗೆ ಮಾರಕ. ಅಶಾಂತಿಯ ಪರಿಣಾಮವಾಗಿ ಜನರ ತಲಾ ಆದಾಯಕ್ಕೂ ಧಕ್ಕೆಯಾಗಲಿದೆ. ಆದ್ದರಿಂದ ಸುಳ್ಳು ಸುದ್ದಿ ಹರಡುವ ಜಾಲತಾಣಗಳು ಹಾಗೂ ಅವುಗಳನ್ನು ನಿರ್ವಹಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಯಾವ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮರ್ಪಕವಾಗಿರುತ್ತದೆಯೋ ಅಲ್ಲಿಗೆ ಬಂಡವಾಳ ಹರಿದು ಬರುತ್ತದೆ. ಇದರಿಂದ ಉದ್ಯೋಗ ಸೃಷ್ಟಿ ಹೆಚ್ಚಾಗಿ ಅಭಿವೃದ್ಧಿ ವೇಗ ಪಡೆದುಕೊಳ್ಳಲಿದೆ. ಇದರ ಪರಿಣಾಮ ನಾಡಿನ ಜನರ ತಲಾ ಆದಾಯವೂ ಹೆಚ್ಚಲಿದೆ. ಆದ್ದರಿಂದ ಕಾನೂನು, ಸುವ್ಯವಸ್ಥೆಯನ್ನು ಪೊಲೀಸ್ ಇಲಾಖೆ ಕಟ್ಟುನಿಟ್ಟಾಗಿ ನಿರ್ವಹಿಸಲು ಸೂಚಿಸಿದರು.

ಅ.25, ಮೈಸೂರು ಜಿಲ್ಲೆಯ ಶಾಲೆಗಳಿಗೆ ವಿಶೇಷ ರಜೆ

ಮೈಸೂರು, ಅ. 21(ಆರ್‌ಕೆ)–ದಸರಾ ಮಹೋತ್ಸವದ ಅಂಗವಾಗಿ ಅ.25ರಂದು ಮೈಸೂರು ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳಿಗೆ ಒಂದು ದಿನದ ವಿಶೇಷ ರಜೆ ಘೋಷಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು ತಿಳಿಸಿದ್ದಾರೆ. ಅ.24ರಂದು ವಿಜಯದಶಮಿ ಜಂಬೂಸವಾರಿ ಮೆರವಣಿಗೆ ನಡೆಯುವುದರಿಂದ ಹಾಗೂ ಮರುದಿನ ಬಹುತೇಕ ವಿದ್ಯಾರ್ಥಿಗಳು ಶಾಲೆಗೆ ಗೈರಾಗುವುದರಿಂದ ಅ.25ರಂದು ವಿಶೇಷ ರಜೆ ಘೋಷಿಸಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘವು ಮನವಿ ಮಾಡಿರುವ ಹಿನ್ನೆಲೆಯಲ್ಲಿ ಅಂದು (ಅ.25)ಜಿಲ್ಲೆಯಾದ್ಯಂತ ಶಾಲೆಗಳಿಗೆ ರಜೆ ನೀಡಲಾಗಿದೆ ಎಂದು ಅವರು ಜ್ಞಾಪನ ಪತ್ರದಲ್ಲಿ ತಿಳಿಸಿದ್ದಾರೆ. ಆ ದಿನವನ್ನು ನ.4ರ ಶನಿವಾರದಂದು ಪೂರ್ಣ ತರಗತಿ ನಡೆಸಿ ಸರಿದೂಗಿಸಿಕೊಳ್ಳುವಂತೆ ಉಪನಿರ್ದೇಶಕರು ಸೂಚಿಸಿದ್ದಾರೆ.

ದಸರಾ ಗೋಲ್ಡ್ ಕಾರ್ಡ್, ಟಿಕೆಟ್‌ಗೆ ಭಾರಿ ಬೇಡಿಕೆ

- ಇಂದು ಬೆಳಗ್ಗೆಯಿಂದ ಹೆಚ್ಚುವರಿ ಗೋಲ್ಡ್ ಕಾರ್ಡ್, ಟಿಕೆಟ್ ಮಾರಾಟ ಆರಂಭ
- ಆನ್‌ಲೈನ್ ಮೂಲಕ ಮಾತ್ರ ಮಾರಾಟ
- mysoredasara.gov.inನಲ್ಲಿ ಲಭ್ಯ



ಮೈಸೂರು, ಅ.21(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆ ಹಾಗೂ ಟಾರ್ಚ್‌ಲೈಟ್ ಪರೇಡ್ ವೀಕ್ಷಣೆಗೆ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ಗೆ ಭಾರಿ ಬೇಡಿಕೆ ಇರುವ ಕಾರಣ ಜಿಲ್ಲಾಡಳಿತ ಆನ್‌ಲೈನ್ ಮೂಲಕ ನಾಳೆ ಮತ್ತೆ ಹೆಚ್ಚಿನ ಗೋಲ್ಡ್ ಪಾಸ್ ಹಾಗೂ ಟಿಕೆಟ್ ಮಾರಾಟ ಮಾಡಲಿದೆ. ಆದರೆ ಎಷ್ಟು ಆಸನ ವ್ಯವಸ್ಥೆ ಮಾಡಬೇಕೆಂದು ಇನ್ನು ತೀರ್ಮಾನ ಮಾಡದೆ, ಮಾರಾಟ ಆರಂಭಿಸಿದೆ. ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ●9ನೇ ಪುಟಕ್ಕೆ

ಒಂದು ದಿನದ ಕಾರ್ಯಕ್ರಮಕ್ಕೆ 6 ಸಾವಿರ ಕೊಡಬೇಕೆ...?

ಮೈಸೂರು ದಸರಾ ಉದ್ಘಾಟನೆ ದಿನದಿಂದ ಜಂಬೂಸವಾರಿ ಮೆರವಣಿಗೆ ಹಾಗೂ ಟಾರ್ಚ್‌ಲೈಟ್ ಪರೇಡ್ ವರೆಗೆ ಎಲ್ಲಾ ಕಾರ್ಯಕ್ರಮಗಳಲ್ಲಿ ಗೋಲ್ಡ್ ಕಾರ್ಡ್ ಖರೀದಿ ಮಾಡುವವರಿಗೆ ಪ್ರತಿ ವರ್ಷ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ದಸರಾ ಉದ್ಘಾಟನೆಗೆ ಎರಡು ಮೂರು ದಿನದ ಮುನ್ನ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗುತ್ತಿತ್ತು. ಆದರೆ ಈ ಬಾರಿ ದಸರಾ ಉದ್ಘಾಟನೆಯಾದ 3 ದಿನದ ನಂತರ ಅಂದರೆ ಅ.18 ರಂದು ●9ನೇ ಪುಟಕ್ಕೆ

ಯುವ ದಸರಾಕ್ಕೆ ಸಂಭ್ರಮದ ತೆರೆ
ವಿದ್ಯಾರ್ಥಿಗಳ ಸಂವಿಧಾನ ಸಂದೇಶ; ನೃತ್ಯ, ಗಾಯನದ ಮೂಲಕ ರಂಜನೆ



ಬಾಲಿವುಡ್ ಗಾಯಕ ಬೆನ್ನಿದಯಾಳ್

ಮೈಸೂರು, ಅ.21(ಎಂಕೆ)– ಬೆಳಕಿನ ಭವ್ಯ ಚಿತ್ತಾರದ ನಡುವೆ ಎದೆಯಾಳ.. ಮನದಾಳ... ನೃತ್ಯ–ಸಂಗೀತ ಸುಧೆ ಹರಿಸಿದ 'ಯುವ ದಸರಾ' ಸಾಂಸ್ಕೃತಿಕ ಹಾಗೂ ಮನರಂಜನೆಯ ರಸದೌತಣಕ್ಕೆ ಶನಿವಾರ ತೆರೆ ಬಿದ್ದಿತು. ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ 'ಯುವ ದಸರಾ' ನೃತ್ಯ–ಸಂಗೀತ ವೈಭವದ ವೇದಿಕೆ ವಿವಿಧ ಕಾಲೇಜು ತಂಡಗಳ ಕಲಾತ್ಮಕ ನೃತ್ಯ ರೂಪಕ, ಮನಸೂರೆಗೊಂಡ ಫ್ಯಾಷನ್ ಶೋ ಹಾಗೂ ಬಾಲಿವುಡ್ ಗಾಯಕ ಬೆನ್ನಿ ದಯಾಳ್ ಅವರ ಸುಮಧುರ ಗಾಯನದೊಂದಿಗೆ ಸಂಪನ್ನಗೊಂಡಿತು. ಕಡೆಯ ದಿನ ಮೊದಲು ●9ನೇ ಪುಟಕ್ಕೆ



ನಟಿ ಆಶಿಕಾ ರಂಗನಾಥ್



ಅಖಿಲ ಕೊಡವ ಸಮಾಜದ ಮಾಜಿ ಅಧ್ಯಕ್ಷ ಮಾತಂಡ ಮೊಣ್ಣಪ್ಪ ನಿಧನ

● ಇಂದು ಮಧ್ಯಾಹ್ನ 12 ಗಂಟೆಯವರೆಗೆ ಸಾರ್ವಜನಿಕರ ದರ್ಶನಕ್ಕೆ ಅವಕಾಶ ● ನಂತರ ಬೊಳ್ಳುಮಾಡುನಲ್ಲಿರುವ ಕುಟುಂಬದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ



ಮಡಿಕೇರಿ,ಅ.21– ಅಖಿಲ ಕೊಡವ ಸಮಾಜದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಮಾತಂಡ ಮೊಣ್ಣಪ್ಪ(76) ಶನಿವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು.

ಪಾರ್ಥಿವ ಶರೀರವನ್ನು ಕೊಡಗಿಗೆ ತರಲಾಗಿದ್ದು, ಭಾನುವಾರ ಮಧ್ಯಾಹ್ನ 12 ಗಂಟೆಯವರೆಗೆ ವಿರಾಜಪೇಟೆ ಕೆದಮುಳ್ಳೂರು ತೋರದಲ್ಲಿರುವ ಅವರ ಮನೆಯಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಿ, ಬಳಿಕ ಬೊಳ್ಳುಮಾಡುನಲ್ಲಿರುವ ಕುಟುಂಬದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಹೋರಾಟದ ಬದುಕು: ಮೂಲತಃ ಬೊಳ್ಳುಮಾಡು ಗ್ರಾಮದವರಾಗಿದ್ದು, ಕೆದಮುಳ್ಳೂರು ತೋರ ಗ್ರಾಮದಲ್ಲಿ ನೆಲೆಸಿದ್ದ ಮಾತಂಡ ಸಿ.ಚೆಂಗಪ್ಪ ಹಾಗೂ ಲಿಲ್ಲಿ ಚೆಂಗಪ್ಪ ಪುತ್ರರಾಗಿ 1948ರಲ್ಲಿ ಜನಿಸಿದ ಮಾತಂಡ ಮೊಣ್ಣಪ್ಪ, 1973ರಿಂದ 2022ರವರೆಗೆ (50 ವರ್ಷಗಳ ಕಾಲ) ಅಖಿಲ ಕೊಡವ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕಳೆದ ವರ್ಷ ಅಧ್ಯಕ್ಷ ಸ್ಥಾನಕ್ಕೆ ಸ್ವಯಂ ನಿವೃತ್ತಿ ಘೋಷಿಸಿದ್ದ ಮಾತಂಡ ಮೊಣ್ಣಪ್ಪ, ಅಖಿಲ ಕೊಡವ ಸಮಾಜ ಪೊಮ್ಮಕ್ಕಡ ಪರಿಷತ್ ಹಾಗೂ ಅಖಿಲ ಕೊಡವ ಸಮಾಜ ಯೂತ್ ವಿಂಗ್ ಸ್ಥಾಪನೆಗೂ ಕಾರಣಕರ್ತರಾಗಿದ್ದರು. ಕೊಡಗು ಏಕೀಕರಣ ರಂಗದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಇವರು ತಲಕಾವೇರಿ ಅಭಿವೃದ್ಧಿ ಹೋರಾಟ ಸಮಿತಿಯ ಅಧ್ಯಕ್ಷರು, ಬಳಿಕ ತಲಕಾವೇರಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಕ ಮಾಡಿತ್ತು. ತಲಕಾವೇರಿ ಜೀರ್ಣೋದ್ಧಾರಕ್ಕೆ ಕಾರಣಕರ್ತರಾದ ಇವರು ತುಲಾ ಸಂಕ್ರಮಣದಂದು ನಡೆಸುವ ಅನ್ನಸಂತರ್ಪಣೆಯ ರೂವಾರಿಯೂ ಆಗಿದ್ದರು. ಬೆಪ್ಪುನಾಡ್ ತಕ್ಕರಾಗಿ, ಬೆಪ್ಪುನಾಡ್ ಕೊಡವ ●9ನೇ ಪುಟಕ್ಕೆ

ಹೊಸದಾಗಿ ನೇಮಕಗೊಂಡ ಶಿಕ್ಷಕರ ಸ್ಥಳ ನಿಯೋಜನೆ ಕೌನ್ಸಲಿಂಗ್

ರಾಜಕೀಯ ಪ್ರಭಾವ, ಶಿಫಾರಸ್ಸು ಇಲ್ಲದೆ ಪಾರದರ್ಶಕ ಪ್ರಕ್ರಿಯೆ



ಮೈಸೂರಿನ ಡಿಡಿಪಿಐ ಕಚೇರಿಯಲ್ಲಿ ಡಿಡಿಪಿಐ ಹೆಚ್.ಕೆ.ಪಾಂಡು ನೇತೃತ್ವದಲ್ಲಿ ಶಿಕ್ಷಕರ ಸ್ಥಳ ನಿಯೋಜನೆಗಾಗಿ ಕೌನ್ಸಲಿಂಗ್ ನಡೆಯಿತು.

ಮೈಸೂರು, ಅ.21(ಬಿಎಲ್‌ಯು)– ಹೊಸದಾಗಿ ನೇಮಕಗೊಂಡಿರುವ ಶಿಕ್ಷಕರ ಸ್ಥಳ ನಿಯೋಜನೆಗಾಗಿ ಮೈಸೂರಿನ ಡಿಡಿಪಿಐ ಕಚೇರಿಯಲ್ಲಿ ಶನಿವಾರ ಕೌನ್ಸಲಿಂಗ್ ಆರಂಭವಾಯಿತು.

ಮೈಸೂರು ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಗಳ 7 ಮತ್ತು 8ನೇ ತರಗತಿಗಳಿಗೆ ಒಟ್ಟು 560 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. ಇವರ ಸ್ಥಳ ನಿಯೋಜನೆಗೆ ಡಿಡಿಪಿಐ ಹೆಚ್.ಕೆ.ಪಾಂಡು ನೇತೃತ್ವದಲ್ಲಿ ಕೌನ್ಸಲಿಂಗ್ ನಡೆಸಲಾಯಿತು.

ಗಣಿತ ಮತ್ತು ವಿಜ್ಞಾನದ 162, ಸಮಾಜ ವಿಜ್ಞಾನದ 247, ಇಂಗ್ಲಿಷ್‌ನ 53, ಹಿಂದಿಯಲ್ಲಿನ 98 ಶಿಕ್ಷಕರಿಗೆ ಇಂದು ಕೌನ್ಸಲಿಂಗ್ ನಡೆಯಿತು.

ಮೊದಲ ದಿನವಾದ ಶನಿವಾರ ಗಣಿತ ಮತ್ತು ವಿಜ್ಞಾನ ವಿಷಯದ ಶಿಕ್ಷಕರಿಗೆ ಕೌನ್ಸಲಿಂಗ್ ನಡೆಸಲಾಯಿತು. ಅಕ್ಟೋಬರ್ 25ರಂದು ಉಳಿದ ವಿಷಯಗಳ ಶಿಕ್ಷಕರಿಗೆ ಕೌನ್ಸಲಿಂಗ್ ನಡೆಸಲಾಗುವುದು. ಮೆರಿಟ್ ಮೇಲೆ ಕೌನ್ಸಲಿಂಗ್ ನಡೆಸಲಾಗುತ್ತಿದ್ದು, ಹೆಚ್ಚು ಅಂಕ ಗಳಿಸಿದವರಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಇಲ್ಲಿ ಯಾವುದೇ ರಾಜಕೀಯ ಪ್ರಭಾವ ಅಥವಾ ಶಿಫಾರಸ್ಸು ಇಲ್ಲ. ಪಾರದರ್ಶಕವಾಗಿ ಮೆರಿಟ್ ಇದ್ದವರಿಗೆ ಕೌನ್ಸಲಿಂಗ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಪಾಂಡು ತಿಳಿಸಿದರು.

ಕೌನ್ಸಲಿಂಗ್‌ನಲ್ಲಿ ಭಾಗವಹಿಸುವವರಿಗೆ ಸ್ಥಳ ನಿಯೋಜನೆಯ ಆಯ್ಕೆಯನ್ನು ಅವರಿಗೇ ಬಿಡಲಾಗಿದೆ. ತಮಗೆ ಸೂಕ್ತವೆನಿಸಿದ ಸ್ಥಳವನ್ನು ಅವರೇ ಆಯ್ಕೆ ಮಾಡಿಕೊಳ್ಳಲಿದ್ದಾರೆ ಎಂದರು.

ಸ್ಥಳ ನಿಯೋಜನೆಗೊಂಡ ಶಿಕ್ಷಕರಿಗೆ ಮೊದಲು ತರಬೇತಿ ನೀಡಲಿದ್ದು, ತರುವಾಯ ಅವರು ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಹೇಳಿದರು.

ಮೈಸೂರು ಜಿಲ್ಲೆಯ ಹಲವು ಸರ್ಕಾರಿ ಶಾಲೆಗಳಲ್ಲಿ ವಿವಿಧ ವಿಷಯಗಳ ಶಿಕ್ಷಕರ ಹುದ್ದೆ ಖಾಲಿಯಾಗಿತ್ತು. ಇದರಿಂದ ಮಕ್ಕಳ ಕಲಿಕೆಗೆ ತೊಂದರೆಯಾಗಿತ್ತು. ಆದರೆ ಈಗ ಶಿಕ್ಷಕರ ನೇಮಕಾತಿಯಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ.

ಮೈಸೂರಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ

ಕರ್ತವ್ಯದ ವೇಳೆ ಹುತಾತ್ಮರಾದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಗೌರವ ನಮನ



ಮೈಸೂರು ಎಸ್ಪಿ ಕಚೇರಿ ಬಳಿಯ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ ಅವರು ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಇಟ್ಟು ನಮನ ಸಲ್ಲಿಸಿದರು.

ಮೈಸೂರು, ಅ. 21(ಆರ್‌ಕೆ)– ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶದಾದ್ಯಂತ ಕರ್ತವ್ಯದ ವೇಳೆ ಹುತಾತ್ಮರಾದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇಂದು ಮೈಸೂರಲ್ಲಿ ಗೌರವ ನಮನ ಸಲ್ಲಿಸಲಾಯಿತು.

ಮೈಸೂರು ದಕ್ಷಿಣ ವಲಯ, ನಗರ ಮತ್ತು ಜಿಲ್ಲಾ ಪೊಲೀಸ್, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್‌ಪಿ ಹಾಗೂ ಕೆಆರ್‌ಪಿ ಘಟಕಗಳ ಆಶ್ರಯದಲ್ಲಿ ನಜರ್‌ಬಾದ್‌ನ ಎಸ್ಪಿ ಕಚೇರಿ ಬಳಿಯ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ, ಮುಖ್ಯ ಅತಿಥಿಗಳಾಗಿದ್ದು, ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ (ರೀತ್) ಸಮರ್ಪಿಸುವ ಮೂಲಕ ಗೌರವ ನಮನ ಸಲ್ಲಿಸಿದರು.

ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಲೋಕೇಶ್ ಜಗಲಾಸರ್, ಕೆಎಸ್‌ಆರ್‌ಪಿ 5ನೇ ಪಡೆ ಕಮಾಂಡೆಂಟ್ ಕೆ.ಬಿ.ದೊರೆಮಣಿ ಭೀಮಯ್ಯ, ಡಿಸಿಪಿ ಎಂ.ಮುತ್ತುರಾಜ್, ಇಂಟೆಲಿಜೆನ್ಸ್ ಎಸ್ಪಿ ಜಯಪ್ರಕಾಶ್, ಡಿಸಿಆರ್‌ಇ ಎಸ್ಪಿ ಬಿ.ಟಿ.ಕವಿತಾ, ಗೃಹರಕ್ಷಕ ದಳದ ಕಮಾಂಡೆಂಟ್ ಡಾ.ಕಾಂತರಾಜು, ಡಿವೈಎಸ್ಪಿ ಪೂರ್ಣಚಂದ್ರ ತೇಜಸ್ವಿ, ಇನ್ಸ್‌ಪೆಕ್ಟರ್ ಎನ್.ಸಿ.ನಾಗೇಗೌಡ, ವೀರಪ್ಪನ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ಪ್ರಭಾಕರ್ ಅವರ ಪತ್ನಿ ಸರೋಜ, ಏರ್ ಕಮಾಂಡರ್ ಲಲಿತ್ ಕುಮಾರ್ ಜೈನ್, ಸೆಸ್ಕ್ ಜಾಗೃತ ದಳದ ಎಸ್ಪಿ ಸವಿತಾ ಹೂಗಾರ, ನಿವೃತ್ತ ಡಿಐಜಿ ಪಿ.ರಾಜೇಂದ್ರ ಪ್ರಸಾದ್, ಪತ್ರಕರ್ತರ ಪರವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ವಿಶೇಷ ಪೊಲೀಸ್ ಅಧಿಕಾರಿ ಶ್ರೀನಿವಾಸ್ ಗಾಂಧಿ ಅವರು ರೀತ್ ಸಮರ್ಪಿಸುವ ಮೂಲಕ ಮೃತ ಪೊಲೀಸರ ಸ್ಮರಣೆ ಮಾಡಿದರು.

ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಕಾರ್ಪೊರೇಟರ್ ಪ್ರಮೀಳಾ ಭರತ್ ನಾಗರಿಕರ ಪರವಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಅರ್ಪಿಸಿ, ಸ್ಮರಣೆ ಮಾಡಿದರು. ವಿಶೇಷವಷ್ಟೇ ಅಲ್ಲದೇ, ಜನಪ್ರತಿನಿಧಿಗಳು ನಮನ ಸಲ್ಲಿಸಿರುವುದು ಮೈಸೂರಲ್ಲಿ ಪ್ರಥಮ ಎನಿಸಿತು.

ಕೆಎಸ್‌ಆರ್‌ಪಿ ಅಸಿಸ್ಟೆಂಟ್ ಕಮಾಂಡೆಂಟ್ ಮಹದೇವಸ್ವಾಮಿ ನೇತೃತ್ವದಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಸಿಬ್ಬಂದಿ ನಡೆಸಿದ ಪರೇಡ್ ಮತ್ತು ವಾಲಿ ಫೈರಿಂಗ್ ಆಕರ್ಷಕವಾಗಿತ್ತು. ಸಬ್ ಇನ್ಸ್‌ಪೆಕ್ಟರ್ ಸುನೀಲ್ ಹಾಗೂ ನಂದಿನಿ ನಿರೂಪಣೆ ಮಾಡಿದರು. 1959ರ ಅಕ್ಟೋಬರ್ 21ರಂದು ಭಾರತ ಮತ್ತು ಚೀನಾ ಗಡಿಯಲ್ಲಿನ ಲಡಾಖ್ ಪ್ರದೇಶದ ಅಕ್ಸಾಯ್ ಎಂಬ ಸ್ಥಳದಲ್ಲಿ ಸಿಆರ್‌ಪಿಎಫ್ ಪಡೆಯ ಡಿವೈಎಸ್ಪಿ ಕರಣ್ ಸಿಂಗ್ ಮತ್ತು ಸಿಬ್ಬಂದಿ ಗಸ್ತು ಕಾರ್ಯದಲ್ಲಿರುವಾಗ ಚೀನಾ ಪಡೆ ಅತ್ಯಾಧುನಿಕ ಶಸ್ತ್ರಗಳಿಂದ ದಾಳಿ ನಡೆಸಿದಾಗ 10 ಮಂದಿ ಜವಾನರು ಮೃತಪಟ್ಟರು.

ಆ ದಿನದ ನೆನಪಿಗಾಗಿ ಆ ಸ್ಥಳದಲ್ಲಿ ಸಮುದ್ರ ಮಟ್ಟದಿಂದ ಸುಮಾರು 16,000 ಅಡಿ ಎತ್ತರದ ಬಂಜರು ಹಾಗೂ ಶೀತಲ ಪ್ರದೇಶದಲ್ಲಿ ಒಂದು ಸ್ಮಾರಕವನ್ನು ಭಾರತ ಸರ್ಕಾರವು ನಿರ್ಮಿಸಿತು. ಅಂದಿನಿಂದ ಪ್ರತಿ ವರ್ಷ ಅಕ್ಟೋಬರ್ 21ರಂದು ಪೊಲೀಸ್ ಹುತಾತ್ಮರ ದಿನವನ್ನು ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಪೊಲೀಸ್ ಘಟಕಗಳು ಆಚರಿಸುತ್ತಿವೆ.



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಕುಟುಂಬ ಸಮೇತ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.



ಇತ್ತೀಚೆಗೆ ನಡೆದ ಮೈಸೂರು ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವದಲ್ಲಿ ಎಂಬಿಎಯಲ್ಲಿ ಪಿಹೆಚ್.ಡಿ ಪದವಿಯನ್ನು ಬಿ.ಶಾಮಲ ಅವರು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಹಣಕಾಸು ಅಧಿಕಾರಿ ಪೂಜಾ ಅವರಿಂದ ಪಡೆದರು. ಶಾಮಲ ಅವರು ಚಾಮರಾಜನಗರ ಜಿಲ್ಲೆ ಶ್ರೀಗೋಪಾಲಸ್ವಾಮಿನಾಯಕ ಹಾಗೂ ಶ್ರೀಮತಿ ಯಶೋಧಮ್ಮ ದಂಪತಿ ಪುತ್ರಿ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.21–ಜಿಲ್ಲಾ ಉಪ್ಪಾರ ನೌಕರರ ಮತ್ತು ವೃತ್ತಿಪರ ಸಂಘವು 2023ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮತ್ತು ಸಿಬಿಎಸ್‌ಇ, ಐಸಿಎಸ್‌ಇಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಕೊಡಗು ಜಿಲ್ಲೆಯ ವಿದ್ಯಾರ್ಥಿಗಳು ಅ.31ರೊಳಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9980906469 ಸಂಪರ್ಕಿಸಬಹುದು.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಎಲ್ಲರ ಜವಾಬ್ದಾರಿ

ಉಪ ಮೇಯರ್ ಡಾ.ಜಿ.ರೂಪಾ ಅಭಿಮತ



ಮೈಸೂರು,ಅ.21(ಆರ್‌ಕೆ)–ಮೈಸೂರಿನ ಸೌಂದರ್ಯ ವೃದ್ಧಿಸುತ್ತಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಉಪ ಮೇಯರ್ ಡಾ.ಜಿ.ರೂಪಾ ತಿಳಿಸಿದ್ದಾರೆ.

ದಸರಾ ಮಹೋತ್ಸವದ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಏರ್ಪಡಿಸಿದ್ದ ಪಾರಂಪರಿಕ ನಡಿಗೆ ಕಾರ್ಯಕ್ರಮಕ್ಕೆ ಪುರಭವನದ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಜನಸಾಮಾನ್ಯರು, ಪ್ರವಾಸಿಗರಿಗೆ ಪಾರಂಪರಿಕ ಕಟ್ಟಡಗಳ ಇತಿಹಾಸ, ಹಿನ್ನೆಲೆ, ರಾಜರ ಆಳ್ವಿಕೆ ಬಗ್ಗೆ ಅರಿವು ಮೂಡಿಸಲು ಪಾರಂಪರಿಕ ನಡಿಗೆ ಅವಶ್ಯ ಎಂದರು.

ಐತಿಹಾಸಿಕ ವೈಭವ, ಪರಂಪರೆಯುಳ್ಳ ಮೈಸೂರಲ್ಲಿ ಅನೇಕ ಪಾರಂಪರಿಕ ಕಟ್ಟಡ, ಸ್ಮಾರಕಗಳಿವೆ. ಅವುಗಳನ್ನು ಉಳಿಸಿ ಮುಂದಿನ ತಲೆಮಾರಿಗೆ ಸಂರಕ್ಷಿಸುವ ಅಗತ್ಯವಿದೆ ಎಂದು ತಿಳಿಸಿದರು.

ಪುರಭವನ, ಮಹಾರಾಜ ಕಾಲೇಜು, ಆಡಳಿತ ತರಬೇತಿ ಸಂಸ್ಥೆ, ಅರಮನೆ, ಕೆ.ಆರ್.ಆಸ್ಪತ್ರೆ, ದೊಡ್ಡ ಗಡಿಯಾರ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳ ಇತಿಹಾಸ, ಹಿನ್ನೆಲೆಗಳ ಬಗ್ಗೆ ಪ್ರಾಧ್ಯಾಪಕ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್, ಇತಿಹಾಸ ತಜ್ಞ ಪ್ರೊ. ಎನ್.ಎಸ್. ರಂಗರಾಜು ಇಂದಿನ ಪಾರಂಪರಿಕ ನಡಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ವಿವರಿಸಿದರು.

ಟೌನ್‌ಹಾಲ್‌ನಿಂದ ಆರಂಭವಾದ ನಡಿಗೆಯು, ಸಿಲ್ವರ್ ಜುಬಿಲಿ ಕ್ಲಾಕ್ ಟವರ್, ಫ್ರೀಮೇಸನ್ಸ್ ಕ್ಲಬ್, 10ನೇ ಚಾಮರಾಜ ಒಡೆಯರ್ ಸರ್ಕಲ್, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರುಕಟ್ಟೆ, ಕೆ.ಆರ್.ಆಸ್ಪತ್ರೆ, ಮೆಡಿಕಲ್ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು, ಕಾವಾ ಹಳೇ ಕಟ್ಟಡ, ಓಲ್ಡ್ ಬ್ಯಾಂಕ್ ರೋಡ್, ಗಾಂಧಿ ಸ್ಕ್ವೇರ್ ಮೂಲಕ ಸಾಗಿ ಮರಳಿ ಪುರಭವನದಲ್ಲಿ ಅಂತ್ಯಗೊಂಡಿತು.

ಪಾರಂಪರಿಕ ಆಯುಕ್ತ ಎ.ದೇವ ರಾಜು, ಉಪನಿರ್ದೇಶಕಿ ಮಂಜುಳಾ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಪಾರಂಪರಿಕ ನಡಿಗೆಯಲ್ಲಿ ಪಾಲ್ಗೊಂಡು ಕಟ್ಟಡಗಳನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

ಇಸ್ಕಾನ್‌ನಲ್ಲಿ ವೈಭವದ ದಸರಾ ಆಚರಣೆ



ಮೈಸೂರು, ಅ. 21– ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್ ದೇವಸ್ಥಾನದಲ್ಲಿ ಅ.24ರಂದು 14ನೇ ವಾರ್ಷಿಕ ಇಸ್ಕಾನ್ ದಸರಾ ಉತ್ಸವ ನಡೆಯಲಿದೆ. 9 ದಿನಗಳ ನವರಾತ್ರಿ ಹಬ್ಬವು, 10ನೇ ದಿನವಾದ ವಿಜಯದಶಮಿಯಂದು ಕೊನೆಗೊಳ್ಳುತ್ತದೆ. ಇದರ ಅಂಗವಾಗಿ ಇಸ್ಕಾನ್ ದೇವಾಲಯವು ವಿಜಯದಶಮಿ ಉತ್ಸವವನ್ನು ಸಂಜೆ 6ರಿಂದ ರಾತ್ರಿ 8.30 ರವರೆಗೆ ವಿಜೃಂಭಣೆಯಿಂದ ಆಚರಿಸುತ್ತಿದೆ. ಶ್ರೀಕೃಷ್ಣ ಬಲರಾಮರ ಉತ್ಸವ ವಿಗ್ರಹವನ್ನು ಶ್ರೀರಾಮ ಮತ್ತು ಲಕ್ಷ್ಮಣರ ಅಲಂಕಾರ ಮಾಡಿ ಮೆರವಣಿಗೆ ಮೂಲಕ ಕಾರ್ಯಕ್ರಮ ಪ್ರಾರಂಭವಾಗಲಿದೆ. ಸಂಜೆ 6ರಿಂದ ಇಸ್ಕಾನ್ ಬೆಂಗಳೂರು ಹಾಗೂ ಅಕ್ಷಯ ಪಾತ್ರೆ ಫೌಂಡೇಷನ್ನಿನ ಅಧ್ಯಕ್ಷ ಮಧು ಪಂಡಿತ್ ದಾಸರು ವಿಶೇಷವಾಗಿ 'ದಸರಾ: ಆಧ್ಯಾತ್ಮಿಕ ದೃಷ್ಟಿಕೋನ' ಕುರಿತು ವಿಶೇಷ ಪ್ರವಚನ ನೀಡಲಿದ್ದಾರೆ.

ಭಗವಂತನಾದ ಶ್ರೀರಾಮನು ರಾಕ್ಷಸನಾದ ರಾವಣನ ಮೇಲೆ ವಿಜಯವನ್ನು ಸಾಧಿಸಿದ ಗುರುತಿಗಾಗಿ ರಾವಣ, ಕುಂಭಕರ್ಣ ಮತ್ತು ಮೇಘನಾದರ 40 ಅಡಿ ಎತ್ತರದ ಪ್ರತಿಕೃತಿಯನ್ನು ಪ್ರದರ್ಶಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ವಿವಿ ಕೆ–ಸೆಟ್ ಪರೀಕ್ಷೆಯಲ್ಲಿ ಅಕ್ರಮ: ಆರೋಪ



ಮೈಸೂರು, ಅ.21(ಜಿಎ)–ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2016ರಿಂದ 21ರವರೆಗೂ ನಡೆದ ಕೆ.ಎಸ್.ಇ.ಟಿ (ಕೆ.ಸೆಟ್) ಪರೀಕ್ಷೆಯಲ್ಲಿ ಅಕ್ರಮ ನಡೆದಿದ್ದು, ಇದರಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ ಎಂದು ಹಿರಿಯ ವಕೀಲ ಭರತ್ ರಾಜ್‌ಸಿಂಗ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮಗೆ ಸಿಕ್ಕಿರುವ ಉತ್ತರ ಪತ್ರಿಕೆಯಲ್ಲಿ ಖಾಲಿ ಉತ್ತರಗಳಿವೆ. ಆದರೆ ಅದೇ ಅಭ್ಯರ್ಥಿಯ ಅಂಕಪಟ್ಟಿಯನ್ನು ಪರಿಶೀಲಿಸಿದಾಗ ಅವರು ಪಾಸಾಗಿದ್ದಾರೆ. ಇದು ಹೇಗೆ ಸಾಧ್ಯ. ಹಣ ನೀಡಿ ಪಾಸ್ ಆದ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗ ಪಡೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಕಷ್ಟಪಟ್ಟು ಓದಿದ್ದ ಅನೇಕ ವಿದ್ಯಾರ್ಥಿಗಳು ಅವಕಾಶದಿಂದ ವಂಚಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಅಧಿಕಾರಿಗೆ ದೂರು ನೀಡುತ್ತೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್‌ಗೌಡ ಬೋರಹಳ್ಳಿ, ಎನ್.ಫಲ್ಗುಣ, ಕೆ.ರಾಜೇಶ್ ಸಿಂಗ್, ಹೆಚ್.ಬಿ.ಶಿವಪ್ರಕಾಶ್ ಮತ್ತು ರಾಮಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.10.2023 ಭಾನುವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಶತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಬೆಳಗ್ಗೆ 9ಕ್ಕೆ ಕುಮಾರಿ ಪೂಜೆ, ಬೆಳಗ್ಗೆ 10ಕ್ಕೆ ಬ್ರಹ್ಮಚಾರಿ ಪೂಜೆ, ಬೆಳಗ್ಗೆ 11ಕ್ಕೆ ಸುಮಂಗಲಿ ಪೂಜೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಸಪ್ತಶತಿ ಪಾರಾಯಣ, ಆಶೀರ್ವಾದ: ಶ್ರೀ ವೆಂಕಟಾಚಲ ಅವಧೂತರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ದುರ್ಗಾಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10ಕ್ಕೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಗೌರಿ, ಶ್ರೀ ವಿದ್ಯಾ ದೀಪದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋ ಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ವಿದ್ಯಾ ಷೋಡಶದುರ್ಗಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ವಿದ್ವಾನ್ ರಾಹುಲ್ ಶರ್ಮ ಅವರಿಂದ ಹಿಂದೂಸ್ಥಾನಿ ಸಂತೂರ್ ವಾದನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಚಂಡಿ ಹೋಮ, ಜಯಲಕ್ಷ್ಮಿ ಮಾತಾ ಜಯಂತಿ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ ಮಹಾಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಅಷ್ಟಮಿ, ಬೆಳಗ್ಗೆ ಉತ್ಸವ, ನವಗ್ರಹ ಹೋಮ, ಸಾಯಂಕಾಲ ಗಜೇಂದ್ರ ಮೋಕ್ಷ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಶ್ರೀ ದುರ್ಗಾಲಂಕಾರ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ.

■ **ರಂಗಾಯಣ:** ನವರಾತ್ರಿ ರಂಗೋತ್ಸವ, ಅಮೃತಾ ವಿಶ್ವ ವಿದ್ಯಾಪೀಠಂ ವಿದ್ಯಾರ್ಥಿಗಳಿಂದ ಪರಿಜು ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಮಹಾಷ್ಟಮಿ, ಬೆಳಗ್ಗೆ 7ಕ್ಕೆ ಶ್ರೀ ದುರ್ಗಾ ಮಾತೆಗೆ ಪೂಜೆ, 8ಕ್ಕೆ ಚಂಡೀಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಹಾಗೂ ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ–ನೂತನ ಸಂಗೀತ ಮಾಲಿಕೆ–ಪಂಚಮ ಸುಮ, ವಿದುಷಿ ಸುಧಾ ವೆಂಕಟರಾಘವ್ ಅವರಿಂದ ಗಾಯನ, ವಿದ್ವಾನ್ ಅಮೋಘ ಮಡೂರ್ ಅವರಿಂದ ವಯೋಲಿನ್, ವಿದ್ವಾನ್ ಸಾಯಿಶಿವು ಅವರಿಂದ ಮೃದಂಗ, ಸ್ಥಳ: ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ಕನಕದಾಸನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ :** ಬ್ಯಾಂಕಿನ ಶಾಖಾ ಕಟ್ಟಡ ಉದ್ಘಾಟನೆ ಉದ್ಘಾಟನೆ: ಮಾಜಿ ಸಚಿವೆ ಡಾ.ಲೀಲಾದೇವಿ ಆರ್. ಪ್ರಸಾದ್, ಉಪಸ್ಥಿತರು: ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಬ್ಯಾಂಕಿನ ಅಧ್ಯಕ್ಷೆ ಡಾ.ಡಿ.ಶೀಲಾಕುಮಾರಿ, ಸ್ಥಳ: ನಾಗರಿಕ ನಿವೇಶನ ಸಂಖ್ಯೆ 9, ಕುವೆಂಪುನಗರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ– ಪ್ರೊ. ಜಿ. ಅಶ್ವತ್ಥನಾರಾಯಣ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ, ಸೈಬರ್ ಸುರಕ್ಷೆ–ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 9.05 ಮೈಸೂರು ಮಹಲುಗಳು–ರೂಪಕ ಸರಣಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.40 ನಮ್ಮ ಆರೋಗ್ಯ–ಸಂಧಿವಾತಕ್ಕೆ ಆಯುರ್ವೇದ ಚಿಕಿತ್ಸೆ ಕುರಿತು ಡಾ.ಬೀನಾ ಎಂ.ಡಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ದುರ್ಗಾ ಅವತಾರ, ನಡೆಸಿಕೊಡುತ್ತಾರೆ ವಿ.ಮಾಲಿನಿ, 10.30 ಮಕ್ಕಳ ಮಂಟಪ–ಮುಖಾಮುಖಿ, ಸಂಸ್ಕೃತಿ – ಪರಂಪರೆ ಕುರಿತು ತಿಳಿಸುತ್ತಾರೆ ಸಂಸ್ಕೃತಿ ಚಿಂತಕರಾದ ವಿಶ್ವನಾಥ್, 11.30 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ– ದಿವಾಕರ ಹೆಗಡೆ, ಭಾಗವತರು – ಅನಂತ ಹೆಗಡೆ–ದಂತಳಿಗೆ, ಮದ್ದಳೆ ವಾದಕರು–ಅನಂತ ಪದ್ಮನಾಭ ಫಾಟಕ್, 1.30 ಧರ್ಮಸಾಲದಲ್ಲಿ ನಡೆಯಲಿರುವ ಭಾರತ ಹಾಗೂ ನ್ಯೂಜಿಲ್ಯಾಂಡ್ ತಂಡಗಳ ನಡುವೆ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಮೈಸೂರು ದಸರಾ ಕಾರ್ಯಕ್ರಮ

■ **ಅರಮನೆ ಆವರಣ**



ಸಂಜೆ 6 ರಿಂದ ನಿಸರ್ಗ–ವಿಸ್ಮಯ (ಅವಳಿ ಸಹೋದರಿಯರು) ಮತ್ತು ತಂಡದಿಂದ ರಂಗ ಗೀತೆಗಳು, ಸಂಜೆ 7 ರಿಂದ ನಾದಬ್ರಹ್ಮ ಡಾ. ಹಂಸಲೇಖ ಮತ್ತು ತಂಡದಿಂದ ಜಯಹೇ ನಾಲ್ವಡಿ– ಹಾಡು ಹಬ್ಬ

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 5.30 ರಿಂದ ಎಂ.ಟಿ. ವಿದ್ಯಾಧರ ಮಾಣಿಕ್ಯ ಮತ್ತು ತಂಡದಿಂದ ಸ್ಯಾಕ್ಸೋಫೋನ್, ಸಂಜೆ 6 ರಿಂದ ಎಚ್.ಡಿ. ಕೋಟೆ ಜಿ.ಡಿ. ರಾಜಗೋಪಾಲ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.45 ರಿಂದ ಪಂಡಿತ್ ಭೀಮಾ ಶಂಕರ ಬಿದನೂರು ಅವರಿಂದ ಸಪ್ತ ತಬಲ ವಾದನ, ರಾತ್ರಿ 7.30 ರಿಂದ ಬೆಂಗಳೂರಿನ ಅಶ್ವಿನಿ ಸುರೇಶ್ ಅವರಿಂದ ಭರತನಾಟ್ಯ, ರಾತ್ರಿ 8.30 ರಿಂದ ಹೇಮಲತಾ ಕುಮಾರಸ್ವಾಮಿ ಅವರಿಂದ ಶಾಸ್ತ್ರೀಯ ಸಂಗೀತ

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 5.30 ರಿಂದ ಪುಟ್ಟಸ್ವಾಮಿ ಜಿ.ಎಸ್. ಮತ್ತು ತಂಡದಿಂದ ಕೋಲಾಟ, ಸಂಜೆ 6 ರಿಂದ ತುಮಕೂರು ಕೆಂಕರೆ ಮಲ್ಲಿಕಾರ್ಜುನ ಅವರಿಂದ ಸುಗಮ ಸಂಗೀತ, ಸಂಜೆ 6.45 ರಿಂದ ಸಿದ್ದರಾಮು ಪೊಲೀಸ್ ಪಾಟೀಲ್, ಗುಲ್ಬರ್ಗ ಅವರಿಂದ ಹಿಂದೂಸ್ಥಾನಿ ಸಂಗೀತ, ರಾತ್ರಿ 7.30 ರಿಂದ ಸಮೀಕ್ಷ ಮತ್ತು ಪೂಜಾ ಸುಗವ್ ಅವರಿಂದ ಭರತನಾಟ್ಯ, ರಾತ್ರಿ 8.30 ರಿಂದ ಶಿವಮೊಗ್ಗದ ಇಮ್ತಿಯಾಜ್ ಸುಲ್ತಾನ್ ಅವರಿಂದ ಕನ್ನಡ ಗಜಲ್

■ **ಗಾನಭಾರತಿ ವೇದಿಕೆ**

ಸಂಜೆ 6 ರಿಂದ ಚಿತ್ರದುರ್ಗ ಎಂ. ನುಂಕೇಶ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.45 ರಿಂದ ಚಿಕ್ಕಮಗಳೂರು ಜಗದೀಶ್ ಮತ್ತು ತಂಡದಿಂದ ಜನಪದ ಗೀತೆ, ರಾತ್ರಿ 7.30 ರಿಂದ ಬಿ.ಚಿತ್ರಾ, ರಂಗಲಕ್ಷಣಂ ಫೌಂಡೇಷನ್ ಅವರಿಂದ ಭರತನಾಟ್ಯ, ರಾತ್ರಿ 8.30ಕ್ಕೆ ಶ್ರೀಲತಾ ಪ್ರತಾಪ್ ಮತ್ತು ತಂಡದಿಂದ ಸಮೂಹ ಗಾಯನ

■ **ನಾದಬ್ರಹ್ಮ ಸಂಗೀತಾ ಸಭಾ ವೇದಿಕೆ**

ಸಂಜೆ 6 ರಿಂದ ರಮೇಶ್ ತಾಯೂರು–ಜೈಶಂಕರ್ ಮೇಸ್ತ್ರಿ ಅವರಿಂದ ನಾಲ್ವಡಿ ಗೀತೆಗಳು, ಸಂಜೆ 6.45 ರಿಂದ ಮೈಸೂರು ವರ್ಷ ಎಂ.ಎನ್. ಮತ್ತು ತಂಡದಿಂದ ಸುಗಮ ಸಂಗೀತ, ರಾತ್ರಿ 7.30 ರಿಂದ ಬೆಂಗಳೂರು ಪದ್ಮಿನಿ ನೃತ್ಯ ಕಲಾ ಅಕಾಡೆಮಿಯ ಉಷಾ ಅವರಿಂದ ನೃತ್ಯರೂಪಕ, ರಾತ್ರಿ 8.30 ರಿಂದ ಹಾಸನದ ಶ್ರುತಿ ಎಚ್.ಕೆ. ಮತ್ತು ತಂಡದಿಂದ ಸುಗಮ ಸಂಗೀತ

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6 ರಿಂದ ಮಂಡ್ಯ ಡಿ.ವಿ. ರುದ್ರಸ್ವಾಮಿ ಅವರಿಂದ ವೀರಭದ್ರ ಕುಣಿತ, ಚನ್ನರಾಯಪಟ್ಟಣ ಅನಿತಾ ಅವರಿಂದ ಕೋಲಾಟ, ಸಂಜೆ 6.45 ರಿಂದ ಮಹದೇವಮ್ಮ ಮತ್ತು ತಂಡದಿಂದ ಜನಪದ ಗಾಯನ, ರಾತ್ರಿ 7.30 ರಿಂದ ಹುಯಿಲಾಳು ಶ್ರೀ ಮಲ್ಲೇಶ್ವರ ವೀರಮಕ್ಕಳ ಕಲಾತಂಡದ ಶಿವಮಲ್ಲು ಅವರಿಂದ ವೀರಮಕ್ಕಳ ಕುಣಿತ, ರಾತ್ರಿ 8.30 ರಿಂದ ಚಾಮರಾಜನಗರ ಸಪ್ತಸ್ವರ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಜನಪದ ಗೀತೆಗಳು

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ಮೈಸೂರು ಎಚ್.ಎಸ್. ಶೇಷಾಚಲ ತಂಡದಿಂದ ಹಾಸ್ಯ ನಾಟಕ : ಮುದುಕನ ಮದುವೆ, ಮಧ್ಯಾಹ್ನ 3 ರಿಂದ ಶ್ರೀ ಶಾರದಾ ಕಲಾಸಂಘ, ಹಾಸನ ಅವರಿಂದ ಪೌರಾಣಿಕ ನಾಟಕ : ಕುರುಕ್ಷೇತ್ರ, ಸಂಜೆ 6 ರಿಂದ ಬೆಂಗಳೂರು ಏಕಲವ್ಯ ಸಾಂಸ್ಕೃತಿಕ ಕಲಾ ಸಂಘದಿಂದ ಸಾಮಾಜಿಕ ನಾಟಕ : ಮರಳಿ ಪಡೆದ ಮಾಂಗಲ್ಯ

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಸ್ನೇಹ ಕಲಾ ಬಳಗದ ಅಭಿಜಿತ್ ಮತ್ತು ತಂಡದಿಂದ ರಂಗ ಗೀತೆ, ಮಧ್ಯಾಹ್ನ 3 ರಿಂದ ಬೆಂಗಳೂರು ಮನೋರಂಗದ ಅರುಣ್ ಮೂರ್ತಿ ಅವರಿಂದ ನಾಟಕ : ಕಾಡ್‌ಮನ್ಸಾ, ರಾತ್ರಿ 7 ರಿಂದ ಮೈಸೂರು ನಿರಂತರ ಫೌಂಡೇಷನ್ ವತಿಯಿಂದ ನಾಟಕ : ಗೊರೂರು

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ಮೈಸೂರು ಶ್ರೀ ಲತಾ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್‌ನ ಡಾ. ಶಾಂಭವಿ ಸ್ವಾಮಿ ಎಸ್.ವಿ. ಮಂಡ್ಯ ಅವರಿಂದ ನೃತ್ಯ ನಾಟಕ : ಜನನಿ, ರಾತ್ರಿ 7.30 ರಿಂದ ಸಂಚಯ ಟ್ರಸ್ಟ್ ಕಲಾವಿದರಿಂದ ನಾಟಕ : ಕಾಮರೂಪಿಗಳ್ (ರಾಮಾಯಣ ಆಧಾರಿತ), ನಿರ್ದೇಶನ : ಗಣೇಶ್ ಮಂದಾರತಿ.

■ **ನಟನ ರಂಗಮಂದಿರ**

ಸಂಜೆ 5ರಿಂದ ಮೈಸೂರು ಕೆ.ಎಸ್. ಭವತಾರಿಣಿ ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಚಾಮರಾಜನಗರದ ಶಾಂತಲಾ ಕಲಾವಿದರಿಂದ ನಾಟಕ : ಅಶ್ವಘೋಷ, ರಚನೆ : ಬಿ.ಎಸ್. ವಿನಯ್, ನಿರ್ದೇಶನ : ಚಿತ್ರಾ ವೆಂಕಟರಾಜು

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 5.30 ರಿಂದ ತುಮಕೂರು ಕರಿಬಸವಯ್ಯ ಮತ್ತು ತಂಡದಿಂದ ವೀರಭದ್ರ ಕುಣಿತ, ಸಂಜೆ 6 ರಿಂದ ಬೆಳಗಾವಿ ಪುಂಡಲೀಕ ನಾಮದೇವ್ ವಾಸ್ಟರ್ ಅವರಿಂದ ಗೊಂದಳಿ ಪದ, ಸಂಜೆ 6.45ಕ್ಕೆ ನೃತ್ಯ ತರಂಗಿಣಿಯ ಶ್ವೇತಾ ವಿಜಯ್ ಅವರಿಂದ ನೃತ್ಯರೂಪಕ, ಸಂಜೆ 7.30 ರಿಂದ ಜೋಗಿಲ ಸಿದ್ದರಾಜು ಅವರಿಂದ ಜನಪದ ಗಾಯನ, ರಾತ್ರಿ 8.30 ರಿಂದ ಬೆಂಗಳೂರು ಪುಷ್ಪಾಂಜಲಿ ಅವರಿಂದ ನೃತ್ಯರೂಪಕ

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್) :** ಬೆಳಗ್ಗೆ 10 ಗಂಟೆಗೆ– ಗಾಂಧಿ ಮತ್ತು ನೋಟು, ಮಧ್ಯಾಹ್ನ 1 ಗಂಟೆಗೆ ವೇದ, ಸಂಜೆ 4 ಗಂಟೆಗೆ ಕಾಂತಾರ, ಸಂಜೆ 7 ಗಂಟೆಗೆ ಧರಣಿ ಮಂಡಲ ಮಧ್ಯದೊಳಗೆ

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ವಿಶೇಷ, 1.15ಕ್ಕೆ ಫೋಟೋ, ಸಂಜೆ 4.15ಕ್ಕೆ ಕಾಸಿನ ಸರ, ಸಂಜೆ 7.15ಕ್ಕೆ ಕೊನೆಯ ನಿಲ್ದಾಣ

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ಹೈ ಅಂಡ್ ಲೋ, ಮಧ್ಯಾಹ್ನ 1.30ಕ್ಕೆ ಆಲ್ ಇಂಡಿಯಾ ರೇಡಿಯೋ, ಸಂಜೆ 4.30ಕ್ಕೆ ಇಟ್ ಮಸ್ಟ್ ಬಿ ಹೆವನ್, ಸಂಜೆ 7.30ಕ್ಕೆ ದಿ ಆರ್ಫನೇಜ್

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ಶಿವಾಜಿ ಸೂರತ್ಕಲ್–2, ಮಧ್ಯಾಹ್ನ 1 ಗಂಟೆಗೆ ನಾಗರಹಾವು, ಸಂಜೆ 4 ಗಂಟೆಗೆ ಕಾಂತಾರ, ಸಂಜೆ 7 ಗಂಟೆಗೆ ಬ್ರೋಕರ್

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ಯೋಗಚಾರಣ ಮತ್ತು ದುರ್ಗಾ ನಮಸ್ಕಾರ :** ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು ಮತ್ತು ದೇವಸ್ಥಾನದ ಆವರಣ, ಬೆಳಗ್ಗೆ 7ಕ್ಕೆ.

■ **ಲಲಿತಕಲೆ ಮತ್ತು ಕರಕುಶಲ ಸಮಾರೋಪ ಸಮಾರಂಭ :** ಉದ್ಘಾಟನೆ : ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4ಕ್ಕೆ

■ **ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆ :** ಉದ್ಘಾಟನೆ : ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಸ್ಥಳ : ಮೈಸೂರು ವಿವಿ ಹಾಕಿ ಮೈದಾನ, ಬೆಳಗ್ಗೆ 10ಕ್ಕೆ.

■ **ರೈತ ದಸರಾ :** ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ, ಉದ್ಘಾಟನೆ : ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಜೆ.ಕೆ. ಮೈದಾನ, ಸಂಜೆ 4ಕ್ಕೆ.

ಕಲ್ಯಾಣ ಯೋಜನೆಗಳನ್ನು 6 ತಿಂಗಳಲ್ಲಿ ಅನುಷ್ಠಾನಗೊಳಿಸಿ: ಪ್ರಧಾನಿ ಸೂಚನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ಕಾರದ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಆರು ತಿಂಗಳ ಗಡುವು ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಫಲಾನುಭವಿಗಳನ್ನು ತಲುಪಲು ಮತ್ತು ನೋಂದಾಯಿಸಲು ಕೇಂದ್ರ ಸರ್ಕಾರ ದೇಶದ ಎಲ್ಲಾ 2.7 ಲಕ್ಷ ಪಂಚಾಯತ್‌ಗಳಲ್ಲಿ ವಿಕ್ಷಿತ್ ಭಾರತ್ ಸಂಕಲ್ಪ ಯಾತ್ರೆ ಎಂಬ ಮೆಗಾ ಡ್ರೈವ್ ಅನ್ನು ಪ್ರಾರಂಭಿಸಲಿದೆ ಎಂದು ಹೇಳಿದ್ದಾರೆ. ಮುಂದಿನ ತಿಂಗಳು ದೀಪಾವಳಿ ನಂತರ ಈ ಮೆಗಾ ಡ್ರೈವ್ ಪ್ರಾರಂಭವಾಗಲಿದೆ ಮತ್ತು ಹಲವು ವಾರಗಳವರೆಗೆ ಇದು ಮುಂದುವರಿಯುತ್ತದೆ ಎಂದು ಮೂಲಗಳು ತಿಳಿಸಿವೆ.

ರೈತರ ಜಮೀನಿಗೆ ತೆರಳುವ ದಾರಿಗೆ ಅಡ್ಡಿಪಡಿಸುವಂತಿಲ್ಲ

ಬೆಂಗಳೂರು: ರೈತರ ಜಮೀನಿಗೆ ತೆರಳುವ ದಾರಿಗೆ ಅನ್ಯ ಭೂಮಾಲೀಕರು ಇನ್ನುಮುಂದೆ ಅಡ್ಡಿ ಪಡಿಸುವಂತಿಲ್ಲ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ರಾಜ್ಯಾದ್ಯಂತ ರೈತರಿಂದ ಈ ಸಂಬಂಧ ದೂರು ಬಂದ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ.

ಅಕ್ಕಪಕ್ಕದ ಜಮೀನುಗಳ ರೈತರು ಕೆಲವು ಖಾಸಗಿ ಜಮೀನುಗಳನ್ನು ದಾಟಿಕೊಂಡು ಕೃಷಿ ಪೂರಕ ಚಟುವಟಿಕೆಗಳನ್ನು ಮಾಡಲು ಹಾಗೂ ಬೆಳೆದ ಫಸಲನ್ನು ಹೊರತರಲಾಗದೆ ನಷ್ಟ ಹೊಂದುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ.

ಗ್ರಾಮ ನಕಾಶೆ ಕಂಡ ದಾರಿಗಳಲ್ಲಿ ರೈತರು ತಿರುಗಾಡಲು ಅವಕಾಶವಿದ್ದಾಗ್ಯೂ ಕೆಲವು ಭೂಮಾಲೀಕರು ಬಳಕೆದಾರ ರೈತರುಗಳಿಗೆ ತಿರುಗಾಡಲು ಅಡ್ಡಿಪಡಿಸುತ್ತಿದ್ದಾರೆ. ಅಲ್ಲದೆ, ಅಂತಹ ಜಾಗಗಳನ್ನು ಮುಚ್ಚಿರುವ ಉದಾಹರಣೆಗಳಿವೆ. ಕೆಲವು ರೈತರ ನಡುವಿನ ವೈಯಕ್ತಿಕ ದ್ವೇಷ, ಅಸೂಯೆಗಳು ಮತ್ತು ಹೊಂದಾಣಿಕೆಯ ಕೊರತೆಗಳು ಇದಕ್ಕೆ ಕಾರಣವಾಗಿವೆ.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 59ರಲ್ಲಿ ದಾರಿಯ ಹಕ್ಕುಗಳು ಮತ್ತು ಇತರ, ಅನುಭೋಗದ ಹಕ್ಕುಗಳ ಬಗ್ಗೆ ತಿಳಿಸಲಾಗಿದ್ದು, ಸಂಬಂಧಪಟ್ಟ ಜಮೀನುಗಳ ಭಾಗಿದಾರರು ಒಪ್ಪಿರುವಂತಹ ಸಂದರ್ಭದಲ್ಲಿ ಹಕ್ಕುಗಳ ದಾಖಲೆ ರಿಜಿಸ್ಟರ್‌ನಲ್ಲಿ ನಮೂದು ಮಾಡಲು ಅವಕಾಶವಿದೆ. The Indian Easement Act, 1882ರಂತೆ ಪ್ರತಿ ಜಮೀನಿನ ಮಾಲೀಕರು ಅಥವಾ ಜಮೀನಿನ ಅನುಭವದಲ್ಲಿರುವವರು ಅವರ ಭೂಮಿಯನ್ನು ಪ್ರವೇಶಿಸುವ ಹಕ್ಕು ಮತ್ತು ವಹಿವಾಟಿನ ಹಕ್ಕನ್ನು ಹೊಂದಿದ್ದು, ಇದಕ್ಕೆ ಅನ್ಯ ಭೂಮಾಲೀಕರಿಂದ ಯಾವುದೇ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ. ಅದರಂತೆ, ತಾಲೂಕಿನ ತಹಶೀಲ್ದಾರರು ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಹಾಗೂ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೆ ಅಡ್ಡಿಪಡಿಸುವಂತಹ ಆ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ, ದಾರಿಗಳನ್ನು ಸುಗಮಗೊಳಿಸಲು ಸೂಚಿಸಲಾಗಿದೆ

ನಕ್ಕರೆ ಅದೇ ಸ್ವರ್ಗ

ನಿರ್ದೇಶಕ : ನೀವು 10ನೇ ಮಹಡಿಯಿಂದ ಈಜುಕೊಳಕ್ಕೆ ಧುಮುಕಬೇಕು
ನಟ : ಆದರೆ ನನಗೆ ಈಜು ಬರುವುದಿಲ್ಲ?
ನಿರ್ದೇಶಕ : ಯೋಚಿಸಬೇಡಿ. ಅದರಲ್ಲಿ ನೀರು ಇರುವುದಿಲ್ಲ !

ಮೈಸೂರು ಮಿತ್ರ
ಭಾನುವಾರ, 22 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸ್ವಾರ್ಥ ಎಂದೂ ಪರರ ಭಾವನೆಗೆ ಬೆಲೆ ಕೊಡುವುದಿಲ್ಲ. ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ, ಬೇರೆಯವರ ಸಾಮರ್ಥ್ಯವನ್ನು, ಚಿಂತನೆಯನ್ನು ಗೌರವಿಸುವ ಮನೋಭಾವ ಬರುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿಡಿದ ಕೆಲಸ ಕೈ ಹತ್ತಲ್ಲ, ತಿಂದ ಅನ್ನ ಮೈ ಹತ್ತಲ್ಲ

ನಿಮ್ಮ ಪತ್ರಗಳು

ಭಲೇ ನೆತನ್ಯಾಹು !

ಮಾನ್ಯರೆ,

ಯುದ್ಧ ಪೀಡಿತ ಗಾಜಾ ಪಟ್ಟಿಗೆ ಹಮಾಸ್ ಉಗ್ರರ ವಿರುದ್ಧ ಹೋರಾಡಲು ಇಸ್ರೇಲ್ ಪ್ರಧಾನಿ ನೇತನ್ಯಾಹು ತಮ್ಮ ಸ್ವಂತ ಮಗನನ್ನೇ ಕಳುಹಿಸುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆಯೇ ಇಸ್ರೇಲ್ ಪ್ರಧಾನಿಗಳ ಬಗ್ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ.ದೇಶ ಪ್ರೇಮಕ್ಕೆ ಮತ್ತೊಂದು ಹೆಸರಾದ ಇಸ್ರೇಲ್ ಪುಟ್ಟ ರಾಷ್ಟ್ರವಾದರೂ ಸಹ, ಅದರ ಪ್ರಜೆಗಳು ದೇಶದ ಹಿತಕ್ಕಾಗಿ ಯಾವುದೇ ತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ಆ ದೇಶದ ಪ್ರತಿಯೊಬ್ಬ ಪ್ರಜೆಯೂ ಯೋಧನಾಗಿ ಮಾರ್ಪಡುತ್ತಿದ್ದಾರೆ. ಅದಕ್ಕಿಂತ ಹೆಚ್ಚಿನ ಮಹತ್ವದ್ದು ಎಂದರೆ, ಅಧಿಕಾರ ಸೂತ್ರಗಳನ್ನು ಹಿಡಿದಿರುವ ನೆತನ್ಯಾಹು, ತಮ್ಮ ಸ್ವಂತ ಪುತ್ರನನ್ನೇ ರಣರಂಗಕ್ಕೆ ಕಳುಹಿಸುತ್ತಿರುವುದು. ಇದು "ಯಥಾ ರಾಜಾ ತಥಾ ಪ್ರಜಾ" ಎಂಬ ನುಡಿಗಟ್ಟನ್ನು ನೆನಪಿಗೆ ತರುತ್ತದೆ. ಇಂತಹ ಪ್ರಧಾನಿ ನಿಜಕ್ಕೂ ಕೋಟಿಗೊಬ್ಬ. –ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಹಾನಗರ ಪಾಲಿಕೆಯ ಆಯುಕ್ತರ ಗಮನಕ್ಕೆ

ಮಾನ್ಯರೇ,

ಆಯುಧ ಪೂಜೆಯ ಮಾರಾಟಕ್ಕೆಂದು ರೈತರು, ವ್ಯಾಪಾರಿಗಳು ಲೋಡುಗಟ್ಟಲೇ ಬೂದುಗುಂಬಳ ಮತ್ತು ಬಾಳೆಕಂದುಗಳನ್ನು ತಂದು ಮೈಸೂರು ನಗರದ ವಿವಿಧೆಡೆ ಗುಡ್ಡೆ ಹಾಕಿಕೊಳ್ಳುತ್ತಾರೆ. ಈ ಬಾರಿಯೂ ಹಲವು ಕಡೆ ಗುಡ್ಡೆ ಹಾಕಿಕೊಂಡಿದ್ದಾರೆ.

ಸಾಮಾನ್ಯವಾಗಿ ಆಯುಧ ಪೂಜೆಯ ಮಧ್ಯಾಹ್ನದವರೆಗೆ ವ್ಯಾಪಾರ ನಡೆಸುವ ರೈತ ವ್ಯಾಪಾರಿಗಳು, ಆನಂತರ ಉಳಿದ ಪದಾರ್ಥಗಳನ್ನು ರಸ್ತೆ ಬದಿಯಲ್ಲಿಯೇ ಬಿಟ್ಟು ಹೋಗುತ್ತಾರೆ. ಅಂತಹ ಪದಾರ್ಥಗಳನ್ನು ಸಂಗ್ರಹಿಸಿದರೆ ಲೋಡುಗಟ್ಟಲೇ ಆಗುವುದು. ಇದನ್ನು ಮನಗಂಡಿದ್ದ ಕೆಲ ಸಮಾನ ಮನಸ್ಕ ವಕೀಲರು 2019ನೇ ಸಾಲಿನ ದಸರಾ ಸಂದರ್ಭದಲ್ಲಿ ಸಾಮಾಜಿಕ ಕಾಳಜಿ ಹೊಂದಿದ ಕೆಲ ವ್ಯಕ್ತಿಗಳು ಮತ್ತು ಅಶಕ್ತ ಗೋವುಗಳ ಆಶ್ರಯ ತಾಣವಾದ ಮೈಸೂರಿನ ಪಿಂಜರಾಪೋಲ್ ಕೇಂದ್ರದವರ ಜೊತೆಗೂಡಿ, ಅಶಕ್ತ ಗೋವುಗಳಿಗಾಗಿ ಬೀದಿಬದಿ ಬಿಟ್ಟು ಹೋಗಿದ್ದ ಪದಾರ್ಥಗಳನ್ನು ಸಂಗ್ರಹಿಸಿ ಸಾಗಿಸುವ ಕೆಲಸವನ್ನು ಮಾಡಿದ್ದರು. ಅದರ ಫಲವಾಗಿ ಒಂದು ದಿನದ ಮೇವು ಸಂಗ್ರಹವಾಗಿತ್ತು. 2020–21ನೇ ಸಾಲಿನಲ್ಲಿ ಕೊರೊನಾ ಕಾರಣದಿಂದ ದಸರಾ ನಡೆಯಲಿಲ್ಲ.

ಆದರೆ ಕಳೆದ ಸಾಲಿನಲ್ಲಿ ನಾವು ಸಂಗ್ರಹಿಸಲು ಹೋಗುವ ಮುನ್ನವೇ ಮಹಾನಗರ ಪಾಲಿಕೆಯವರು ಬೂದುಗುಂಬಳ ಮತ್ತು ಬಾಳೆಕಂದುಗಳನ್ನು ಕಸದೊಡನೆ ಸಂಗ್ರಹಿಸಿ, ಕಸದ ರಾಶಿಗೆ ಸಾಗಿಸಿದ್ದರು. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ರಾಸುಗಳ ಆಹಾರ ಕಸದ ರಾಶಿ ಸೇರಿತ್ತು. ಈ ಬಾರಿ ನಮ್ಮ ತಂಡವು ಸಿದ್ಧವಿದೆ. ಒಂದು ವೇಳೆ ನಗರಪಾಲಿಕೆಗೆ ತುರ್ತಾಗಿ ಸ್ವಚ್ಛತಾ ಕಾರ್ಯ ಮಾಡಬೇಕೆನಿಸಿದಲ್ಲಿ ಈ ಬಾರಿ ಬೂದುಗುಂಬಳ ಮತ್ತು ಬಾಳೆ ಕಂದುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಪಿಂಜರಾಪೋಲ್ ಆವರಣದಲ್ಲಿ ಹಾಕಿಸಿದರೆ ಅಶಕ್ತ ಪ್ರಾಣಿಗಳಿಗೆ ಒಂದು ದಿನದ ಆಹಾರ ಸಿಗುತ್ತದೆ. ಹಾಗೆಯೇ ನಗರದ ಸ್ವಚ್ಛತಾ ಕಾರ್ಯವೂ ಆಗುತ್ತದೆ. ದಯವಿಟ್ಟು ಆಯುಕ್ತರು ಈ ಬಗ್ಗೆ ಸೂಕ್ತವಾದ ಆದೇಶ ಮಾಡತಕ್ಕದ್ದು.

–ಎಸ್.ರವಿ, ವಕೀಲ, ಮೈಸೂರು

ಬರಿಗೈನಲ್ಲಿ ಮ್ಯಾನ್‌ಹೋಲ್ ಶುಚಿಗೊಳಿಸಿರುವುದು ಸರಿಯೇ?

ಮಾನ್ಯರೆ,

ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪೌರಕಾರ್ಮಿಕನಿಗೆ ಯಾವುದೇ ರಕ್ಷಾ ಕವಚಗಳನ್ನು ನೀಡದೆ ಮ್ಯಾನ್‌ಹೋಲ್ ಶುಚಿ ಮಾಡಿಸಿಕೊಂಡಿರುವುದು ನ್ಯಾಯವೇ? ಮ್ಯಾನ್‌ಹೋಲ್ ಶುಚಿಗೊಳಿಸಲು ಪೌರಕಾರ್ಮಿಕರು ಯಾವುದೇ ರಕ್ಷಣೆಗಳಿಲ್ಲದೆ ಇಳಿಸಬಾರದು ಎಂಬ ಸರ್ಕಾರದ ಆದೇಶವಿದ್ದರೂ ಆಸ್ಪತ್ರೆಯ ವೈದ್ಯಾಧಿಕಾರಿಗಳ ನಿರ್ಲಕ್ಷ್ಯತನದಿಂದ ಆಸ್ಪತ್ರೆಯ ಇತರ ಸಿಬ್ಬಂದಿ ಸೇರಿ ಇಂತಹ ಕೃತ್ಯ ನಡೆಸಿ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಪಾಲಿಸದೆ ಬೇಜವಾಬ್ದಾರಿತನದಿಂದ ಗುತ್ತಿಗೆದಾರರು ಸೇರಿ ಹಾಗೂ ಹೀನಾಯ ಕೃತ್ಯ ನಡೆಸಿರುವುದು ಖಂಡನೀಯ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ತಪ್ಪಿತಸ್ಥರಿಗೆ ಕಠಿಣ ಕ್ರಮಗಳನ್ನು ಜರುಗಿಸಿ, ಇಂತಹ ಹೀನಾಯ ಕೃತ್ಯಗಳು ರಾಜ್ಯದಲ್ಲಿ ಮತ್ತು ದೇಶದಲ್ಲಿ ಮರುಕಳಿಸದಂತೆ ಎಚ್ಚರವಹಿಸಲು ಸೂಚಿಸಬೇಕಾಗಿದೆ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದಸರಾ ರಜೆ ಪರಿಶೀಲಿಸಲಿ

ಮಾನ್ಯರೆ.

ಈ ಬಾರಿ ದಸರಾ ರಜೆಯನ್ನು ಅಕ್ಟೋಬರ್ 8 ರಿಂದ 24 ರವರೆಗೆ ಸರ್ಕಾರ ಶಾಲಾ ರಜೆ ಘೋಷಣೆ ಮಾಡಿದೆ. ಆಯುಧ ಪೂಜೆ 23, ಜಂಬೂಸವಾರಿ 24, ಸಾಮಾನ್ಯವಾಗಿ ಜಂಬೂಸವಾರಿ ನೋಡಲು ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಕುಟುಂಬ ಸಮೇತರಾಗಿ ಬರುತ್ತಾರೆ. ಆದರೆ ದಸರೆಯ ರಜೆ 24 ರಂದು ಕೊನೆಗೊಂಡು, 25ರಂದು ಶಾಲೆ ಪುನರಾರಂಭವಾಗುತ್ತದೆ. ಜಂಬೂಸವಾರಿ ನೋಡಲು ಬಂದ ಕುಟುಂಬಗಳು ತಮ್ಮ ತಮ್ಮ ಊರಿಗೆ ಹೋಗಲು ಒಂದು ದಿನ ಸಮಯಾವಕಾಶ ಬೇಕಾಗುತ್ತದೆ. 24ರ ದಿನವೇ ತಮ್ಮ ಊರಿಗೆ ಹೋಗಿ 25 ರಂದೇ ಶಾಲೆಗೆ ಮಕ್ಕಳನ್ನು ಕಳುಹಿಸಲು ಶ್ರಮವಾಗಬಹುದು. ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆ ರಜೆಯನ್ನು ಒಮ್ಮೆ ಪರಿಶೀಲಿಸಲಿ

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು

ದಸರಾ ಉದ್ಘಾಟನೆಯಲ್ಲಿ ಮೊಳಗಿದ ಸಂವಿಧಾನದ ಪೀಠಿಕೆ ಗೀತೆ

ಮಾನ್ಯರೆ,

ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉದ್ಘಾಟನಾ ಮಹೋತ್ಸವಕ್ಕೆ ಈ ಬಾರಿ ಸಂಗೀತ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆ ನೀಡಿರುವ ಸಂಗೀತ ಲೋಕದ ಧೃವತಾರೆ ನಾದಬ್ರಹ್ಮ ಡಾ.ಹಂಸಲೇಖ ಅವರಿಂದ ಚಾಲನೆ ಮಾಡಿಸಿರುವುದು ಅರ್ಥಗರ್ಭಿತ. ಜೊತೆಗೆ ತಮ್ಮ ವಿಶೇಷವಾದ ಸಂಗೀತದ ರಸದೌತಣವನ್ನು ದಸರಾ ಹಬ್ಬದಲ್ಲಿ ಸದಾ ನೆನಪು ಇರುವಾಗೇ, ಭಾರತದ ಸರ್ವರನ್ನು ಸದಾ ಸಮಾನತೆಯಿಂದ ಕಾಣಬೇಕು ಎಂದು ಹೇಳುವ ಸಂವಿಧಾನದ ಪೀಠಿಕೆಗೆ ಸಂಗೀತ ಸಂಯೋಜನೆ ಮಾಡಿ ರಾಜ್ಯದ ಮುಖ್ಯಮಂತ್ರಿಯನ್ನು ಒಳಗೊಂಡಂತೆ ಅನೇಕ ಗಣ್ಯರು ಉಪಸ್ಥಿತರಿದ್ದ ದಸರಾ ಮಹೋತ್ಸವದ ವೇದಿಕೆಯಲ್ಲಿ ಸಂವಿಧಾನದ ಪೀಠಿಕೆ ಹಾಡನ್ನು ಹಾಡುವ ಮೂಲಕ ನಾಡಿಗೆ ಉತ್ತಮ ಸಂದೇಶ ಸಾರಿದ ಹಂಸಲೇಖರ ಈ ಕಾರ್ಯಕ್ಕೆ ಇಡೀ ನಾಡು ಮೆಚ್ಚುಗೆ ವ್ಯಕ್ತಪಡಿಸಿದೆ ಹಾಗೂ ಅಭಿನಂದಿಸಿದೆ ಭಾರತದ ಸಂವಿಧಾನವನ್ನು ಇಡೀ ಪ್ರಪಂಚವೇ ಒಪ್ಪಿ ಗೌರವಿಸುವ ಈ ದಿನಗಳಲ್ಲಿ, ಸಂವಿಧಾನದ ಸುಭದ್ರತೆ ಅಡಿಯಲ್ಲಿ ಜೀವಿಸಿ, ಇದರ ಮಹತ್ವವನ್ನು ಅರಿಯದ ಕೆಲವು ಮನಸ್ಸುಗಳು ಹಂಸಲೇಖರ ಈ ಸಂವಿಧಾನದ ಪೀಠಿಕೆ ಗೀತೆಯನ್ನಾದರು ಒಮ್ಮೆ ಕೇಳಿ ಸಂವಿಧಾನದ ಆಶಯವನ್ನು ತಿಳಿದು ಗೌರವಿಸುವಂತಾಗಲಿ.–ಪವನ್ ಜಯರಾಂ, ಸಿದ್ದಯ್ಯನಪುರ, ಚಾ. ನಗರ.

ದಸರಾದಲ್ಲಿ ಇತಿಹಾಸ ಸೃಷ್ಟಿಸಿದ ಅಂಬಾರಿ ಆನೆಗಳು



ಜಯಮಾರ್ತಾಂಡ ದ್ವಾರ



ಬಿಳಿಗಿರಿ ಆನೆಯ ಮೇಲೆ ಮಹಾರಾಜರ ಮೆರವಣಿಗೆ

ಎಂ.ಟಿ.ಯೋಗೇಶ್ ಕುಮಾರ್


ನಾಡಹಬ್ಬ ದಸರಾ ಮಹೋತ್ಸವದಲ್ಲಿ ಗಜಪಡೆಯದ್ದೇ ಕಾರುಬಾರು. ಚಿನ್ನದ ಅಂಬಾರಿ ಹೊತ್ತು ಲಕ್ಷಾಂತರ ಜನರ ನಡುವೆ ಗಾಂಭೀರ್ಯದಿಂದ ಹೆಜ್ಜೆ ಹಾಕುವ ಗಜಪಡೆ ಲುಕ್ಕೆ ಲುಕ್ಕು. ರಾಜರ ಆಳ್ವಿಕೆಯ ಕಾಲದಿಂದಲೂ ಹಲವು ಆನೆಗಳು ಚಿನ್ನದ ಅಂಬಾರಿ ಹೊತ್ತು ತಮ್ಮ ಹೆಸರು ದಸರಾ ಇತಿಹಾಸದಲ್ಲಿ ದಾಖಲಿಸಿವೆ.

ಈ ಹಿಂದಿನಿಂದಲೂ ಜಂಬೂ ಸವಾರಿಯಲ್ಲಿ 10 ರಿಂದ 14 ಆನೆಗಳು ಪಾಲ್ಗೊಳ್ಳುತ್ತಿದ್ದು, ಅದರಲ್ಲಿ ಅಂಬಾರಿ ಹೊರುವ ಆನೆಗೆ ವಿಶೇಷ ಸ್ಥಾನ–ಪ್ರಾಧಾನ್ಯತೆ.

ರಾಜರ ಪ್ರೀತಿಗೆ ಪಾತ್ರವಾದ ಆನೆಗಳು: ರಾಜ ಪರಂಪರೆಯ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿಯಲ್ಲಿ ಮೊಟ್ಟ ಮೊದಲ ಬಾರಿಗೆ ರಾಜರನ್ನು ಹೊತ್ತೊಯ್ದ ಆನೆ **ಜಯಮಾರ್ತಾಂಡ**. ಹಾಗೆಯೇ ಕೊನೆ ಬಾರಿ ರಾಜರನ್ನು ಅಂಬಾರಿಯಲ್ಲಿ ಕರೆದೊಯ್ದ ಆನೆ ಬಿಳಿಗಿರಿ. ನಂತರ ಪ್ರಜಾಪ್ರಭುತ್ವದ ವ್ಯವಸ್ಥೆಯಡಿ ದಸರಾ ಮಹೋತ್ಸವದಲ್ಲಿ ಹಲವು ಆನೆಗಳು ಚಿನ್ನದ ಅಂಬಾರಿ ಹೊತ್ತು ಯಶಸ್ವಿಯಾಗಿ, ಪ್ರಶಂಸೆಗೆ ಪಾತ್ರವಾಗಿವೆ. ಆನೆಗಳ ಮೇಲೆ ರಾಜವಂಶಸ್ಥರಿಗೆ ಅಪಾರ ಪ್ರೀತಿ ಹಾಗೂ ಅರಮನೆಯಲ್ಲಿ ಆನೆ ಬಾಗಿಲು ನಿರ್ಮಿಸಲಾಗಿದೆ. ಅಂಬಾವಿಲಾಸ ಅರಮನೆಯ ದರ್ಬಾರ್ ಹಾಲ್‌ಗೆ ಇರುವಷ್ಟು ಮಹತ್ವ ಆನೆ ಬಾಗಿಲಿಗೂ ಇದೆ ಜಂಬೂಸವಾರಿಯ ಇತಿಹಾಸದಲ್ಲಿ ಅತೀ ಹೆಚ್ಚು ಬಾರಿ ಅಂಬಾರಿ ಹೊತ್ತ ಕೀರ್ತಿ ಜಯಮಾರ್ತಾಂಡನದು. ಒಟ್ಟು 45 ಬಾರಿ ಅಂಬಾರಿ ಹೊತ್ತ ಸಾಧನೆ ಈತನ ಹೆಸರಲ್ಲಿದೆ. ಇದರ ಗೌರವಾರ್ಥ ಅರಮನೆ ಹೆಬ್ಬಾಗಿಲಿಗೆ 'ಜಯಮಾರ್ತಾಂಡ ದ್ವಾರ' ಎಂದು ಹೆಸರಿಡಲಾಗಿದೆ. ಅಲ್ಲದೆ, ಜಯರಾಮ, ಬಲರಾಮ(ರಾಜರ ಕಾಲದಲ್ಲಿದ್ದ ಆನೆಗಳು) ಆನೆಗಳ ಹೆಸರಲ್ಲೂ ದ್ವಾರ ನಿರ್ಮಿಸಲಾಗಿದೆ.

ಜಯಮಾರ್ತಾಂಡ ನಂತರ ವಿಜಯ ಬಹದ್ದೂರ್, ನಂಜುಂಡ, ರಾಮಪ್ರಸಾದ್, ಮೋತಿಲಾಲ್, ಸುಂದರ್‌ರಾಜ್, ಜಯರಾಮ, ಬಲರಾಮ ಇನ್ನಿತರ ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗಿವೆ.

ಆ ನಂತರ ಹೆಸರು ಮಾಡಿದ ಅಂಬಾರಿ ಆನೆಗಳಲ್ಲಿ ಐರಾವತ, ಬಿಳಿಗಿರಿ ಪ್ರಮುಖವಾದವು. ಚಿನ್ನದ ಅಂಬಾರಿಯಲ್ಲಿ ಮೈಸೂರು




'ಎಲಿಫೆಂಟ್ ಬಾಯ್' ಸಿನಿಮಾದಲ್ಲಿ 'ಐರಾವತ' ಆನೆಯೊಂದಿಗೆ ಸಾಬುಬಾಯ್ ಪಾತ್ರಧಾರಿ.

ಅರಸರನ್ನು ಹೊತ್ತು ಸಾಗಿದ್ದ ಈ ಆನೆಗಳು ತಮ್ಮ ಸೌಮ್ಯ ಸ್ವಭಾವದಿಂದಲೇ ಮನಸೂರೆಗೊಂಡಿದ್ದವು. ಐರಾವತ ಆನೆಯೂ 1937ರಲ್ಲಿ ತೆರೆಕಂಡ 'ದಿ ಎಲಿಫೆಂಟ್ ಬಾಯ್' ಸಾಕ್ಷ್ಯಚಿತ್ರದಲ್ಲಿ ಅಭಿನಯಿಸುವ ಮೂಲಕ ವಿಶ್ವದ ಗಮನ ಸೆಳೆದಿತ್ತು. ಈ ಚಿತ್ರದಲ್ಲಿ 13 ವರ್ಷದ ಬಾಲಕ ಮೈಸೂರು ಸಾಬು, ಐರಾವತನೊಂದಿಗೆ ನಟಿಸಿದ ದೃಶ್ಯ ಇಂದಿಗೂ ಮನಸೂರೆಗೊಳ್ಳಲಿದೆ. ಮೈಸೂರು ಸಾಬ್, 7 ವರ್ಷದ ಬಾಲಕನಾಗಿದ್ದಾಗಲೇ ಮಾವುತನಾಗಿದ್ದ. ಐರಾವತ ಹಾಗೂ ಅವನ ಒಡನಾಟ ಕಿರುಚಿತ್ರದಲ್ಲಿ ಮನ ಮುಟ್ಟುವಂತೆ ಮೂಡಿಬಂದಿದೆ.

ಐರಾವತನ ಬಳಿಕ ಅತೀ ಎತ್ತರದ ಆನೆ 'ಬಿಳಿಗಿರಿ' ಜಂಬೂಸವಾರಿಯಲ್ಲಿ ಜವಾಬ್ದಾರಿ ನಿಭಾಯಿಸಿದ್ದ. 1962ರಲ್ಲಿ ಜಯಚಾಮರಾಜ ಒಡೆಯರ್ ಅವರನ್ನು ಕೊನೆಯದಾಗಿ ಬಿಳಿಗಿರಿ ಮೆರವಣಿಗೆಯಲ್ಲಿ ಕರೆದೊಯ್ದಿತ್ತು. ಬಳಿಕ ಪ್ರಜಾಪ್ರಭುತ್ವದ ವ್ಯವಸ್ಥೆಯಿಂದಾಗಿ ಅಂಬಾರಿಯಲ್ಲಿ ರಾಜರು ಕುಳಿತುಕೊಳ್ಳುವ ಪದ್ಧತಿಗೆ ತೆರೆ ಬಿದ್ದು, ಭುವನೇಶ್ವರಿ ವಿಗ್ರಹವಿಟ್ಟು ಮೆರವಣಿಗೆ ನಡೆಸುವ ಪದ್ಧತಿ ಜಾರಿಗೆ ಬಂತು. ಈ ವೇಳೆ ರಾಜೇಂದ್ರ ಅಂಬಾರಿ ಆನೆಯಾಗಿ ಗಮನಾರ್ಹ ಸಾಧನೆ ಮಾಡಿದ. ಜಂಬೂಸವಾರಿ ಮೆರವಣಿಗೆಯೊಂದಿಗೆ ವರನಟ ಡಾ. ರಾಜ್‌ಕುಮಾರ್ ಅಭಿನಯದ 'ಗಂಧದ ಗುಡಿ' ಚಿತ್ರದಲ್ಲೂ ಅಭಿನಯಿಸಿ, ಎಲ್ಲರ ಮನ ಗೆದ್ದಿದೆ. 18 ಬಾರಿ ಅಂಬಾರಿ ಹೊತ್ತಿದ್ದ ದ್ರೋಣ ರಾಜ್ಯದ ಮನೆಮಾತಾಗಿತ್ತು. 'ದಿ ಸೋರ್ಡ್ ಆಫ್ ಟಿಪ್ಪು ಸುಲ್ತಾನ್' ಧಾರಾವಾಹಿಯಲ್ಲಿ ಟಿಪ್ಪು ಪಾತ್ರಧಾರಿಯನ್ನು ಹೊತ್ತೊಯ್ದಿದ್ದ ದ್ರೋಣ 67ನೇ ವಯಸ್ಸಿನಲ್ಲಿ 1997ರ ಡಿ.4ರಂದು ವಿದ್ಯುತ್ ಅವಘಡದಲ್ಲಿ ಮೃತಪಟ್ಟಿದ್ದ.

1998ರಲ್ಲಿ ಒಂದು ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ, 1999ರಲ್ಲಿ ಮಾವುತನ ಬಲಿ ಪಡೆದ ಕಾರಣಕ್ಕೆ ಬಲರಾಮನಿಗೆ ಅಂಬಾರಿ ಹೊರುವ ಜವಾಬ್ದಾರಿ ಸಿಕ್ಕಿತು. 1999ರಿಂದ 2011ರವರೆಗೆ ಬಲರಾಮ ಸತತ 13 ಬಾರಿ ಅಂಬಾರಿ ಹೊತ್ತಿದ್ದ. ಒಂದು ಕಣ್ಣು ಕಾಣಿಸದಿದ್ದರೂ, ಸೌಮ್ಯ ಸ್ವಭಾವಿಯಾದ ಬಲರಾಮ ಅಂಬಾರಿ ಹೊತ್ತು ಸಾಗುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರವಾಗಿತ್ತು. ಅಂಬಾರಿ ಹೊರುವ ಆನೆಗೆ 60 ವರ್ಷ ವಯಸ್ಸಿನ ಮಿತಿಯನ್ನು ಸರ್ಕಾರ ನಿಗದಿಪಡಿಸಿದ ಹಿನ್ನೆಲೆಯಲ್ಲಿ 2012ರಲ್ಲಿ ಬಲರಾಮ ನಿವೃತ್ತಿಯಾದ ನಂತರ ಮತ್ತೆ ಅರ್ಜುನ 8 ಬಾರಿ ಚಿನ್ನದ ಅಂಬಾರಿ ಹೊತ್ತು ಸಾಗಿತ್ತು. 60 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ 2020ರಲ್ಲಿ ನಿವೃತ್ತಿಯಾದ. ಆ ನಂತರ ಬಂದವನೇ ಕರ್ನಾಟಕ ಅರಣ್ಯ ಇಲಾಖೆಯ ಕೂಂಬಿಂಗ್ ಸ್ಟಾರ್ ಅಭಿಮನ್ಯು. ಈ ವರ್ಷ ನಾಲ್ಕನೇ ಬಾರಿ ಅಂಬಾರಿ ಹೊರುತ್ತಿದ್ದು, ಇನ್ನು ಮೂರು ವರ್ಷ ಇದೇ ಜವಾಬ್ದಾರಿ ನಿಭಾಯಿಸಲಿದ್ದಾನೆ. ಇದುವರೆಗೆ 200ಕ್ಕೂ ಹೆಚ್ಚು ಕಾಡಾನೆ ಸೆರೆ ಹಿಡಿದು, 50ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಕೀರ್ತಿ ಅಭಿಮನ್ಯುವಿನದ್ದಾಗಿದೆ. ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ರೌದ್ರಾವತಾರ, ಹಠವಾದಿಯಾಗುವ ಅಭಿಮನ್ಯು, ದಸರೆಗೆ ಬಂದಾಗ ಸಾಧು ಸ್ವಭಾವಿ.




ಅಂಬಾರಿ ಹೊರುತ್ತಿರುವ ದ್ರೋಣ



ಅಂಬಾರಿ ಹೊರುತ್ತಿರುವ ಬಲರಾಮ



ಜಂಬೂಸವಾರಿಯಲ್ಲಿ ಜನಸಾಗರದ ನಡುವೆ ಅಂಬಾರಿ ಹೊತ್ತು ಸಾಗುತ್ತಿರುವ ಅರ್ಜುನ.



ಹಾಲಿ ಜಂಬೂಸವಾರಿಯಲ್ಲಿ ಅಂಬಾರಿ ಹೊರುವ ಜವಾಬ್ದಾರಿ ಹೊತ್ತಿರುವ ಅಭಿಮನ್ಯು

ವಾರಭವಿಷ್ಯ



22.10.2023 ರಿಂದ 28.10.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ತುಲಾ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ತುಲಾ, ಬುಧ–ತುಲಾ, ಗುರು–ಮೇಷ, ಶುಕ್ರ–ಸಿಂಹ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ವೃತ್ತಿಪರ ಉದ್ಯೋಗಗಳು ಹೆಚ್ಚು ಉತ್ಸಾಹದಾಯಕವಾಗಿ ಸಾಗುತ್ತವೆ. ಫರ್ನಿಚರ್, ಅರಣ್ಯ ಉತ್ಪನ್ನಗಳ ವ್ಯಾಪಾರಿಗಳಿಗೆ ಅತಿಶಯವಾದ ಲಾಭವಾಗಲಿದೆ. ಸಹೋದರರೊಂದಿಗಿನ ಆಸ್ತಿ ವಿವಾದಗಳು ಬಗೆಹರಿಯುತ್ತವೆ. ವಾರಮಧ್ಯೆ ಮಾನಸಿಕ ಅಸ್ಥಿರತೆಯಿಂದ ದುಡುಕಿನ ನಿರ್ಣಯ ತೆಗೆದುಕೊಳ್ಳುವಿರಿ. ಅವಸರದಿಂದ ಅವಾಂತರ ತಂದುಕೊಳ್ಳಬೇಡಿ. ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
'ಯದ್ಭಾವಂ ತದ್ಭವತಿ' ಅಂದರೆ ಮನಸ್ಸಿನಂತೆ ಮಹದೇವ. ಸಕಾರಾತ್ಮಕವಾಗಿ ಚಿಂತಿಸಿ, ಪ್ರತಿಫಲವನ್ನು ಸರ್ವಶಕ್ತನಿಗೆ ಬಿಡಿ. ಉದ್ಯೋಗಾಕಾಂಕ್ಷಿಗಳು ಶುಭ ಫಲವನ್ನು ನಿರೀಕ್ಷಿಸಬಹುದು. ಮುಖ್ಯ ಕೆಲಸಗಳು ಮಧ್ಯವರ್ತಿಗಳಿಂದ ಸಂಪನ್ನವಾಗುವುದು. ಹಲವರಿಗೆ ವಿದೇಶ ಪ್ರಯಾಣದ ಯೋಗವಿದೆ. ಗೃಹ ಕಲಹಗಳು ಗೃಹದಲ್ಲೇ ತೀರ್ಮಾನವಾಗಲಿ. ಆರೋಗ್ಯದ ವಿಚಾರದಲ್ಲಿ ಅಜಾಗರೂಕತೆ ಒಳ್ಳೆಯದಲ್ಲ. ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
'ಮಾತು ಬಲ್ಲವ ಮಾಣಿಕ್ಯ ತಂದ' ಎಂಬ ನಾಣ್ನುಡಿ ಇದೆ. ಅದರಂತೆ ಶುಭ ಮಾತುಗಳನ್ನಾಡಿ, ಶುಭ ಫಲವನ್ನು ಹೊಂದುವಿರಿ. ನಿಮ್ಮ ವೃತ್ತಿಪರ ವ್ಯವಹಾರಗಳಿಗೆ ಸಕಾಲದಲ್ಲಿ ಬಂಡವಾಳ ದೊರೆಯಲಿದೆ. ಗುರುಜನರ ಭೇಟಿಯಿಂದ ಮುಂದಿನ ಮಾರ್ಗ ಸುಗಮವಾಗಲಿದೆ. ಸರ್ಕಾರಿ ನೌಕರರಿಗೆ ಹೆಚ್ಚುವರಿ ಜವಾಬ್ದಾರಿಗಳು ಉಂಟಾಗಲಿದೆ. ಸ್ತ್ರೀಯರು ವಸ್ತ್ರಾಭರಣ ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು. ಶ್ರೀ ರಾಮನಾಮ ಜಪಿಸಿ. ಶುಭ ಸಂಖ್ಯೆ–3

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ನಿಮ್ಮ ರಾಶ್ಯಾಧಿಪತಿ ಚಂದ್ರನ ಸಂಚಾರ ಶುಭ ಫಲವನ್ನೇ ನೀಡಲಿದೆ. ದೈವದಲ್ಲಿ ವಿಶ್ವಾಸವಿಡಿ. ನೂತನ ಸುವರ್ಣ, ರಜತ ಪದಾರ್ಥ ಮನೆಗೆ ಬರುವುದು. ವನಿತಾಮಣಿಯರು ಪ್ರೇಮ ಬಂಧನದಲ್ಲಿ ಬೀಳುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ಕಠಿಣ ಅಭ್ಯಾಸದಿಂದ ಅತ್ಯುತ್ತಮ ಫಲವನ್ನು ಹೊಂದುವರು. ಮನೆಯಲ್ಲಿ ಮಂಗಳಕಾರ್ಯ ನಡೆಯಲಿದೆ. ಅಪರಿಚಿತರೊಡನೆ ಹಣಕಾಸಿನ ವ್ಯವಹಾರದಿಂದ ನಷ್ಟ ಸಂಭವ. ಶ್ರೀ ದೇವೀ ಪೂಜೆ. ಶುಭ ಸಂಖ್ಯೆ–8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಗ್ರಹಗಳ ಶುಭ ಸಂಚಲನದ ಫಲವಾಗಿ ಮನೆಯಲ್ಲಿ ಹರುಷದ ವಾತಾವರಣ ಇರುತ್ತದೆ. ದೇವತಾ ಕಾರ್ಯಗಳಲ್ಲಿ ಭಾಗಿಯಾಗಿ ಧನ್ಯತಾ ಭಾವವನ್ನು ಹೊಂದುವಿರಿ. ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮಿಗಳಿಗೆ ಉತ್ತಮ ಆದಾಯವಾಗಲಿದೆ. ಯುವಕ–ಯುವತಿಯರಿಗೆ ಪ್ರೇಮಾಂಕುರವಾಗುವ ಸಂಭವವಿದೆ. ಸರ್ಕಾರಿ ನೌಕರರಿಗೆ ಉನ್ನತ ಪದವಿ ಪ್ರಾಪ್ತವಾದೀತು. ಹಿರಿಯ ಅಧಿಕಾರಿಗಳ ಅನುಗ್ರಹ ದೊರೆಯುವುದು. ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ರಾಹು–ಕೇತುಗಳು ಮಾರಕರಿರುವ ಕಾರಣ ಯಾವುದೇ ವಿವಾದ, ಜಗಳಗಳಿಂದ ದೂರವಿದ್ದರೆ ಕ್ಷೇಮ. ಸರ್ಕಾರಿ ನೌಕರರು ತಮ್ಮ ಸ್ಥಾನವನ್ನು ಒಲ್ಲದ ಮನಸ್ಸಿನಿಂದ ಬಿಟ್ಟುಕೊಡಬೇಕಾದೀತು. ವಾರ ಮಧ್ಯಾನಂತರ ಬರಬೇಕಾದ ಹಣ ವಿಳಂಬವಾಗಿ ಕೈ ಸೇರಲಿದೆ. ಆರ್ಥಿಕ ಕಷ್ಟಗಳು ಸ್ವಲ್ಪ ಮಟ್ಟಿಗೆ ನಿವಾರಣೆ ಆಗುತ್ತದೆ. ಆಸ್ತಿ ವಿಷಯದಲ್ಲಿ ಸಹೋದರರ ಸಹಮತ ನೀಡದೆ ಮನಸ್ಸಿಗೆ ಬೇಸರ. ವಾಯು ಪ್ರಕೋಪ ಕಾಡಬಹುದು. ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–5

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದಾರಂಭ ಆಶಾಪೂರ್ಣವಾಗಿದೆ. ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ನಿಮ್ಮ ಗೌರವ ಪ್ರತಿಷ್ಠೆಗಳು ಹೆಚ್ಚಾಗಲಿದೆ. ವಿದ್ಯಾ ಸಂಸ್ಥೆಗಳಿಗೆ, ಟ್ಯುಟೋರಿಯಲ್ಸ್‌ಗಳಿಗೆ ಬೇಡಿಕೆ ಹೆಚ್ಚಾಗಲಿದೆ. ಗುರುದೃಷ್ಟಿಯ ಪರಿಣಾಮ ಮನೆ ಮುಂದೆ ಚಪ್ಪರ ಹಾಕುವ ಸಂದರ್ಭ ಬಂದೀತು. ಬಂಗಾರ, ಬೆಳ್ಳಿ ವ್ಯಾಪಾರಿಗಳಿಗೆ ವಿಶೇಷವಾದ ಧನಲಾಭವಾಗುವುದು. ವಾರಾಂತ್ಯಕ್ಕೆ ಮನೆಯ ಮಂದಿಯೊಡಗೂಡಿ ಪುಣ್ಯಕ್ಷೇತ್ರಕ್ಕೆ ಭೇಟಿ. ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ–9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು
ಕೈಗೊಂಡ ಕೆಲಸ ಕಾರ್ಯಗಳಲ್ಲಿ ಅಡೆತಡೆಗಳು ಉಂಟಾಗುವುದರಿಂದ ಸಣ್ಣ ಕೈಗಾರಿಕೆ ನಡೆಸುವವರಿಗೆ ಅನಿರೀಕ್ಷಿತ ಬದಲಾವಣೆಗಳು ಉಂಟಾಗುತ್ತವೆ. ರಾಜಕೀಯ ವಲಯಗಳಿಂದ ಆಹ್ವಾನಗಳು ಬಂದರೆ ವಿನಯವಾಗಿ ತಿರಸ್ಕರಿಸಿರಿ. ವಾರದ ಕಡೆಗೆ ಚಂದ್ರ ಮೇಷಕ್ಕೆ ಬಂದಾಗ ನಿಮ್ಮ ಕೆಲಸ ಕಾರ್ಯಗಳು ಬುದ್ಧಿವಂತಿಕೆಯಿಂದ ನಡೆಯುವುದು. ಇತರ ಟೀಕೆಗಳನ್ನು ತಿರಸ್ಕರಿಸಿರಿ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಬೇಡ. ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸಪ್ತಾಹದ ಆದಿಗೆ ವೈಭೋಗದ ಜೀವನ, ಐಷಾರಾಮಿ ವಸ್ತುಗಳನ್ನು ಕೊಳ್ಳುವಿರಿ. ಮೃಷ್ಟಾನ್ನ ಭೋಜನ, ಶಯನ ಸುಖ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಧಾರಾಳವಾಗಿ ಹಣ ಸಂಪಾದನೆ ಮಾಡುವಿರಿ. ಸಾಡೇಸಾತಿ ಶನಿ ಪ್ರಭಾವವೂ ಇದೆ. ನಂಬಲರ್ಹರಲ್ಲದ ವ್ಯಕ್ತಿಗಳೊಂದಿಗೆ ಹಣಕಾಸಿನ ವ್ಯವಹಾರ ಮಾಡದಿರಿ. ಊಟ ವ್ಯತ್ಯಾಸದಿಂದ ಆರೋಗ್ಯ ಕೆಡಬಹುದು. ಮಹಿಳೆಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡುವುದು ಕ್ಷೇಮಕರ. ಶ್ರೀ ದತ್ತಾತ್ರೇಯ ದರ್ಶನ. ಶುಭ ಸಂಖ್ಯೆ–1

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆದಿಗೆ ನಿಮ್ಮ ರಾಶಿಗೆ ಚಂದ್ರನ ಆಗಮನದಿಂದ ಕೆಲವೊಂದು ಆಹ್ಲಾದಕರ ವಿಷಯಗಳು ಘಟಿಸಲಿವೆ. ನೂತನ ಸನ್ಮಿತ್ರರ ಪರಿಚಯವಾಗುವುದು. ನಿಮ್ಮ ಪರೋಪಕಾರ ಬುದ್ಧಿಯಿಂದ ಜನಾದರ ಗಳಿಸುವಿರಿ. ಆಪ್ತ ಬಂಧು–ಬಳಗದವರು ಮನೆಗೆ ಆಗಮಿಸುವರು. ಅವರ ಉಪಚಾರಕ್ಕೆ ಧಾರಾಳ ಹಣ ವ್ಯಯವಾಗುವುದು. ಶನಿ ಬಲವಿಲ್ಲದ ಕಾರಣ ನಿಮ್ಮ ಕೆಲವು ಪ್ರಮುಖ ಯೋಜನೆಗಳನ್ನು ಕೆಲವು ಸಮಯ ಮುಂದೂಡಿ. ಶ್ರೀ ದಶಾಕ್ಷರ ಮಂತ್ರ ಜಪಿಸಿ. ಶುಭ ಸಂಖ್ಯೆ–4


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರದಲ್ಲಿ ಆದಾಯ–ವೆಚ್ಚಗಳು ಸಮನಾಗಿ ಸಾಗುತ್ತವೆ. ಜೊತೆಗೆ ಸಾಲದಾತರ ಒತ್ತಡಗಳು ಕಿರಿಕಿರಿಯನ್ನು ಉಂಟು ಮಾಡುತ್ತವೆ. ವ್ಯವಹಾರಗಳಲ್ಲಿ ಸಮಸ್ಯೆಗಳು ಉದ್ಭವವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ನಿಮ್ಮ ಆಲೋಚನೆಗಳು ಸ್ಥಿರವಾಗಿರುವುದಿಲ್ಲ. ವಾರಾಂತ್ಯಕ್ಕೆ ಗೃಹೋಪಯೋಗಿ ವಸ್ತುಗಳು ಮನೆಗೆ ಬರುವುದು. ಆಫೀಸ್‌ನಲ್ಲಿ ಸಹೋದ್ಯೋಗಿಗಳ ಸಹಕಾರ ದೊರಕುತ್ತದೆ. ಸಡನ್ ಪ್ರಯಾಣಗಳು ಉಂಟಾಗಬಹುದು. ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತ.ದೆ.ದೊ.ಚ.ಚಿ)
ನಿಮ್ಮ ಯೋಜನೆಗಳು ಫಲಕಾರಿಯಾಗಲು ಸ್ವಪ್ರಯತ್ನದ ಜೊತೆಗೆ ದೈವಾನುಕೂಲವೂ ನಿರ್ಮಾಣವಾಗಿದೆ. ನೆರೆ ಹೊರೆಯಲ್ಲಿ ಜನಪ್ರಿಯರೆನಿಸುವಿರಿ. ಗುರುಜನರ ಭೇಟಿಯಿಂದ ಧಾರ್ಮಿಕ ಪ್ರವೃತ್ತಿಯೂ, ತತ್ವಜ್ಞಾನದಲ್ಲಿ ಅಭಿರುಚಿಯೂ ಉಂಟಾಗುವುದು. ಚಿನ್ನ–ಬೆಳ್ಳಿ, ವಜ್ರ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ರಾಜಕಾರಣಿಗಳು ಕಾನೂನು ತೊಡಕಿನಲ್ಲಿ ಸಿಲುಕುವರು. ಶ್ರೀ ಮಂತ್ರಾಲಯ ಪ್ರಭು ಉಪಾಸನೆ. ಶುಭ ಸಂಖ್ಯೆ–6

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜಂಬೂಸವಾರಿಗೆ ಸಿದ್ಧವಾಗುತ್ತಿವೆ ವರ್ಣರಂಜಿತ ಸ್ತಬ್ಧಚಿತ್ರಗಳು










ಮೈಸೂರು, ಅ.21(ಜಿಎ)–ಈ ಬಾರಿ ದಸರಾ ಜಂಬೂಸವಾರಿಯ ಮೆರವಣಿಗೆಯಲ್ಲಿ ಯುನೆಸ್ಕೊದಿಂದ ಗುರುತಿಸಲ್ಪಟ್ಟ ವಿಶ್ವ ಪಾರಂಪರಿಕ ಹೊಯ್ಸಳ ದೇವಸ್ಥಾನ, ಬೇಲೂರು–ಹಳೇಬೀಡು ಮತ್ತು ಸೋಮನಾಥಪುರ ದೇವಾಲಯ ಸೇರಿದಂತೆ 49 ಸ್ತಬ್ಧಚಿತ್ರಗಳು ಆಕರ್ಷಿಸಲಿದ್ದು, ಈಗಾಗಲೇ ನಗರದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಭರದ ಸಿದ್ಧತೆ ನಡೆಯುತ್ತಿದೆ.

ಈ ಬಾರಿ 31 ಜಿಲ್ಲೆಗಳಿಂದ ತಲಾ ಒಂದೊಂದು ಮತ್ತು ವಿವಿಧ ಇಲಾಖೆಗಳಿಂದ 10 ಸ್ತಬ್ಧಚಿತ್ರಗಳು ಸೇರಿದಂತೆ ಒಟ್ಟು 49 ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಲಿವೆ. ಅದರಲ್ಲಿಯೂ ಸರ್ಕಾರದ ಐದು ಗ್ಯಾರಂಟಿ ಯೋಜನೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಭಾರತದ ಸಂವಿಧಾನ ಓದು ಮತ್ತು ಪೀಠಿಕೆ, ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವ ವೈಭವ ಮತ್ತು ಅಂಗಾಂಗ ದಾನ ಕುರಿತಂತೆ ವಿಭಿನ್ನವಾದ ಸ್ತಬ್ಧಚಿತ್ರಗಳು ಗಮನಸೆಳೆಯಲಿವೆ.

ಕಳೆದ 15 ದಿನಗಳಿಂದ ನಗರದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ವಿವಿಧ ಜಿಲ್ಲೆಗಳಿಂದ ಬಂದಿರುವ ಕಲಾವಿದರು ಸ್ತಬ್ಧಚಿತ್ರಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈಗಾಗಲೇ ಶೇ.80ರಷ್ಟು ಕಾರ್ಯ ಮುಕ್ತಾಯವಾಗಿದ್ದು, ಅಕ್ಟೋಬರ್ 23ರ ರಾತ್ರಿ ಅರಮನೆ ಆವರಣಕ್ಕೆ 49 ಸ್ತಬ್ಧಚಿತ್ರಗಳು ಆಗಮಿಸಲಿವೆ.

ಜಿಲ್ಲೆಗಳ ಸ್ತಬ್ಧಚಿತ್ರ: ಮೈಸೂರು ಜಿಲ್ಲೆ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳನ್ನು ಜನರಿಗೆ ತಲುಪಿಸಲಿದ್ದಾರೆ. ಬಾಗಲಕೋಟೆ ಜಿಲ್ಲೆಯವರು ಬಾದಾಮಿ ಚಾಲುಕ್ಯ ರಾಜವಂಶ ಮತ್ತು ಶ್ರೀಬನಶಂಕರಿ ದೇವಿಯನ್ನು ಮೈಸೂರಿಗರಿಗೆ ಪರಿಚಯಿಸಲಿದ್ದಾರೆ. ಬಳ್ಳಾರಿ ವತಿಯಿಂದ ಕುಮಾರಸ್ವಾಮಿ ದೇವಸ್ಥಾನ, ಪಾರ್ವತಿ ದೇವಿ ದೇವಾಲಯ, ಕಸೂತಿ ಮತ್ತು ನಾರಿಹಳ್ಳಿ ಅಣೆಕಟ್ಟು ಪ್ರದರ್ಶಿಸಲಿದ್ದಾರೆ. ಬೆಳಗಾವಿ ವತಿಯಿಂದ ವಿಶ್ವ ಪ್ರಸಿದ್ಧ ಗೋಕಾಕ್ ಫಾಲ್ಸ್, ಸುವರ್ಣಸೌಧ ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣನ ಪರಾಕ್ರಮ ಕಾಣಬಹುದಾಗಿದೆ. ಬೆಂಗಳೂರು ಗ್ರಾಮಾಂತರದ ವತಿಯಿಂದ ದಕ್ಷಿಣ ಕಾಶಿ ಶಿವಗಂಗೆ ದೇವಸ್ಥಾನ ಶಿವ ಕೃಪೆ ತೋರಲಿದ್ದು, ಬೆಂಗಳೂರು ನಗರದ ವತಿಯಿಂದ ಭಾರತದ ಬಾಹ್ಯಕಾಶ ಚಂದ್ರಯಾನ–3ರ ಸಾಧನೆಯನ್ನು ತಿಳಿಸಲಿದ್ದಾರೆ. ಚಾಮರಾಜನಗರದ ವತಿಯಿಂದ ಆನೆ, ಹುಲಿಗಳ ಸಂತೃಪ್ತಿ ಕಾಡಿನ ಜೊತೆಗೆ ಜಾನಪದ ಭಕ್ತಿ ಸುಧೆ ಹರಿಸಲಿದ್ದಾರೆ. ಚಿಕ್ಕಬಳ್ಳಾಪುರ ಏಕತೆಯಲ್ಲಿ ಅನೇಕತೆ, ಚಿತ್ರದುರ್ಗ ಶ್ರೀಗುರು ತಿಪ್ಪೇರುದ್ರ ಸ್ವಾಮಿ ದೇವಾಲಯ, ದಕ್ಷಿಣ ಕನ್ನಡ ಪಿಲಕುಳ ಗುತ್ತಿನಮನೆ–ವಿವೇಕಾನಂದ ತಾರಾಲಯ ಮತ್ತು ಬೀಚ್ ಸರ್ಫಿಂಗ್, ದಾವಣಗೆರೆ ಸಂತ ಸೇವಾಲಾಲ ಹುಟ್ಟೂರು ಮತ್ತು ಬಂಜಾರ ಸಂಪ್ರದಾಯ ತಿಳಿಸಲಿದ್ದಾರೆ.

ಧಾರವಾಡದಿಂದ ಧಾರವಾಡ ಪೇಡಾ, ಧಾರವಾಡಿ ಎಮ್ಮೆ ನಮ್ಮ ಹೆಮ್ಮೆ, ಗದಗ ಸಬರಮತಿ ಆಶ್ರಮ, ಹಾಸನದ ಹಾಸನಾಂಬ ದೇವಾಲಯ, ಹಲ್ಮಿಡಿ, ಈಶ್ವರ ದೇವಸ್ಥಾನ ಮತ್ತು ಅರಸೀಕೆರೆ ಜೇನುಕಲ್ಲು ಸಿದ್ದೇಶ್ವರ ದೇವಾಲಯ, ಹಾವೇರಿ ಶಂಖನಾದ ಮೊಳಗಿಸುತ್ತಿರುವ ಶ್ರೀಕನಕದಾಸರು ಹಾಗೂ ಗದ್ದಿಗೆ ಕಾಗಿನೆಲೆ, ಕಲ್ಬುರ್ಗಿ ರಾಜವಂಶಸ್ಥರ ಕೋಟೆ, ಚಿಂಚೋಳಿ ಅರಣ್ಯ ಪ್ರದೇಶ ವನ್ಯಜೀವಿಧಾಮ, ಕೊಡಗಿನ ಪ್ರೇಕ್ಷಣೀಯ ತಾಣಗಳು, ಕೋಲಾರ ನರೇಗಾ ಯೋಜನೆಯಡಿ ವೀರಗಲ್ಲುಗಳ ಉತ್ಖನನ ಹಾಗೂ ಮರುಸ್ಥಾಪನೆ, ಕೊಪ್ಪಳ ಕಿನ್ನಾಳ ಕಲೆ ಮತ್ತು ಕೈಮಗ್ಗ, ಮಂಡ್ಯ ಸಾಂಪ್ರದಾಯಿಕ ಉದ್ಯಮ ಅಲೆಮನೆ, ರಾಯಚೂರು ನವರಂಗ ದರ್ವಾಜ, ರಾಮನಗರ ಚನ್ನಪಟ್ಟಣದ ಗೊಂಬೆಗಳು, ಶಿವಮೊಗ್ಗ ಕುವೆಂಪು ಅವರ ಪ್ರತಿಮೆ, ಕುಪ್ಪಳ್ಳಿ, ಗುಡವಿ ಪಕ್ಷಿಧಾಮ, ನಗರ ಕೋಟೆ, ಹುಲಿ–ಸಿಂಹಧಾಮ, ಶಿವಪ್ಪ ನಾಯಕ ಪ್ರತಿಮೆ, ತುಮಕೂರು ಮೂಡಲಪಾಯ ಯಕ್ಷಗಾನ ತವರು, ಉಡುಪಿ ತ್ಯಾಜ್ಯ ಮುಕ್ತ ಮತ್ಸ್ಯ ಸ್ನೇಹಿ ಸಮುದ್ರ, ಉತ್ತರ ಕನ್ನಡ ಶರಾವತಿ ಮಡಿಲಲ್ಲಿ ವನ್ಯಜೀವಿ–ಸಿಂಹ ಬಾಲದ ಸಿಂಗಲೀಕಗಳ ಸಂರಕ್ಷಣೆ ಅಭಿಯಾನ, ವಿಜಯಪುರ ಜ್ಞಾನ ಯೋಗಾಶ್ರಮದ ಪೂಜ್ಯಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯನಗರ ವಿಠಲ ದೇವಾಲಯ ಮತ್ತು ಯಾದಗಿರಿ ಜಿಲ್ಲೆ ವತಿಯಿಂದ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಸ್ತಬ್ಧಚಿತ್ರ ಕಾಣಬಹುದಾಗಿದೆ.

ಇಲಾಖೆಗಳ ಸ್ತಬ್ಧಚಿತ್ರ : ಸ್ತಬ್ಧಚಿತ್ರ ಉಪಸಮಿತಿಯಿಂದ ಅರಮನೆ ವಾದ್ಯಗೋಷ್ಠಿ ಮತ್ತು ಯುನೆಸ್ಕೊದಿಂದ ಗುರುತಿಸಲ್ಪಟ್ಟ ವಿಶ್ವ ಪಾರಂಪರಿಕ ಹೊಯ್ಸಳ ದೇವಸ್ಥಾನ, ಬೇಲೂರು–ಹಳೆಬೀಡು ಮತ್ತು ಸೋಮನಾಥಪುರ ದೇವಾಲಯ, ಸಮಾಜ ಕಲ್ಯಾಣ ಇಲಾಖೆ ಸಂವಿಧಾನ ಪೀಠಿಕೆ ಜೊತೆಗೆ ಇಲಾಖೆಯೋಜನೆಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಸರ್ಕಾರದ ಗ್ಯಾರಂಟಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗೃಹಲಕ್ಷ್ಮಿ ಯೋಜನೆ ಹಾಗೂ ಇಲಾಖೆ ಇತರೆ ಯೋಜನೆಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಹಾಗೂ ಇಲಾಖೆಗೆ ಸಂಬಂಧಿಸಿದಂತೆ ಇತರೆ ಯೋಜನೆಗಳು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಸಿವಿನಿಂದ ಯಾರು ಬಳಲಬಾರದು ಅದಕ್ಕಾಗಿ ಬಂದಿದೆ ಅನ್ನಭಾಗ್ಯ, ಕರ್ನಾಟಕ ಪೊಲೀಸ್ ಇಲಾಖೆ ಶೌರ್ಯ–ನ್ಯಾಯ–ರಕ್ಷೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಂಗಾಂಗ ದಾನ ಮತ್ತು ಆಶಾಕಿರಣ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ಕ್ಷೀರ ಭಾಗ್ಯ ಯೋಜನೆಯನ್ನು ಪ್ರದರ್ಶಿಸಲಿದ್ದಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗೃಹಜ್ಯೋತಿ, ಕೃಷಿ ಸೋಲಾರ್ ಸೆಟ್, ಗ್ರಾಹಕರ ಸಲಹಾ ಸಮಿತಿ, ಇ.ವಿ.ಚಾರ್ಜರ್ ಪಾಯಿಂಟ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ(1924–2024) ಶತಮಾನೋತ್ಸವ, ಪ್ರವಾಸೋದ್ಯಮ ಇಲಾಖೆ ಲಕ್ಕುಂಡಿ ಬ್ರಹ್ಮ ಜಿನಾಲಯ, ಕಾವೇರಿ ನೀರಾವರಿ ನಿಗಮ ಸಹಭಾಗಿತ್ವದ ನೀರಾವರಿ ನಿರ್ವಹಣಾ ಪದ್ಧತಿ, ವಾಕ್–ಶ್ರವಣ ಸಂಸ್ಥೆ ವಾಕ್–ಶ್ರವಣ ದೋಷದಿಂದ ಉತ್ತಮ ಜೀವನದೆಡೆಗೆ ಆಯುಷ್ ಕೊಡುಗೆ, ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಲಿಡ್ಕರ್ ಅಪ್ಪಟ ಚರ್ಮ ಉತ್ಪನ್ನಗಳ ಆಗರ ಮತ್ತು ಚರ್ಮ ಕುಶಲಕರ್ಮಿಗಳ ಅಭಿವೃದ್ಧಿಯ ಆಶಾಕಿರಣ ಸ್ತಬ್ಧಚಿತ್ರಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಗಮನ ಸೆಳೆಯಲಿವೆ.

ನೀರು ಸರಬರಾಜು ಅನುದಾನಕ್ಕೆ ಅನುಮೋದನೆ ನೀಡಲು ಸಂಸದ ಪ್ರತಾಪ್ ಸಿಂಹ ಮನವಿ



ಮೈಸೂರು, ಅ.21–ಮೈಸೂರಿನ ಮುಡಾ ಮತ್ತು ಖಾಸಗಿ ಬಡಾವಣೆಗಳ ಮನೆಗಳಿಗೆ ಕಬಿನಿ ಮೂಲದಿಂದ ನೀರು ಸರಬರಾಜು ಮಾಡುವ ಬಿದರಗೂಡು ಯೋಜನೆ ಸಾಮರ್ಥ್ಯವನ್ನು 60 ಎಂಎಲ್‌ಡಿಯಿಂದ 180 ಎಂಎಲ್‌ಡಿಗೆ ಮೇಲ್ದರ್ಜೆಗೇರಿಸಲು ಮುಡಾದಿಂದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅನುದಾನ ಬಿಡುಗಡೆ ಮಾಡಲು ಅನುಮೋದನೆ ನೀಡಬೇಕೆಂದು ಸಂಸದ ಪ್ರತಾಪ್‌ಸಿಂಹ ಅವರು ರಾಜ್ಯ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದ್ದಾರೆ. ಮುಡಾ ವ್ಯಾಪ್ತಿಗೆ ಬರುವ ಮುಡಾ ಹಾಗೂ ಖಾಸಗಿ ಬಡಾವಣೆಗಳ ಸರಿ ಸುಮಾರು 1.03 ಲಕ್ಷ ನಿವೇಶನಗಳಿಗೆ ಕಬಿನಿ ಮೂಲದಿಂದ ಸಗಟು ನೀರು ಸರಬರಾಜು ಮಾಡಲು ಬಿದರಗೂಡು ಯೋಜನೆಯ ಸಾಮರ್ಥ್ಯವನ್ನು 60 ಎಂಎಲ್‌ಡಿಯಿಂದ 180 ಎಂಎಲ್‌ಡಿಗೆ ಮೇಲ್ದರ್ಜೆಗೇರಿಸುವುದು ಅತ್ಯಗತ್ಯವಾಗಿದ್ದು, ಈ ಕಾಮಗಾರಿಗೆ 150 ಕೋಟಿ ರೂ.ಗಳನ್ನು ಅಮೃತ್ 1.0 ಯೋಜನೆಯಡಿ ಬಾಕಿ ಉಳಿದಿರುವ ಅನುದಾನದಡಿ ಅಥವಾ ಸರ್ಕಾರದ ಇತರ ಅನುದಾನದಡಿ ಬಿಡುಗಡೆ ಮಾಡಬೇಕೆಂದು ಕೋರಿದ್ದಾರೆ.

ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ಹಸುವಿಗೆ ಪ್ರಥಮ ಬಹುಮಾನ

ಮೈಸೂರು,ಅ.21(ಎಸ್‌ಪಿಎನ್)– ಮೈಸೂರು ದಸರಾ ಪ್ರಯುಕ್ತ ರೈತ ದಸರಾ ಉಪ ಸಮಿತಿಯಿಂದ ಏರ್ಪಡಿಸಲಾಗಿದ್ದ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರು ಕಾಮಾಕ್ಷಿಪಾಳ್ಯದ ನಿವಾಸಿ ಗೀತಾ ಚೌಡಯ್ಯ ಅವರು 46.690 ಕೆಜಿ ಹಾಲು ಕರೆದು ಪ್ರಥಮ ಸ್ಥಾನಗಳಿಸಿದ್ದು, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಮೈಸೂರು ಜೆ.ಕೆ.ಮೈದಾನದಲ್ಲಿ ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ರೈತ ದಸರಾ ಉಪಸಮಿತಿಯಿಂದ ಏರ್ಪಡಿಸಿದ್ದ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಗೀತಾ ಚೌಡಯ್ಯ ಅವರು, ಶನಿವಾರ ಬೆಳಗ್ಗೆ 24.850 ಕೆಜಿ ಹಾಗೂ ಸಂಜೆ 21.840 ಕೆ.ಜಿ. ಹಾಲು ಕರೆದು ಪ್ರಥಮ ಸ್ಥಾನ ಹಾಗೂ 50 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಮಂಡ್ಯ ತಾಲೂಕಿನ ದುದ್ದ ಗ್ರಾಮದ ಕೆ.ಎಸ್.ಗೋಪಾಲಕೃಷ್ಣ ಬೆಳಿಗ್ಗೆ 18,760 ಕೆಜಿ ಮತ್ತು ಸಂಜೆ 17,690 ಕೆಜಿ ಸೇರಿ ಒಟ್ಟು 36,450 ಕೆಜಿ ಕರೆದು ದ್ವಿತೀಯ ಸ್ಥಾನ ಹಾಗೂ 40 ಸಾವಿರ ನಗದು ಪಡೆದರು.

ಮೈಸೂರು ದೇವರಾಜ ಮೊಹಲ್ಲಾ ಕಾಟಪ್ಪ ಗರಡಿ ರಸ್ತೆಯ ಸಾರವ್ ವಿನೋದ್ ರವೀಂದ್ರ ಡಿ. ಬೆಳಗ್ಗೆ 17, 830 ಕೆಜಿ ಮತ್ತು ಸಂಜೆ 16,330 ಕೆಜಿ ಸೇರಿದಂತೆ ಒಟ್ಟು 34,160 ಕೆಜಿ ಹಾಲು ಕರೆದು ತೃತೀಯ ಸ್ಥಾನ ಮತ್ತು 30 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಬೆಂಗಳೂರು ಆನೇಕಲ್ ತಾಲೂಕಿನ ನಿವಾಸಿ ಶ್ರೀನಿವಾಸ್ ಪಿ. ಹೊಂದಲ ಘಟ್ಟ ಅವರು ಬೆಳಗ್ಗೆ 18.930 ಕೆಜಿ ಮತ್ತು ಸಂಜೆ 15.140 ಕೆಜಿ–ಒಟ್ಟು 34.070 ಹಾಲು ಕರೆದು 4ನೇ ಸ್ಥಾನ ಮತ್ತು 10 ಸಾವಿರ ನಗದು ಬಹುಮಾನ ಪಡೆದಿದ್ದಾರೆ.



ಮೈಸೂರು ದಸರಾ ಮಹೋತ್ಸವ–2023ರ ವಿಶೇಷ

ಈ ಸ್ಪರ್ಧೆಯಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ಹುಲ್ಲಹಳ್ಳಿಯ ಕುಮಾರ್, ಹಾಸನ ಜಿಲ್ಲೆ ಹಿರಿಸಾವೆ ತೋಟಿ ಗ್ರಾಮದ ಮನ್ವಿತ್‌ಗೌಡ ಬಾಬು, ನಂಜನಗೂಡು ತಾಲೂಕಿನ ತಾಂಡವಪುರದ ಬಿ.ಪುಟ್ಟಯ್ಯ, ಶ್ರೀರಂಗಪಟ್ಟಣದ ಚಂದಗಾಲ ನಿವಾಸಿ ವರದರಾಜು, ಚಾಮರಾಜನಗರ ಜಿಲ್ಲೆಯ ಕಾಗಲವಾಡಿಯ ಮುರುಗೇಶ್, ಬೆಂಗಳೂರು ಜಯ ನಗರ(ಪುಟ್ಟಯ್ಯನಪಾಳ್ಯ)ದ ಯದುನಂದನ್ ಹಾಲು ಕರೆದು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಪ್ರಶಸ್ತಿ ವಿತರಿಸಿದ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಮಾತನಾಡಿ, ಪಶು ಸಂಗೋಪನೆ ಮತ್ತು ರೈತರಿಗೆ ಉತ್ತೇಜನ ನೀಡಲು ದಸರಾ ಮಹೋತ್ಸವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು,ಅದರಲ್ಲಿ ಹಾಲು ಕರೆಯುವ ಸ್ಪರ್ಧೆ ವಿಶೇಷವಾದದ್ದು. ಹಾಗಾಗಿ ಮುಂದಿನ ಬಾರಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹೆಚ್ಚಿನ ನಗದು ಬಹುಮಾನವನ್ನು ನೀಡಿ ಭಾಗವಹಿಸಲು ಉತ್ತೇಜನ ನೀಡಲಾಗುವುದು ಎಂದು ತಿಳಿಸಿದರು.

ಪಶುಸಂಗೋಪನೆಯನ್ನು ಉತ್ತೇಜಿಸಲು ಹಾಲು ಕರೆಯುವ ಸ್ಪರ್ಧೆ ಏರ್ಪಡಿಸಲಾಗಿದ್ದು, ನಗದು ಬಹುಮಾನ ಬಹಳ ಕಡಿಮೆಯಾಗಿದೆ. ಮುಂದಿನ ಬಾರಿ ನಗದು ಬಹುಮಾನವನ್ನು ಹೆಚ್ಚು ಮಾಡಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರಿಗೆ ಉತ್ತೇಜಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಶುಪಾಲನಾ ಇಲಾಖೆ ಉಪನಿರ್ದೇಶಕ, ನಾಗರಾಜು, ಜಿಪಂ ಕಾರ್ಯದರ್ಶಿ ಕೃಷ್ಣಂರಾಜು, ರೈತ ದಸರಾ ಉಪಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೈಸೂರಲ್ಲಿ ಆಯುಧ ಪೂಜೆ ಸಡಗರ; ವ್ಯಾಪಾರ ಬಲು ಜೋರು

- ಈ ಬಾರಿ ಹೂ, ಬೂದಕುಂಬಳಕಾಯಿ ಬೆಲೆ ಅಗ್ಗ
- ಜೆ.ಕೆ.ಮೈದಾನದ ಸುತ್ತಮುತ್ತ ಜಾತ್ರೆ ವಾತಾವರಣ
- ವಾಹನಗಳ ಸರ್ವೀಸ್ ದರ ತರಾವರಿ ವಸೂಲಿ
- ಮೆಕ್ಯಾನಿಕ್‌ಗಳಿಗೆ ಡಿಮ್ಯಾಂಡ್; ಅಂಗಡಿ, ಕಾರ್ಖಾನೆಗಳಲ್ಲಿ ಸ್ವಚ್ಛತಾ ಕಾರ್ಯ




ಮೈಸೂರು, ಅ.21(ಬಿಎಲ್‌ಯು)– ಮೈಸೂರಿನಲ್ಲಿ ಆಯುಧ ಪೂಜೆಯ ಸಂಭ್ರಮ ಮನೆ ಮಾಡಿದ್ದು, ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಆದರೆ ಈ ಬಾರಿ ಹೂವು, ಬೂದಕುಂಬಳಕಾಯಿ ಬೆಲೆ ಕಡಿಮೆಯಾಗಿದ್ದು, ಕಾರು, ಬೈಕ್ ಸರ್ವಿಸ್ ಸೆಂಟರ್‌ಗಳಲ್ಲಿ ತರಾವರಿ ದರ ವಸೂಲಿ ಮಾಡಲಾಗುತ್ತಿದೆ.

ಈ ಬಾರಿ ಹೂವು ಸೇರಿದಂತೆ ಕೆಲವು ವಸ್ತುಗಳ ಬೆಲೆ ಕಡಿಮೆಯಾಗಿರುವುದು ಅಚ್ಚರಿ ಮೂಡಿಸಿದೆ. ಕಳೆದ ವರ್ಷ 150 ರೂ.ಮೇಲ್ಪಟ್ಟು ಮಾರಾಟವಾಗುತ್ತಿದ್ದ ಬೂದ ಕುಂಬಳಕಾಯಿ ಈ ಬಾರಿ 50ರಿಂದ 60 ರೂ.ಗೆ ಮಾರಾಟವಾಗುತ್ತಿದೆ. ಸೇವಂತಿಗೆ ಹೂವು 30ರಿಂದ 50 ರೂ.ಗೆ ಮಾರಾಟವಾಗುತ್ತಿದೆ. ಆದರೆ ಕಡ್ಲೆಪುರಿ, ಬೂಂದಿ, ಖಾರ ಮತ್ತು ಸಿಹಿ ತಿಂಡಿ ಹಾಗೂ ಪೂಜಾ ಸಾಮಗ್ರಿಗಳ ಬೆಲೆ ಯಥಾಸ್ಥಿತಿಯಲ್ಲಿದೆ.

ದಸರಾ ಹಬ್ಬದ ಶರನ್ನವರಾತ್ರಿ ಸಂದರ್ಭದಲ್ಲಿ ನಡೆಯುವ ಆಯುಧಪೂಜೆಗೆ ಧಾರ್ಮಿಕ ಕಾರಣವಿದೆ. ಹಾಗೆಯೇ ರಾಮಾಯಣ ಹಾಗೂ ಮಹಾಭಾರತ ಪೌರಾಣಿಕತೆಯ ಉಲ್ಲೇಖ ಕೂಡ ಇದೆ. ಜನರು ತಮ್ಮ ಬದುಕಲ್ಲಿ ಬಳಸುವಂತಹ ಆಯುಧಗಳು, ವಾದ್ಯಗಳು, ಉಪಕರಣಗಳು ಸೇರಿದಂತೆ ಹಲವು ವಸ್ತುಗಳನ್ನು ಶರನ್ನವರಾತ್ರಿಯಲ್ಲಿ ಪೂಜಿಸಿದರೆ ಪ್ರತಿಯೊಂದು ಕೆಲಸಗಳಲ್ಲಿ ಯಶಸ್ಸು ದೊರೆಯುತ್ತದೆ ಎಂಬ ಅಚಲ ವಿಶ್ವಾಸ, ನಂಬಿಕೆ ಕಾರಣದಿಂದ ಆಯುಧ ಪೂಜೆಯನ್ನು ಭಕ್ತಿ ಭಾವದಿಂದ ಆಚರಿಸಲಾಗುತ್ತದೆ.

ಅನಾದಿ ಕಾಲದಿಂದಲೂ ಆಯುಧಪೂಜೆ ನೆರವೇರಿಸುತ್ತಾ ಬರಲಾಗುತ್ತಿದೆ. ಆದರೆ ಮೈಸೂರಿನಲ್ಲಿ ದಸರಾ ವೇಳೆ ನಡೆಯುವ ಆಯುಧಪೂಜೆಗೆ ಬಹಳ ಮಹತ್ವವಿದೆ. ಮೈಸೂರು ಅರಮನೆಯಲ್ಲಿ ರಾಜವಂಶಸ್ಥರು ಧಾರ್ಮಿಕ ವಿಧಿ ವಿಧಾನಗಳಂತೆ ಆಯುಧಪೂಜೆ ನೆರವೇರಿಸುತ್ತಾರೆ. ಅದೇ ಪದ್ಧತಿಯಲ್ಲಿ ಜನರು ಸಾಗುತ್ತಿದ್ದಾರೆ. ಮೈಸೂರಿನಲ್ಲಿ ಆಯುಧಪೂಜೆಯ ಸಂಭ್ರಮ ಮನೆ ಮಾಡಿದ್ದು, ಆಯುಧಪೂಜೆಗಾಗಿ ಅವಶ್ಯವಿರುವ ಹೂವು, ಹಣ್ಣು, ಬೂದಕುಂಬಳಕಾಯಿ ಇತರೆ ಪೂಜಾ ಸಾಮಗ್ರಿಗಳ ಮಾರಾಟ ಭರದಿಂದ ಸಾಗಿದೆ.

ಮೈಸೂರಿನ ಜೆ.ಕೆ.ಮೈದಾನದ ಬಳಿ ಜಾತ್ರೆಯ ವಾತಾವರಣ ನಿರ್ಮಾಣವಾಗಿದೆ. ಫುಟ್‌ಪಾತ್‌ನಲ್ಲಿ ಹೂವು, ಹಣ್ಣು, ಬೂದಕುಂಬಳಕಾಯಿ, ಕಡ್ಲೆಪುರಿ, ಬೂಂದಿ, ಸಿಹಿ ತಿಂಡಿ, ಪೂಜಾ ಸಾಮಗ್ರಿ ಸೇರಿದಂತೆ ಇತರೆ ವಸ್ತುಗಳ ಮಾರಾಟ ಜೋರಾಗಿ ನಡೆಯುತ್ತಿದೆ. ವಾಹನಗಳ ಸ್ವಚ್ಛಗೊಳಿಸುವ ಸರ್ವಿಸ್ ಸೆಂಟರ್‌ಗಳಲ್ಲಿ ಬೆಲೆ ಸ್ವಲ್ಪ ಹೆಚ್ಚಾಗಿದೆ. ಕಾರು, ಬೈಕ್, ಸ್ಕೂಟರ್ ಸೇರಿದಂತೆ ಇತರೆ ವಾಹನಗಳನ್ನು ಸರ್ವಿಸ್ ಚಾರ್ಜ್ ಏರಿಕೆ ಮಾಡಲಾಗಿದೆ. 450 ರೂ. ಇದ್ದ ಕಾರ್ ವಾಶಿಂಗ್ ಈಗ 550 ರೂ.ನಿಂದ 650 ರೂ.ಗೆ ಏರಿಕೆಯಾಗಿದೆ. ಬೈಕ್ ಮತ್ತು ಸ್ಕೂಟರ್ ವಾಶಿಂಗ್ 100 ರೂ. ಇರುವುದು ಈಗ 150 ರೂ.ಗೆ ಏರಿಕೆಯಾಗಿದೆ. ಜನ ಹೆಚ್ಚಾಗಿ ವಾಹನಗಳ ರಿಪೇರಿಯೊಂದಿಗೆ ವಾಶಿಂಗ್ ಮಾಡಿಸುತ್ತಿರುವ ಕಾರಣ ಆಟೋಮೊಬೈಲ್ ಅಂಗಡಿಗಳಲ್ಲಿ ವಸ್ತುಗಳ ಖರೀದಿಗಾಗಿ ಜನರು ಕಿಕ್ಕಿರಿದಿದ್ದಾರೆ. ಮೆಕ್ಯಾನಿಕ್‌ಗಳಿಗಂತೂ ಬಿಡುವಿಲ್ಲದ ಕೆಲಸವಿದ್ದು, ಆದಾಯ ಹೆಚ್ಚಾಗಿದೆ. ಇದರಿಂದ ಮೆಕ್ಯಾನಿಕ್ ಶಾಪ್, ವಾಷಿಂಗ್ ಸರ್ವಿಸ್ ಸೆಂಟರ್ ಹಾಗೂ ಆಟೋಮೊಬೈಲ್ ಅಂಗಡಿಯವರಿಗೆ ಸುಗ್ಗಿಯಾಗಿದೆ.

ಅಂಗಡಿ, ಫ್ಯಾಕ್ಟರಿ ಸೇರಿದಂತೆ ಹಲವು ಕಡೆ ಆಯುಧಪೂಜೆ ತರುವಾಯ ಖಾರ ಹಾಗೂ ಸಿಹಿ ತಿಂಡಿ ಹಂಚುವ ಕಾರಣ ಈಗಾಗಲೇ ಸ್ವೀಟ್ಸ್ ಅಂಗಡಿಗಳಿಗೆ ಆರ್ಡರ್ ನೀಡಲಾಗಿದೆ. ಕೆಲವು ಕಡೆ ನೌಕರರಿಗೆ ಹೊಸ ಬಟ್ಟೆ ಕೊಡುವುದರಿಂದ ಬಟ್ಟೆ ಅಂಗಡಿಗಳಲ್ಲಿ ವ್ಯಾಪಾರ ಜೋರಾಗಿದೆ.

ಅಂಗಡಿ, ಕಾರ್ಖಾನೆ ಸೇರಿದಂತೆ ಹಲವು ವ್ಯಾಪಾರ–ವಹಿವಾಟು ನಡೆಸುವ ಸ್ಥಳಗಳಲ್ಲಿ ಆಯುಧ ಪೂಜೆಗಾಗಿ ಸ್ವಚ್ಛಗೊಳಿಸುವ ಕಾರ್ಯ ಚುರುಕಿನಿಂದ ಸಾಗಿದೆ. ಆಯುಧ ಪೂಜೆ ವೇಳೆ ನೌಕರರಿಗೆ ಉಡುಗೊರೆ, ಬೋನಸ್ ನೀಡುವುದು ಕೆಲವು ಮಾಲೀಕರು ನಡೆಸಿಕೊಂಡು ಬಂದಿರುವ ಸಂಪ್ರದಾಯ ಮುಂದುವರೆದಿದೆ. ಮೈಸೂರಿನಲ್ಲಿ ಒಂದೆಡೆ ಆಯುಧ ಪೂಜೆಯ ಸಂಭ್ರಮ ಮನೆ ಮಾಡಿದ್ದರೆ, ಮತ್ತೊಂದೆಡೆ ವಿಜಯದಶಮಿ ದಿನದಂದು ನಡೆಯುವ ಜಂಬೂಸವಾರಿಗೆ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ.

ನಕಲಿ ವೋಟರ್ ಐಡಿ ತಯಾರಿಕೆ ಆರೋಪ: ಸಚಿವ ಭೈರತಿ ಸುರೇಶ್ ಆಪ್ತ ಸೇರಿ ಮೂವರು ಸಿಸಿಬಿ ವಶಕ್ಕೆ

ಬೆಂಗಳೂರು: ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ವೇಳೆ ನಕಲಿ ವೋಟರ್ ಐಡಿ ತಯಾರಿಸುತ್ತಿದ್ದ ಆರೋಪದ ಮೇರೆಗೆ ಸಚಿವ ಭೈರತಿ ಸುರೇಶ್ ಆಪ್ತ ಸೇರಿ ಮೂವರನ್ನು ಸಿಸಿಬಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಭೈರತಿ ಸುರೇಶ್ ಆಪ್ತನಾದ ಮೌನೇಶ್ ಕುಮಾರ್‌ನನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೇ ಈತನ ಜೊತೆಗೆ ಶಾಮೀಲಾಗಿದ್ದ ಭಗತ್ ಹಾಗೂ ರಾಘವೇಂದ್ರ ಎಂಬವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳು ಹಣ ಕೊಟ್ಟರೆ ನಕಲಿ ವೋಟರ್ ಐಡಿ, ಆಧಾರ್ ಕಾರ್ಡ್ ಹಾಗೂ ಡಿಎಲ್‌ನ್ನು ಮಾಡಿಕೊಡುತ್ತಿದ್ದರು ಎಂದು ಆರೋಪಿಸಲಾಗಿದೆ. ಆರೋಪಿಗಳು ಯಾವುದೇ ಕ್ಷೇತ್ರದ ವೋಟರ್ ಐಡಿ ಹಾಗೂ ಯಾವುದೇ ಆಧಾರ್ ಕೇಳಿದರೂ ಮಾಡಿಕೊಡುತ್ತಿದ್ದರು. ಈ ಬಗ್ಗೆ ಮಾಹಿತಿ ಪಡೆದು ಕನಕನಗರದಲ್ಲಿರುವ ಎಂಎಸ್‌ಎಲ್ ಟೆಕ್ನೊ ಸಲ್ಯೂಷನ್ ಕಂಪನಿ ಮೇಲೆ ದಾಳಿ ನಡೆಸಲಾಗಿದೆ. ಪೊಲೀಸರು ಆರೋಪಿಗಳನ್ನು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಶೇಷಚೇತನರಿಗೆ ಜಂಬೂಸವಾರಿ ವೀಕ್ಷಿಸಲು ಆಸನ ವ್ಯವಸ್ಥೆ

ಮೈಸೂರು, ಅ.21– ಮೈಸೂರು ದಸರಾ ಹಬ್ಬ ಜಂಬೂಸವಾರಿ ಪ್ರಯುಕ್ತ ಅ.24ರಂದು ಮೈಸೂರು ನಗರದ ನ್ಯೂ ಸಯ್ಯಾಜಿರಾವ್ ರಸ್ತೆ ಬಂಬೂಬಜಾರ್‌ನಲ್ಲಿರುವ ಸರ್ಕಾರಿ ವಿಶೇಷಚೇತನ ಮಕ್ಕಳ ಶಾಲೆಯಲ್ಲಿ ಸುಮಾರು 200 ವಿಶೇಷಚೇತನರಿದ್ದು, ಈ ಶಾಲೆಯ ಮುಂಭಾಗದ ಫುಟ್‌ಪಾತ್‌ನಲ್ಲಿ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ.




ಸೈಕಲ್



ಸುಗಂಧ ಪ್ರಾರ್ಥನೆ ಪ್ರಪಂಚ ಯಾನ...




'ಸೈಕಲ್' ಪ್ಯೂರ್ ಅಗರ್‌ಬತ್ತಿ ಹೆಸರು ಬರೀ ರಾಜ್ಯವಲ್ಲ, ದೇಶವಲ್ಲ, ಪ್ರಪಂಚದಾದ್ಯಂತ ಜನರ ಮನಸ್ಸಿನಲ್ಲಿ ಹಾಸುಹೊಕ್ಕಾಗಿದೆ. ಈ ಬಾರಿಯ ನಾಡಹಬ್ಬ ಮೈಸೂರು ದಸರಾದ ಪ್ಲಾಟಿನಂ ಪ್ರಾಯೋಜಕತ್ವ ಪಡೆದಿದೆ. ಈ ಸುಗಂಧಪೂರಿತ ಅಗರ್‌ಬತ್ತಿಯನ್ನು ಪರಿಚಯಿಸಿದ ಎನ್.ರಂಗರಾವ್ ಅಂಡ್ ಸನ್ಸ್ ಸಂಸ್ಥೆಯ ಹುಟ್ಟು ಹಾಗೂ ಬೆಳವಣಿಗೆಯೇ ಒಂದು ರೋಚಕ. ಬಡ ಕುಟುಂಬದ ಎನ್.ರಂಗರಾವ್ ಅವರು ಆರಂಭಿಸಿದ ಈ ಉದ್ಯಮ, ಮೂರು ತಲೆಮಾರಿನವರ ಶ್ರದ್ಧಾಪೂರ್ವಕ ಪರಿಶ್ರಮದಿಂದ ದಿನೇ ದಿನೆ ಬೃಹತ್ತಾಗಿ ಬೆಳೆದು ಈಗ ಈ ಮಾದರಿಯ ಉದ್ಯಮ ಕ್ಷೇತ್ರದಲ್ಲಿ ನಂಬರ್ 1 ಸ್ಥಾನವನ್ನು ಕಾಯ್ದುಕೊಂಡಿದೆ. ಸಂಸ್ಥೆಯ ಸ್ಥಾಪನೆ, 75 ವರ್ಷಗಳ ಪ್ರಯಾಣ, ಕುಟುಂಬದ ಮೂರು ತಲೆಮಾರಿನವರ ದುಡಿಮೆ, ಸಂಸ್ಥೆಯ ಉತ್ಪನ್ನಗಳು, ಮುಂದಿನ ಯೋಜನೆಗಳು ಇನ್ನಿತರ ವಿಚಾರಗಳನ್ನು ಸಂಸ್ಥೆಯ ಹಾಲಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.




ನಾರಾಯಣಶಾಸ್ತ್ರಿ ರಸ್ತೆಯಲ್ಲಿದ್ದ ವಾಸು ಸೈಕಲ್ ಅಗರಬತ್ತಿ ಮನೆ, ಫ್ಯಾಕ್ಟರಿ.




ಅಗರ್‌ಬತ್ತಿ ಸಾಗಿಸುತ್ತಿದ್ದ ಎತ್ತಿನ ಗಾಡಿ



ತಮ್ಮ ವೃತ್ತಿ ಸಂಗಾತಿ ವ್ಯಾನ್‌ನೊಂದಿಗೆ ಎನ್.ರಂಗರಾವ್



ಫ್ಯಾಕ್ಟರಿಯೂ ಆಗಿದ್ದ ಮನೆಯಲ್ಲಿ ಎನ್.ರಂಗರಾವ್ ದಂಪತಿ



ಎನ್.ರಂಗರಾವ್ ಮಕ್ಕಳಾದ ಡಾ.ಆರ್.ಶ್ರೀಧರ್, ಆರ್.ಮೂರ್ತಿ, ಆರ್.ಗುರು, ಆರ್.ವಾಸು ಹಾಗೂ ಮೊಮ್ಮಕ್ಕಳಾದ ವಿಷ್ಣು ರಂಗ, ಅನಿರುದ್ಧ್ ರಂಗ, ಪವನ್ ರಂಗ, ಅರ್ಜುನ್ ರಂಗ, ಕಿರಣ್ ರಂಗ, ನಿಖಿಲ್ ರಂಗ.

■ ಸಂದರ್ಶನ: ಎಸ್.ಬಿ.ದೇವರಾಜ

'ಮೈಸೂರು ಮಿತ್ರ': ನಿಮ್ಮ ತಾತನವರಾದ ಎನ್.ರಂಗರಾವ್ ಅವರ ಜೀವನದ ಆರಂಭಿಕ ದಿನಗಳ ಬಗ್ಗೆ ಏನಾದರೂ ಗೊತ್ತಿದೆಯೇ?

ಅರ್ಜುನ್ ರಂಗ: ನಮ್ಮ ತಾತನವರು ತಮಿಳುನಾಡಿನ ವತ್ರಾಯಿರುಪ್ಪು (ಈಗಿನ ವತ್ರಾಪ್) ಗ್ರಾಮದವರು. ನಮ್ಮ ಮುತ್ತಾತ ಶಿಕ್ಷಕರು ಹಾಗೂ ಅವರ ತಂದೆ ಅರ್ಚಕರಾಗಿದ್ದರು. ಅಂದರೆ ವೃತ್ತಿಪರ ಕ್ಷೇತ್ರದಲ್ಲಿ ಯಾರೂ ಇರಲಿಲ್ಲ. ತಾತ ರಂಗರಾವ್ ಅವರು ಚಿಕ್ಕವರಿದ್ದಾಗಲೇ ಅವರ ತಂದೆ ತೀರಿ ಹೋದರು. ಹಾಗಾಗಿ 12 ವರ್ಷದವರಿದ್ದಾಗಲೇ ತಾಯಿ ಮತ್ತು ಅಜ್ಜಿಯ ಜವಾಬ್ದಾರಿ ಅವರ ಹೆಗಲೇರಿತ್ತು. ಮನೆ ಬಾಡಿಗೆ, ತಮ್ಮ ಶಾಲೆ ಶುಲ್ಕ ಎಲ್ಲದಕ್ಕೂ ದುಡಿದು ಸಂಪಾದಿಸಬೇಕಾದ ಅನಿವಾರ್ಯತೆ ಎದುರಾಯಿತು. ಮನೆಯಲ್ಲಿ ಬಡತನ, ತುಂಬಾ ಕಷ್ಟವಿತ್ತು. ಆದರೂ ಓದುವ ಆಸಕ್ತಿ ಬಹಳವಿತ್ತು. ಹೋಲ್‌ಸೇಲ್ ಮಾರುಕಟ್ಟೆಗೆ ಹೋಗಿ ಕೆಲ ವಸ್ತುಗಳನ್ನು ಖರೀದಿಸಿ, ಅವುಗಳನ್ನು ತಂದು ಮಾರಾಟ ಮಾಡುತ್ತಿದ್ದರು. ಅದರಿಂದ ಬಂದ ಹಣದಲ್ಲಿ ಪುಸ್ತಕ ಇನ್ನಿತರ ವಸ್ತುಗಳನ್ನು ಕೊಳ್ಳುವುದು ಹಾಗೂ ಶಾಲೆ ಶುಲ್ಕ ಭರಿಸುತ್ತಿದ್ದರು. ಹಿರಿಯ ನಾಗರಿಕರಿಗೆ ಪತ್ರಿಕೆ ಓದಿ ಹೇಳುವುದು, ವಾಚ್ ರಿಪೇರಿ ಮಾಡಿಕೊಡುವುದು ಅವರ ಇನ್ನಿತರೆ ಹವ್ಯಾಸವಾಗಿತ್ತು. ಶಾಲೆ ಜೊತೆಗೆ ಟೈಪಿಂಗ್, ಶಾರ್ಟ್‌ಹ್ಯಾಂಡ್ ಕೂಡ ಕಲಿತಿದ್ದರು ಎಂದು ತಿಳಿದಿದ್ದೇನೆ.

'ಮಿತ್ರ': ಎನ್.ರಂಗರಾವ್ ಅವರು ಈ ಉದ್ಯಮ ಸ್ಥಾಪಿಸಿದ್ದರ ಹಿನ್ನೆಲೆ ಬಗ್ಗೆ ತಿಳಿಸುವಿರಾ?

ಅರ್ಜುನ್: ತಾತನವರಿಗೆ ಚಿಕ್ಕವಯಸ್ಸಿನಲ್ಲೇ ಸೀತಮ್ಮ ಅವರೊಂದಿಗೆ ಮದುವೆ ಆಗುತ್ತದೆ. ಆಗ ಸ್ಥಿರ ಉದ್ಯೋಗದ ಅಗತ್ಯವಾಗಿರುತ್ತದೆ. ಅದೇ ವೇಳೆಗೆ ಅಲಾಂಗಡ್‌ನಲ್ಲಿ ಅವರಿಗೆ ಕೆಲಸವೂ ಸಿಗುತ್ತದೆ. ಎಲ್ಲೇ ಕೆಲಸ ಸಿಕ್ಕರೂ ಹೋಗಬೇಕು ಎಂದು ನಿರ್ಧರಿಸಿದ ಅವರು, 1937ರಲ್ಲಿ ಕುಟುಂಬ ಸಹಿತ ಅಲಾಂಗಡ್‌ಗೆ ಸ್ಥಳಾಂತರವಾಗುತ್ತಾರೆ. ಅಲ್ಲಿ ಮೊದಲು ಪದ್ಮ ಅವರು ನಂತರ 1942ನಲ್ಲಿ ಗುರು ಅವರು ಜನಿಸುತ್ತಾರೆ. 1943ರಲ್ಲಿ ಕೊಡಗಿನಲ್ಲಿ ತಾತನಿಗೆ ಕೆಲಸ ಸಿಗುತ್ತದೆ. ಬ್ರಿಟಿಷ್ ಆಡಳಿತದ ಕನ್ಸಾಲೇಟೆಡ್ ಕಾಫಿ ವರ್ಕ್ಸ್‌ನಲ್ಲಿ ಬುಕ್ ಕೀಪರ್ ಆಗಿ ಸೇರುತ್ತಾರೆ. ಧೈರ್ಯ ಮಾಡಿ ಪತ್ನಿ, ಇಬ್ಬರು ಮಕ್ಕಳು, ತಾಯಿ ಹಾಗೂ ಅಜ್ಜಿಯೊಂದಿಗೆ ಕೊಡಗಿಗೆ ಬರುತ್ತಾರೆ. ಅಲ್ಲಿ ನನ್ನ ತಂದೆ ಮೂರ್ತಿ ಹಾಗೂ ಅತ್ತೆ ವನಜ ಜನಿಸುತ್ತಾರೆ. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ, ಬ್ರಿಟಿಷರು ರಾತ್ರೋರಾತ್ರಿ ದೇಶ ತೊರೆದಾಗ ಇಡೀ ಕಾಫಿ ಎಸ್ಟೇಟ್‌ಗೆ ಅವರೇ ಮ್ಯಾನೇಜರ್ ಆಗಿರುತ್ತಾರೆ. ಅನುಭವಿ ಅಕೌಂಟೆಂಟ್, ಇಂಗ್ಲೀಷ್ ಭಾಷಾ ಜ್ಞಾನವಿದ್ದ ತಾತನಿಗೆ ತಕ್ಷಣ ಸರ್ಕಾರಿ ಕೆಲಸವೂ ಸಿಗುತ್ತದೆ. ಆದರೆ ಅವರ ಮನಸ್ಸಿನಲ್ಲಿ ಸ್ವಂತವಾಗಿ ಉದ್ಯಮ ಮಾಡಬೇಕು ಎಂಬ ಆಸೆ, ಛಲವಿತ್ತು. ತಮ್ಮ ಕನಸು ಸಾಕಾರಗೊಳಿಸುವ ಉದ್ದೇಶದಿಂದ ಇಡೀ ಕುಟುಂಬದೊಂದಿಗೆ 1948ರಲ್ಲಿ ಮೈಸೂರಿಗೆ ಬಂದು ಅಗರ್‌ಬತ್ತಿ ವ್ಯಾಪಾರ ಶುರು ಮಾಡುತ್ತಾರೆ.

'ಮಿತ್ರ': ಉದ್ಯಮದ ಆರಂಭಿಕ ದಿನಗಳು, ಆಗ ತಾತನವರು ಎದುರಿಸಿದ ಸವಾಲುಗಳ ಬಗ್ಗೆ ಹಂಚಿಕೊಳ್ಳಬಹುದೇ?

ಅರ್ಜುನ್: ಸ್ವಂತ ವ್ಯಾಪಾರ ಮಾಡಬೇಕೆಂಬ ತಾತನವರ ಆಸೆಗೆ ನೀರೆರೆದಿದ್ದು ನಮ್ಮ ಅಜ್ಜಿ ಸೀತಮ್ಮ. ಅವರೇ ಧೈರ್ಯ ತುಂಬಿ, ತಮ್ಮ ಒಡವೆಗಳನ್ನು ಅಡವಿಟ್ಟು ಬಂಡವಾಳ ಒದಗಿಸುತ್ತಾರೆ. ಮೈಸೂರಿನಲ್ಲಿ 5 ರೂ. ಬಾಡಿಗೆ ಮನೆಯಲ್ಲಿದ್ದುಕೊಂಡು ವ್ಯಾಪಾರ ಆರಂಭಿಸುತ್ತಾರೆ. 2 ವರ್ಷಗಳಲ್ಲಿ ವ್ಯವಹಾರ ಸರಿಹೋಗದಿದ್ದರೆ ವೃತ್ತಿ ಕ್ಷೇತ್ರಕ್ಕೆ ವಾಪಸ್ಸಾಗಲು ನಿರ್ಧರಿಸುತ್ತಾರೆ. ಸ್ವಾತಂತ್ರ್ಯ ನಂತರದ ಮೊದಲ ಸ್ಟಾರ್ಟ್‌ಅಪ್ ಆರಂಭಿಸಿದವರಲ್ಲಿ ನಮ್ಮ ತಾತನವರೂ ಒಬ್ಬರು. ಆ ಸಂದರ್ಭದಲ್ಲಿ ಮೈಸೂರು ಮಹಾರಾಜರು ಸುಗಂಧ ದ್ರವ್ಯಗಳು, ಸ್ಯಾಂಡಲ್‌ವುಡ್‌ಗೆ ಆದ್ಯತೆ ನೀಡಿದ್ದರು. ಆ ಪ್ರಭಾವದಿಂದ ನಮ್ಮ ತಾತ ಅಗರ್‌ಬತ್ತಿ ಶುರು ಮಾಡಿದರು. ಇದರಲ್ಲಿ ಬೆಳೆಯಬೇಕಾದರೆ ಸುಗಂಧಪೂರಿತ, ಉತ್ಕೃಷ್ಟವಾದ ಅಗರ್‌ಬತ್ತಿ ಒದಗಿಸಬೇಕು ಎಂದು ಯೋಚನೆ ಮಾಡಿದರು. ವಿದೇಶಗಳಿಂದ ಪುಸ್ತಕಗಳನ್ನು ತರಿಸಿ ಅಧ್ಯಯನ ಮಾಡಿ, ಸ್ವಂತ ಸುಗಂಧ ದ್ರವ್ಯದ ಪ್ರಯೋಗಾಲಯ ಸ್ಥಾಪಿಸಿದರು. ಸಂಸ್ಥೆಯ ಬೆಳವಣಿಗೆಯಲ್ಲಿ ಇದರ ಪಾತ್ರ ಮಹತ್ವದ್ದಾಗಿದೆ. ಸ್ವಂತ ಸುಗಂಧ ದ್ರವ್ಯ ತಯಾರಿಸುವ ಕೆಲವೇ ಕಂಪನಿಗಳಲ್ಲಿ ನಮ್ಮದೂ ಒಂದು ಎನ್ನಲು ಹೆಮ್ಮೆ ಇದೆ. ಇದರ ಬಗ್ಗೆ ತಾತ ನಮ್ಮ ತಂದೆ ಮೂರ್ತಿ ಅವರಿಗೆ ಹೇಳಿಕೊಟ್ಟರು. ಜೊತೆಗೆ ಅವರು ವಿದೇಶದಲ್ಲಿ ಹೋಗಿ ಮತ್ತಷ್ಟು ಕಲಿತುಕೊಂಡರು. ನಾನೂ 25 ವರ್ಷದಿಂದ ಕಲಿಯುತ್ತಿದ್ದೇನೆ. ಸಾಲದೇ, ವಿದೇಶಕ್ಕೆ ಹೋಗಿ ಕಲಿತು ಬಂದಿದ್ದೇನೆ. ನಮ್ಮ ಸೈಕಲ್ ಪ್ಯೂರ್ ಅಗರ್‌ಬತ್ತಿಯ ಎಲ್ಲಾ ಸುಗಂಧಗಳನ್ನು ನಾವೇ ತಯಾರಿಸುತ್ತೇವೆ. ಇದು ನಮ್ಮ ಸಂಸ್ಥೆಯ ಅತೀ ದೊಡ್ಡ ಸೀಕ್ರೇಟ್.

'ಮಿತ್ರ': ನಿಮ್ಮ ತಾತನವರು ಅನುಸರಿಸಿದ ವ್ಯಾಪಾರಿ ತಂತ್ರಗಳ ಬಗ್ಗೆ ತಿಳಿದಿರುವಿರಾ?

ಅರ್ಜುನ್: ಆ ಕಾಲದಲ್ಲಿ ಎಲ್ಲರೂ ಕಬ್ಬಿಣದ ಡಬ್ಬಿಯಲ್ಲಿ 100 ಅಗರ್‌ಬತ್ತಿ ಕಡ್ಡಿಗಳನ್ನು ತುಂಬಿ ಮಾರಾಟ ಮಾಡುತ್ತಿದ್ದರು. ಕಡ್ಡಿಗಳು ತುಂಬಾ ಸಣ್ಣಗಿದ್ದ ಕಾರಣ ಅದೆಷ್ಟೋ ಉರಿಯುತ್ತಿರಲಿಲ್ಲ. ಈ ಬಗ್ಗೆ ತಾತ ಯೋಚನೆ ಮಾಡಿದರು. ಕಬ್ಬಿಣದ ಡಬ್ಬಿಗೆ ಹೆಚ್ಚು ವೆಚ್ಚವಾಗುತ್ತದೆ. ಅದರ ಬದಲು ದಪ್ಪ ಹಾಗೂ ಸುಗಂಧಭರಿತ ಉತ್ಕೃಷ್ಟ ಅಗರ್‌ಬತ್ತಿಗಳನ್ನು ನೀಡಬಹುದು ಎಂದು ಆಲೋಚಿಸುತ್ತಾರೆ. 1 ರೂ.ಗೆ 100 ಅಗರ್‌ಬತ್ತಿ ಕಡ್ಡಿ ಸಿಗುವ ಸಮಯದಲ್ಲಿ 25 ಕಡ್ಡಿಗಳನ್ನು ಪ್ಯಾಕ್ ಮಾಡಿ ಅಂಗಡಿಗಳಿಗೆ ಕೊಡಲು ಹೋಗುತ್ತಾರೆ. ಆದರೆ ಅಂಗಡಿಯವರು ಕಡ್ಡಿ ಕಡಿಮೆ ಇದೆ ಎಂದು ಕೊಳ್ಳಲು ನಿರಾಕರಿಸುತ್ತಾರೆ. ಆಗ ತಾತನವರು ಆ ಮಾರ್ಗದ 10 ಅಂಗಡಿಗಳಲ್ಲಿ ಎರಡೆರಡು ಕಡ್ಡಿ ಹಚ್ಚಿ ಬರುತ್ತಾರೆ. ಮರುದಿನ ಹೋದಾಗ ನಿಮ್ಮ ಅಗರ್‌ಬತ್ತಿಗಳನ್ನು ತುಂಬಾ ಜನ ಕೇಳುತ್ತಿದ್ದಾರೆ, ಕೊಡುವಿರಾ ಎಂದು ಅಂಗಡಿಯವರೇ ಕೇಳುತ್ತಾರೆ. ಆದರೆ ಅಗರ್‌ಬತ್ತಿ ಪೊಟ್ಟಣಗಳನ್ನು ನೀಡದೆ, ಇನ್ನೆರಡು ದಿನ ಅಗರ್‌ಬತ್ತಿ ಹಚ್ಚಿ ಬರುತ್ತಾರೆ. ನಾಲ್ಕನೇ ದಿನ ಅಂಗಡಿಯವರಿಗೆ ಒಂದು ಪೊಟ್ಟಣ ಕೊಡುತ್ತಾರೆ. ಅವರೆಲ್ಲಾ ತಮ್ಮ ಮನೆಯಲ್ಲಿ ಹಚ್ಚಿದಾಗ ಕುಟುಂಬದವರಿಗೆಲ್ಲಾ ಇಷ್ಟವಾಗುತ್ತದೆ. ನಂತರದಲ್ಲಿ ಎಷ್ಟು ಬೆಲೆಯಾದರೂ ಸರಿ ಈಗ ಅಗರ್‌ಬತ್ತಿ ಕೊಡಿ ಎಂದು ಅಂಗಡಿಯವರು ಕೇಳಲು ಶುರು ಮಾಡುತ್ತಾರೆ. ಈ ರೀತಿಯಲ್ಲಿ ಜೀನಿಯಸ್ ಐಡಿಯಾ ಮಾಡಿ, ಬೇಡಿಕೆ ಸೃಷ್ಟಿಸಿದರು.

'ಮಿತ್ರ': 'ಸೈಕಲ್' ಬ್ರ್ಯಾಂಡ್ ಆಯ್ಕೆ ಮಾಡಿದ್ದೇಗೆ?

ಅರ್ಜುನ್: ನಮ್ಮ ತಾತನವರು 1950ರಲ್ಲಿ ನೀಲಿ ಬಣ್ಣದ ಡಬ್ಬದಲ್ಲಿ ಸುಗಂಧ ಮಲ್ಲಿಕ ಬ್ರ್ಯಾಂಡ್ ಲಾಂಚ್ ಮಾಡುತ್ತಾರೆ. ಅದರಿಂದ ವ್ಯಾಪಾರ ಮತ್ತೊಂದು ಹಂತಕ್ಕೇರುತ್ತದೆ. ಆಗ ಲಾಂಛನದ ಬಗ್ಗೆ ಯೋಚನೆ ಮಾಡುತ್ತಾರೆ. ಎಲ್ಲಾ ಭಾಷೆಯವರು, ಎಲ್ಲಾ ದೇಶದವರಿಗೂ ಅರ್ಥವಾಗುವ 'ಸೈಕಲ್' ಅನ್ನು ಬ್ರ್ಯಾಂಡ್ ಮಾಡಿಕೊಳ್ಳುತ್ತಾರೆ.

ಎಲ್ಲಾ ದೇಶ ಹಾಗೂ ಭಾಷೆಯಲ್ಲೂ ಸೈಕಲ್ ಅನ್ನು ಒಂದೇ ಹೆಸರಿನಲ್ಲಿ ಗುರುತಿಸುವುದರಿಂದ ಯಾವುದೇ ಗೊಂದಲವಾಗುವುದಿಲ್ಲ ಎಂದು ಸೈಕಲ್ ಆಯ್ಕೆ ಮಾಡುತ್ತಾರೆ. ಅಗರ್‌ಬತ್ತಿ ಸುಗಂಧ, ಮಾರ್ಕೆಟಿಂಗ್ ಐಡಿಯಾ ಹಾಗೂ ಸೈಕಲ್ ಬ್ರ್ಯಾಂಡ್‌ನಿಂದ ಸಂಸ್ಥೆ ಬೆಳವಣಿಗೆಯತ್ತ ಮುನ್ನುಗ್ಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ನೈತಿಕ ವ್ಯವಹಾರಕ್ಕೆ ಪ್ರಾಧಾನ್ಯತೆ ನೀಡಿದರು. ಸರ್ಕಾರಕ್ಕೆ ಸರಿಯಾಗಿ ತೆರಿಗೆ ಪಾವತಿಸಬೇಕು. ಮೋಸ ಮಾಡದೆ ನೈತಿಕತೆಯಿಂದ ವ್ಯವಹಾರ ನಡೆಸಬೇಕು ಎಂಬುದು ಅವರ ಧ್ಯೇಯವಾಗಿತ್ತು. ಈ ಕಾರಣದಿಂದ ಸಂಸ್ಥೆಯ ತ್ವರಿತ ಬೆಳವಣಿಗೆ ಸಾಧ್ಯವಾಯಿತು.

'ಮಿತ್ರ': ಉದ್ಯಮಕ್ಕೆ ಎರಡನೇ ತಲೆಮಾರಿನ ಪ್ರವೇಶ ಯಾವಾಗ ಆಯಿತು?

ಅರ್ಜುನ್: ನಮ್ಮ ದೊಡ್ಡಪ್ಪ ಗುರು ಅವರು 15 ವರ್ಷದವರಿದ್ದಾಗಲೇ 1957ರಲ್ಲಿ ಸಂಸ್ಥೆಯಲ್ಲಿ ಸಕ್ರಿಯರಾದರು. ಆಗ ತಾತನವರಿಗೆ ಮತ್ತಷ್ಟು ಬಲ ಬಂದಂತಾಗುತ್ತದೆ. ಬಳಿಕ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಮಾರುಕಟ್ಟೆ ವಿಸ್ತರಿಸುತ್ತಾರೆ. 1965ರಲ್ಲಿ ನಮ್ಮ ತಂದೆ(ಮೂರ್ತಿ) ಹಾಗೂ ಚಿಕ್ಕಪ್ಪ ವಾಸು ಅವರು ಜೊತೆಯಾಗುತ್ತಾರೆ. ಆಗ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟಕ್ಕೆ ಸಂಸ್ಥೆ ಬೆಳೆಯುತ್ತದೆ. ಇದೇ ವೇಳೆ ನಮ್ಮ ತಾತ 1970ರಲ್ಲಿ ನಿವೃತ್ತರಾಗುತ್ತಾರೆ. ಕೆಲ ವರ್ಷಗಳಲ್ಲಿ ನಮ್ಮ ತಂದೆ, ದೊಡ್ಡಪ್ಪ, ಚಿಕ್ಕಪ್ಪನವರು ಸಂಸ್ಥೆಯಲ್ಲಿ ಸಾಕಷ್ಟು ಸುಧಾರಣೆ ತರುತ್ತಾರೆ.

● 7ನೇ ಪುಟಕ್ಕೆ





ಎನ್.ರಂಗರಾವ್ ಸ್ಮಾರಕ ವಿಶೇಷಚೇತನರ ಶಾಲೆ

ಮೈಸೂರು ಮಿತ್ರ ಭಾನುವಾರ 22 ಅಕ್ಟೋಬರ್ 2023

‘ಶಕ್ತಿ’ಯಡಿ ಬಸ್ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳ

ಸಾರಿಗೆ ಸಂಸ್ಥೆಗೆ 5675 ಹೊಸ ಬಸ್ ಖರೀದಿ

ಬೆಂಗಳೂರು, ಅ.21(ಕೆಎಂಶಿ)– ಶಕ್ತಿ ಯೋಜನೆ ಅನುಷ್ಠಾನದ ನಂತರ ಪ್ರಯಾಣಿಕರ ಸಂಖ್ಯೆ ದ್ವಿಗುಣಗೊಂಡಿರುವ ಹಿನ್ನೆಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ 5675 ಹೊಸ ಬಸ್ ಖರೀದಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಹೊಸ ಬಸ್‌ಗಳ ಖರೀದಿಗೆ 500 ಕೋಟಿ ರೂ. ಆಯವ್ಯಯದಲ್ಲಿ ಒದಗಿಸಲಾಗಿದ್ದು, ಖರೀದಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂದರು.

ಗೃಹ ಕಚೇರಿ ಕೃಷ್ಣಾದಲ್ಲಿ ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ, ಶಕ್ತಿ ಯೋಜನೆಯಿಂದ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗಿದೆ.

ಇದರೊಂದಿಗೆ ಹೆಚ್ಚುವರಿ ಶೆಡ್ಯೂಲ್‌ಗಳನ್ನು ಸೇರಿಸಲು ಅನುವಾಗುವಂತೆ ಹಾಗೂ ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸಲು ಹೊಸಬಸ್ ಗಳ ಸೇರ್ಪಡೆ ಮಾಡಲಾಗುವುದು ಎಂದು ತಿಳಿಸಿದರು.

ಶಕ್ತಿ ಯೋಜನೆ ಜಾರಿಗೊಂಡ ನಂತರ ರಾಜ್ಯಾದ್ಯಂತ ಅಪಾರ ಸ್ಪಂದನೆ ಹಾಗೂ ಮೆಚ್ಚುಗೆ ವ್ಯಕ್ತವಾಗಿದೆ. ಇದಕ್ಕೆ ಪೂರಕವಾಗಿ ಬಸ್‌ಗಳ ಮಾರ್ಗ ಹೆಚ್ಚಳ ಮಾಡಲು ಅದಕ್ಕೆ ತಕ್ಕಂತೆ ಹೊಸ ಬಸ್ ಓಡಿಸುವ ನಿರ್ಧಾರ ಮಾಡಿದ್ದೇವೆ.

ಸಾರಿಗೆ ಇಲಾಖೆಯ ರಾಜಸ್ವ ಗುರಿ ಸಂಗ್ರಹ ಹಾಗೂ ಸಾರಿಗೆ ನಿಗಮಗಳ ಹಣಕಾಸು ನಿರ್ವಹಣೆ ಕುರಿತಂತೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ವಾಹನ ತನಿಖೆಯಿಂದ 83 ಕೋಟಿ ರೂ. ದಂಡ ಸಂಗ್ರಹ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅ.25, ಬಾಲಿವುಡ್ ಮ್ಯೂಸಿಕಲ್ ಈವೆಂಟ್



ಮೈಸೂರು, ಅ.21(ಜಿಎ)–ಜನ ಚೈತನ್ಯ ಫೌಂಡೇಷನ್ ವತಿಯಿಂದ ಅ.25ರಂದು ಬಾಲಿವುಡ್ ಮ್ಯೂಸಿಕಲ್ ಈವೆಂಟ್ ಸೀಸನ್–1(ಹಿಂದಿ ಚಲನಚಿತ್ರಗಳು) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚರ್ಮರೋಗ ತಜ್ಞ ಡಾ.ಕೆ.ಎ.ಕೆ.ಸುರೇಂದ್ರನ್, ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್, ಸಮಾಜ ಸೇವಕ ರವಿಗೌಡ, ನಿವೃತ್ತ ಇಂಜಿನಿಯರ್ ಎನ್.ಶ್ರೀನಿವಾಸಲು, ಇಂಜಿನಿಯರ್ ಅಜರುದ್ದೀನ್, ಚಿಂತಕ ಶಿವಕುಮಾರ್ ಭಾಗವಹಿಸುವರು. ಹಿರಿಯ ಗಾಯಕ ಜಾರ್ಜ್ ಪ್ರಭಾಕರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮಾಲೂರಿನಲ್ಲಿ ಗ್ರಾಮ ಪಂಚಾಯ್ತಿ ಸದಸ್ಯನ ಬರ್ಬರ ಹತ್ಯೆ

ಕೋಲಾರ, ಅ.21– ಮಾಲೂರು ತಾಲೂಕಿನ ಕೋಡಿಹಳ್ಳಿ ಕ್ರಾಸ್ ಬಳಿ ಗ್ರಾಮ ಪಂಚಾಯಿತಿ ಸದಸ್ಯನನ್ನು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಜಿಲ್ಲೆ ನಡೆದಿದೆ. ಮಿಣಸಂದ್ರ ಗ್ರಾಪಂ ಸದಸ್ಯ 40 ವರ್ಷದ ಅನಿಲ್ ಮೃತ ವ್ಯಕ್ತಿ. ಅನಿಲ್ ಕಾಂಗ್ರೆಸ್ ಬೆಂಬಲಿಗರು ಎಂದು ತಿಳಿದುಬಂದಿದೆ. ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ.



ವಿಶ್ವಕಪ್ ಮಹಾಸಮರ 2023

ಗೆಲುವಿನ ಖಾತೆ ತೆರೆದ ಶ್ರೀಲಂಕಾ



ಲಕ್ನೋ, ಅ.21– ಸತತ ಸೋಲಿನಿಂದ ಕುಗ್ಗಿದ್ದ ಶ್ರೀಲಂಕಾ ನೆದರ್ಲೆಂಡ್ಸ್ ವಿರುದ್ಧ 5 ವಿಕೆಟ್‌ಗಳ ಗೆಲುವು ಸಾಧಿಸಿದೆ. ಆ ಮೂಲಕ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆದಿದೆ.

ಶನಿವಾರ ಬೆಳಗ್ಗೆ ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 48.2 ಓವರ್‌ಗಳಲ್ಲಿ 262 ರನ್ ಗಳಿಸಿತು. ತಂಡದ ಪರ ಮ್ಯಾಕ್ಸ್ ಓಡೌಡ್ 16, ಕಾಲಿನ್ ಅಕರ್ಮನ್ 29, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 70, ಲೋಗನ್ ವ್ಯಾನ್ ಬೀಕ್ 59 ರನ್ ಗಳಿಸಿದರು. ಶ್ರೀಲಂಕಾ ಪರ ಬೌಲಿಂಗ್‌ನಲ್ಲಿ ದಿಲ್ಶಾನ್ ಮದುಶಂಕ ಮತ್ತು ಕಸೂನ್ ರಜಿತಾ ತಲಾ 4, ಮಹೀಶ್ ತೀಕ್ಷಣ 1 ವಿಕೆಟ್ ಪಡೆದು ಮಿಂಚಿದರು.

ನೆದರ್ಲೆಂಡ್ಸ್ ನೀಡಿದ 264 ರನ್‌ಗಳ ಗುರಿ ಬೆನ್ನತ್ತಿದ್ದ ಶ್ರೀಲಂಕಾ 48.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 263 ರನ್ ಗಳಿಸಿ ಗೆಲುವು ಸಾಧಿಸಿತು. ತಂಡದ ಪರ ಪತುಮ್ ನಿಸಂಕಾ 54, ಸದೀರ ಸಮರವಿಕ್ರಮ ಅಜೇಯ 91, ಚರಿತ್ ಅಸಲಂಕಾ 44, ಧನಂಜಯ್ ಡಿಸಿಲ್ವಾ 30 ರನ್ ಬಾರಿಸಿ ಗೆಲುವಿನ ನಗೆ ಬೀರಿದರು.

ನೆದರ್ಲೆಂಡ್ಸ್ ಪರ ಆರ್ಯನ್ ದತ್ 3, ಪಾಲ್ ವ್ಯಾನ್ ಮೀಕೆರೆನ್, ಕಾಲಿನ್ ಅಕರ್ಮನ್ ತಲಾ ಒಂದೊಂದು ವಿಕೆಟ್ ಪಡೆದರು. ಸದೀರ ಸಮರವಿಕ್ರಮ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯಗಳು

ಇಂಡಿಯಾ VS ನ್ಯೂಜಿಲ್ಯಾಂಡ್

ಸ್ಥಳ: ಹೆಚ್‌ಪಿಸಿಎ, ಧರ್ಮಶಾಲಾ
ಸಮಯ: ಮಧ್ಯಾಹ್ನ 2.00

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ನ್ಯೂಜಿಲ್ಯಾಂಡ್	4	4	0	0	8
ಇಂಡಿಯಾ	4	4	0	0	8
ದಕ್ಷಿಣ ಆಫ್ರಿಕಾ	4	3	1	0	6
ಆಸ್ಟ್ರೇಲಿಯಾ	4	2	2	0	4
ಪಾಕಿಸ್ತಾನ್	4	2	2	0	4
ಬಾಂಗ್ಲಾದೇಶ	4	1	3	0	2
ನೆದರ್‌ಲ್ಯಾಂಡ್ಸ್	4	1	3	0	2
ಶ್ರೀಲಂಕಾ	4	1	3	0	2
ಇಂಗ್ಲೆಂಡ್	4	1	3	0	2
ಅಫ್ಘಾನಿಸ್ತಾನ್	4	1	3	0	2

ಕ್ಲಾಸೆನ್ ಶತಕ: ದ.ಆಫ್ರಿಕಾಕ್ಕೆ ಭರ್ಜರಿ ಜಯ

ಹಾಲಿ ಚಾಂಪಿಯನ್ ಇಂಗ್ಲೆಂಡ್‌ಗೆ 229 ರನ್‌ಗಳ ಹೀನಾಯ ಸೋಲು



ಮುಂಬೈ, ಅ.21– ಹೆನ್ರಿಕ್ ಕ್ಲಾಸೆನ್ ಅವರ ಅಬ್ಬರದ ಶತಕ ಹಾಗೂ ಸಂಘಟಿತ ಬೌಲಿಂಗ್ ದಾಳಿ ನೆರವಿನಿಂದ ದಕ್ಷಿಣ ಆಫ್ರಿಕಾ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ 229 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ದಕ್ಷಿಣ ಆಫ್ರಿಕಾ ಗೆಲುವಿನ ಟ್ರ್ಯಾಕ್‌ಗೆ ಮರಳಿದರೆ, ಇಂಗ್ಲೆಂಡ್ ಹೀನಾಯ ಸೋಲು ಅನುಭವಿಸಿತು.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 399 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿ ಕಾಕ್ 4ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ರೀಜಾ ಹೆಂಡ್ರಿಕ್ಸ್ 85, ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 60, ಏಡೆನ್ ಮಾರ್ಕ್ರಮ್ 42 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಹೆನ್ರಿಕ್ ಕ್ಲಾಸೆನ್ 67 ಬಾಲ್‌ಗಳಲ್ಲಿ 12 ಬೌಂಡರಿ, 4 ಸಿಕ್ಸರ್ ಒಳಗೊಂಡ 109 ರನ್ ಗಳಿಸಿದರು. ಕ್ಲಾಸೆನ್‌ಗೆ ಉತ್ತಮ ಸಾಥ್ ನೀಡಿದ ಮಾರ್ಕೊ ಜಾನ್ಸೆನ್ 75 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಇಂಗ್ಲೆಂಡ್ ಪರ ರೀಸ್ ಟೋಪ್ಲಿ 3, ಗಸ್ ಅಟ್ಕಿನ್ಸನ್ ಹಾಗೂ ಆದಿಲ್ ರಶೀದ್ ತಲಾ 2 ವಿಕೆಟ್ ಉರುಳಿಸಿದರು.

ದಕ್ಷಿಣ ಆಫ್ರಿಕಾ ನೀಡಿದ 400 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 22 ಓವರ್‌ಗಳಲ್ಲಿ 170 ರನ್‌ಗಳಿಗೆ ಆಲೌಟಾಗುವ ಮೂಲಕ ಹೀನಾಯ ಸೋಲು ಅನುಭವಿಸಿತು. ಆಫ್ರಿಕಾ ಬೌಲರ್‌ಗಳ ಎದುರು ಮಂಕಾದ ಆಂಗ್ಲರು ಪೆವಿಲಿಯನ್ ಪರೇಡ್ ನಡೆಸಿದರು. ತಂಡದ ಪರ ಜಾನಿ ಬೈರ್ಸ್ಟೋವ್ 10, ಡೇವಿಡ್ ಮಲನ್ 6, ಜೋ ರೂಟ್ 2, ಬೆನ್ ಸ್ಟೋಕ್ಸ್ 5, ಹ್ಯಾರಿ ಬ್ರೂಕ್ 17, ಜೋಸ್ ಬಟ್ಲರ್ 15, ಡೇವಿಡ್ ವಿಲ್ಲಿ 12, ಆದಿಲ್ ರಶೀದ್ 10ರನ್ ಗಳಿಸಿದರು. ಕೆಳ ಕ್ರಮಾಂಕದ ಬಂದ ಗಸ್ ಅಟ್ಕಿನ್ಸನ್ 35, ಮಾರ್ಕ್‌ವುಡ್ 43ರನ್ ಗಳಿಸಿದರು. ಗಾಯದ ಕಾರಣದಿಂದಾಗಿ ರೀಸ್ ಟಾಪ್ಲೆ ಬ್ಯಾಟಿಂಗ್‌ಗೆ ಇಳಿಯಲಿಲ್ಲ. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೋಟ್ಜಿ 3, ಲುಂಗಿ ಎನ್ಗಿಡಿ, ಮಾರ್ಕೊ ಜಾನ್ಸೆನ್ ತಲಾ ಎರಡು ಹಾಗೂ ಕಗಿಸೊ ರಬಾಡ, ಕೇಶವ ಮಹಾರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಹೆನ್ರಿಕ್ ಕ್ಲಾಸೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಈ ಬಾರಿ ಜಂಬೂಸವಾರಿಯಲ್ಲಿ ಮೇಳೈಸಲಿದೆ ರಾಜರ ಕಾಲದ ಗತವೈಭವ

● ಅಂಬಾರಿ ಸುತ್ತ ರಾಜ ಪೋಷಾಕು ಧರಿಸಿದ್ದ 200 ಮಂದಿ ಸಾಗಲಿದ್ದಾರೆ ● ರಾಜರ ಆಳ್ವಿಕೆ ಕಾಲದಲ್ಲಿ ಸೈನಿಕರು ಹಿಡಿದು ಸಾಗುತ್ತಿದ್ದ ವಿವಿಧ ರಾಜಲಾಂಛನ ನೋಡುವ ಸೌಭಾಗ್ಯ

ಮೈಸೂರು, ಅ.21(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ರಾಜರ ಆಳ್ವಿಕೆ ಕಾಲದ'ಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುತ್ತಿದ್ದ ಗತವೈಭವ ಮರುಕಳಿಸಿದಂತೆ ಈ ಬಾರಿ ಜಂಬೂಸವಾರಿ ಸಾಗಲಿದ್ದು, ಅಂಬಾರಿ ಸುತ್ತಲೂ 200ಕ್ಕೂ ಹೆಚ್ಚು ಮಂದಿ ರಾಜ ಪೋಷಾಕು ಧರಿಸಿ, ವಿವಿಧ ಲಾಂಛನ ಹಿಡಿದು ಸಾಗಲಿದ್ದಾರೆ.

ಈ ಬಾರಿ ಆಚರಿಸುತ್ತಿರುವ ಸಾಂಪ್ರದಾಯಿಕ ದಸರಾ ಮಹೋತ್ಸವದ ಘನತೆ ಹಾಗೂ ರಾಜವೈಭವ ಹೆಚ್ಚಿಸುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಜಂಬೂಸವಾರಿ ಮೆರವಣಿಗೆಯಲ್ಲಿ ರಾಜ ಪೋಷಾಕು ಧರಿಸಿದ ತಂಡ ಸಾಗಲಿದ್ದು, ಚಿನ್ನದ ಅಂಬಾರಿ ಹೊತ್ತು ಸಾಗುವ ಕ್ಯಾಪ್ಟನ್ ಅಭಿಮನ್ಯು ಆನೆ ಸುತ್ತಲೂ ರಾಜರ ಕಾಲದ ಸೈನಿಕರಂತೆ ವಿಶೇಷ ಧಿರಿಸು ಧರಿಸಿದ ಪೊಲೀಸರು ಹೆಜ್ಜೆ ಹಾಕಲಿದ್ದಾರೆ. ಗನ್ ಹೊರುತ್ತಿದ್ದ ಪೊಲೀಸರ ಕೈಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಕೆಲವು ಲಾಂಛನವನ್ನಿಡಿದು ಸಾಗಲಿವೆ. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ.









ರಾಜರ ಆಳ್ವಿಕೆಯ ಕಾಲದಲ್ಲಿ ಜರುಗುತ್ತಿದ್ದ ಅಂಬಾರಿ ಮೆರವಣಿಗೆಯಲ್ಲಿ 20–30 ಕೆಜಿ ತೂಕದ, ಪಂಚಲೋಹದಿಂದ ಮಾಡಿದ ಲಾಂಛನಗಳನ್ನಿಡಿದು ಸೈನಿಕರು ಸಾಗುತ್ತಿದ್ದರು. ರಾಜರ ಕಾಲದ ಜಂಬೂಸವಾರಿ ಮೆರವಣಿಗೆಯ ಚಿತ್ರಕಲೆಗಳಲ್ಲಿ ಸೈನಿಕರು ಲಾಂಛನ ಹಿಡಿದು ಸಾಗುತ್ತಿದ್ದ ಚಿತ್ರ ಇಂದಿಗೂ ಕಾಣಬಹುದು. ಈ ಹಿಂದೆ ಸೈನಿಕರು ಹಿಡಿದು ಸಾಗುತ್ತಿದ್ದ ಲಾಂಛನಗಳು ಇಂದಿಗೂ ಅರಮನೆಯಲ್ಲಿ ಸಂರಕ್ಷಿಸಿಡಲಾಗಿದ್ದು, ಈ ಬಾರಿ ಗತ ವೈಭವ ಮರುಕಳಿಸುವಂತೆ ಮಾಡಲು ಲಾಂಛನ ಹೊತ್ತು ಸಾಗುವ ತಂಡವನ್ನು ಸಜ್ಜುಗೊಳಿಸಲಾಗುತ್ತಿದೆ.

ಈ ಹಿಂದೆ ಬಳಸುತ್ತಿದ್ದ ಲಾಂಛನಗಳು ಹೆಚ್ಚು ಭಾರದಿಂದ ಕೂಡಿರುವ ಹಿನ್ನೆಲೆಯಲ್ಲಿ ಅವುಗಳನ್ನು ಹೋಲುವಂತೆ ಹಗುರವಾದ ಲಾಂಛನ ಸಿದ್ಧಪಡಿಸುವ ಕಾರ್ಯ ತ್ವರಿತಗತಿಯಲ್ಲಿ ಸಾಗುತ್ತಿದೆ. ಈ ಹಿಂದೆ ಅಂಬಾರಿ ಆನೆ ಮುಂದೆ ಪೊಲೀಸ್ ಬ್ಯಾಂಡ್ ವಾದನದ ಮುಂದೆ ಗನ್ ಹಿಡಿದು ಪಥಸಂಚಲನ ಮಾಡುತ್ತಿದ್ದ ಪೊಲೀಸ್ ತುಕಡಿಯೊಂದಿಗೆ ಈ ಬಾರಿ ವಿಶೇಷ ಪೋಷಾಕು ಧರಿಸಿದ ತಂಡವು ವಿವಿಧ ಲಾಂಛನಗಳನ್ನು ಹಿಡಿದು ಸಾಗುವ ಮೂಲಕ ರಾಜಕಾಲದ ಜಂಬೂಸವಾರಿ ಸಾಗುವ ಕಲ್ಪನೆಗೆ ಜನರು ಜಾರುವಂತೆ ಮಾಡಲು ಉದ್ದೇಶಿಸಲಾಗಿದೆ.

ಇದಕ್ಕಾಗಿ ಈಗಾಗಲೇ ಪೋಷಾಕು ಸಿದ್ಧಗೊಂಡಿದ್ದು, ಲಾಂಛನದ ಮಾದರಿ ಸಿದ್ಧಪಡಿಸುವ ಕಾರ್ಯವೂ ಬಿರುಸಾಗಿ ಸಾಗಿದೆ. ರಾಜರ ಅಳ್ವಿಕೆ ಸಂದರ್ಭದಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಮುಂದೆ ರಾಜ ಬಿರುದು ಲಾಂಛನ ಹೊತ್ತು ಸಾಗುತ್ತಿದ್ದ ಸೈನಿಕರು, ಗ್ರಿಲ್ ಮೀಸಿ, ರೆಡ್ ಲ್ಯಾನ್ಸರ್, ವೈಟ್ ಲ್ಯಾನ್ಸ್, ಗ್ರೀನ್ ಲ್ಯಾನ್ಸ್‌ಗಳ ಮಾದರಿಯಲ್ಲಿಯೇ ಈ ಬಾರಿ ಜಂಬೂಸವಾರಿಯಲ್ಲಿ ವಿಶೇಷ ಪೋಷಾಕು ಧರಿಸಿ, ಲಾಂಛನ ಹೊತ್ತು ಸಾಗುವ ಸಿಬ್ಬಂದಿಗಳ ತಂಡವನ್ನು ಸಜ್ಜುಗೊಳಿಸಲಾಗಿದೆ. ರಾಜಲಾಂಛನಗಳ ತದ್ರೂಪಿ ಲಾಂಛನ ಸಿದ್ಧಪಡಿಸಲಾಗುತ್ತಿದೆ. ಅವುಗಳಲ್ಲಿ ಸೂರ್ಯ, ಮೀನು, ವರಹಾ, ಸೂರ್ಯ, ಚಂದ್ರ ಮಂಡಲ, ತ್ರಿಶೂಲ, ಸಿಂಹ, ಮತ್ಸ್ಯ, ಗರುಡ, ಮಾರುತಿ ಸೇರಿದಂತೆ ಇನ್ನಿತರ ಪ್ರಮುಖವಾದ ಲಾಂಛನವನ್ನು ತಯಾರಿಸಲಾಗಿದೆ. ರಾಜರ ಕಾಲದಲ್ಲಿ ಹೊತ್ತು ಸಾಗುತ್ತಿದ್ದ ಮಾದರಿಯಲ್ಲೇ ಲಾಂಛನದ ಹಿಡಿಯು ಇರುವುದರಿಂದ ಈ ಬಾರಿ ದಸರಾ ಮಹೋತ್ಸವಕ್ಕೆ ಸಾಂಪ್ರದಾಯಿಕ ಹಾಗೂ ರಾಜರ ಕಾಲದ ಗತವೈಭವದ ಕಳೆಕಟ್ಟುವಂತೆ ಕ್ರಮ ಕೈಗೊಳ್ಳಲಾಗಿದೆ.

‘ಸೈಕಲ್’ ಸುಗಂಧ ಪ್ರಾರ್ಥನೆ ಪ್ರಪಂಚ ಯಾನ...

ಆರನೇ ಪುಟದಿಂದ

ಹೊಸ ಹೊಸ ಸುಗಂಧಗಳನ್ನು ತಯಾರಿಸುತ್ತಾರೆ. ಉತ್ಪಾದನಾ ಘಟಕಗಳನ್ನು ವಿಸ್ತರಿಸುತ್ತಾರೆ. ವ್ಯವಹಾರದಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಾರೆ. 1980ರಲ್ಲಿ ವಿಪ್ರೋ ಕಂಪ್ಯೂಟರ್ ಖರೀದಿಸಿದ ಕಂಪನಿಗಳಲ್ಲಿ ನಮ್ಮದೂ ಒಂದು. ಸಾಫ್ಟ್‌ವೇರ್ ಬಳಕೆ ಆರಂಭಿಸುತ್ತಾರೆ. ಇನ್‌ಕಮ್ ಟ್ಯಾಕ್ಸ್ ಅವಾರ್ಡ್, ಎಕ್ಸ್‌ಪೋರ್ಟ್ ಅವಾರ್ಡ್ ಸಿಗುತ್ತದೆ. ಹೀಗೆ ಕಂಪನಿ ಬೆಳವಣಿಗೆ ಯಶಸ್ವಿಯಾಗಿ ಸಾಗುತ್ತದೆ.

‘ಮಿತ್ರ’: ಉದ್ಯಮದಲ್ಲಿ ಮೂರನೇ ತಲೆಮಾರಿಗೆ ಜವಾಬ್ದಾರಿ ಹಸ್ತಾಂತರ ಯಾವಾಗ ಆಯಿತು?


ಅರ್ಜುನ್: ನಮ್ಮ ತಾತನವರಿಗೆ ಗುರು, ಪದ್ಮ, ವನಜ, ಮೂರ್ತಿ, ವಾಸು, ಕೃಷ್ಣ, ವೆಂಕಟೇಶ್, ಶ್ರೀಧರ್, ಮೋಹನ್ ಸೇರಿ ಒಟ್ಟು ಒಂಬತ್ತು ಮಕ್ಕಳು. ನಮ್ಮದು ಅವಿಭಕ್ತ ಕುಟುಂಬ. ಮೂರನೇ ತಲೆಮಾರಿನವರಾದ ನಮಗೆ ಚಿಕ್ಕ ವಯಸ್ಸಿನಿಂದಲೇ ಅಗರ್‌ಬತ್ತಿ ಬಗ್ಗೆ ತಿಳುವಳಿಕೆ ಇತ್ತು. ರಜಾ ದಿನಗಳಲ್ಲಿ ಫ್ಯಾಕ್ಟರಿ, ಆಫೀಸ್‌ಗೆ ಹೋಗುತ್ತಿದ್ದೆವು. ನಾನು 2000ನೇ ಇಸವಿಯಲ್ಲಿ ಎಂಬಿಎ ಮುಗಿಸಿ, ಅಮೇರಿಕಾದಲ್ಲಿ 2 ವರ್ಷ ಕೆಲಸ ಮಾಡಿ ವಾಪಸ್ಸು ಬಂದಿದ್ದೇನೆ. ನಮ್ಮ ತಂದೆ, ದೊಡ್ಡಪ್ಪ ಹಾಗೂ ಚಿಕ್ಕಪ್ಪನವರು ಎಲ್ಲಾ ಜವಾಬ್ದಾರಿಗಳನ್ನು ಹೇಳಿಕೊಟ್ಟು ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿದ್ದಾರೆ. ಮೂರನೇ ತಲೆಮಾರಿನವರು ಜವಾಬ್ದಾರಿ ನಿರ್ವಹಣೆ ಶುರು ಮಾಡಿದ ಮೇಲೆ 2000ನೇ ವರ್ಷದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಆರಂಭವಾದಂತೆ ನಮ್ಮ ಸಂಸ್ಥೆಯ ಬೆಳವಣಿಗೆಯೂ ಆಯಿತು. ರಫ್ತು ಹೆಚ್ಚಾಯಿತು. ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಹೊಸ ವೈವಿಧ್ಯಮಯ ಉತ್ಪನ್ನಗಳನ್ನು ಶುರು ಮಾಡಿದೆವು. ಎನ್.ರಂಗರಾವ್(ಎನ್.ಆರ್) ಗ್ರೂಪ್ಸ್ ಅಡಿಯಲ್ಲಿ ಸದ್ಯ ನಾನು ಅಗರ್‌ಬತ್ತಿ ಮತ್ತು ಸುಗಂಧ ವಿಭಾಗ, ಪವನ್ ರಂಗ ಏರೋಸ್ಪೇಸ್ ಬ್ಯುಸಿನೆಸ್, ಕಿರಣ್ ರಂಗ ಹೋಂ ಫ್ರಾಗ್ರನ್ಸ್, ಅನಿರುದ್ಧ ರಂಗ ಎಸೆನ್ಷಿಯಲ್ ಅಂಡ್ ಹರ್ಬಲ್ ಎಕ್ಸ್‌ಪರ್ಟ್ಸ್, ವಿಷ್ಣು ರಂಗ ಆಗ್ರೋ ಸೋಲಾರ್ ಹಾಗೂ ನಿಖಿಲ್ ರಂಗ ಹೆಡ್‌ಟೆಕ್ ವಿಭಾಗ... ಹೀಗೆ ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ನಿರ್ವಹಿಸುತ್ತಿದ್ದೇವೆ.

‘ಮಿತ್ರ’: ಸಂಸ್ಥೆಯ ಬೆಳವಣಿಗೆಯಲ್ಲಿ ಸಿಬ್ಬಂದಿ, ನೌಕರರ ಪಾತ್ರದ ಬಗ್ಗೆ ನಿಮ್ಮ ಅಭಿಪ್ರಾಯ?

ಅರ್ಜುನ್: ನಮ್ಮ ತಾತ ಹಾಗೂ ಅಜ್ಜಿ ಆರಂಭದಲ್ಲಿ ಫ್ಯಾಕ್ಟರಿಯಲ್ಲೇ ವಾಸ ಮಾಡುತ್ತಿದ್ದರು. ಹಾಗಾಗಿ ಅವರನ್ನು **ಫ್ಯಾಕ್ಟರಿ ಅಪ್ಪ, ಫ್ಯಾಕ್ಟರಿ** ಅಮ್ಮ ಎಂದೇ ಗುರುತಿಸಲಾಗುತ್ತಿತ್ತು. ಅಷ್ಟೊಂದು ಪರಿಶ್ರಮ, ತ್ಯಾಗದಿಂದ ಉದ್ಯಮ ಕಟ್ಟಿ ಬೆಳೆಸಿದ್ದಾರೆ. ದೊಡ್ಡಪ್ಪ, ನನ್ನ ತಂದೆ, ಚಿಕ್ಕಪ್ಪಂದಿರು ತುಂಬಾ ಕಷ್ಟ ಪಟ್ಟಿದ್ದಾರೆ. ಮೂರನೇ ತಲೆಮಾರಿನ ಸೋದರರೂ ಕೂಡ ಭಾಗಿಯಾಗಿದ್ದೇವೆ. ಜೊತೆಗೆ ಸಂಸ್ಥೆಯ ಬೆಳವಣಿಗೆಯಲ್ಲಿ ನಮ್ಮ ನೌಕರರ ಪಾತ್ರ ಬಹಳ ಮುಖ್ಯವಾದದ್ದು. ಹಾಗೆಯೇ ಕಂಪನಿ ಬೆಳವಣಿಗೆಯೊಂದಿಗೆ ನೌಕರರನ್ನೂ ಬೆಳೆಸಿಕೊಂಡು ಹೋಗುತ್ತಿರುವುದು ವಿಶೇಷ. ಕೌಟುಂಬಿಕ ವ್ಯವಹಾರದಲ್ಲಿ ಎಲ್ಲಾ ಆದಾಯವನ್ನು ಮಾಲೀಕರೇ ಇಟ್ಟುಕೊಳ್ಳುತ್ತಾರೆ ಎನ್ನುವುದು ನಮ್ಮ ಸಂಸ್ಥೆಗೆ ಲವಲೇಶವೂ ಅನ್ವಯವಾಗುವುದಿಲ್ಲ.

‘ಮಿತ್ರ’: ಸೈಕಲ್ ಬ್ರ್ಯಾಂಡ್‌ನ ಪ್ರಮುಖ ಉತ್ಪನ್ನಗಳ ಬಗ್ಗೆ ತಿಳಿಸುವಿರಾ?

ಅರ್ಜುನ್: ನಮ್ಮದು ಮುಖ್ಯವಾಗಿ ಸೈಕಲ್ ಪ್ಯೂರ್ ಅಗರ್‌ಬತ್ತಿ. ಜೊತೆಗೆ ಐರಿಸ್ ಬ್ರ್ಯಾಂಡ್‌ನಲ್ಲಿ ಹೋಂ ಫ್ರಾಗ್ರನ್ಸ್ ಉತ್ಪನ್ನಗಳು, ಲಿಯಾ ರೂಂ ಫ್ರೆಶ್ನರ್ಸ್ ಹಾಗೂ ಅಗರ್‌ಬತ್ತಿ, ಬಾನ್ಸುರಿ ಅಗರ್‌ಬತ್ತಿ, ವಾಸು ಅಗರ್‌ಬತ್ತಿ, ಸೈಕಲ್ 3 in 1 ಅಗರ್‌ಬತ್ತಿ, ಪ್ರೀಮಿಯಮ್ ಪ್ರಾಡಕ್ಟ್ಸ್‌ನಲ್ಲಿ ವುಡ್ಸ್, ಯಜ್ಞ, ದರ್ಬಾರ್, ದಸರಾ ಬ್ರ್ಯಾಂಡ್ ಇದೆ. ಸೈಕಲ್ ನೈವೇದ್ಯ, ಸಾಂಬ್ರಾಣಿ, ಓಂ ಶಾಂತಿ ಬ್ರ್ಯಾಂಡ್‌ನಲ್ಲಿ ಪೂಜಾ ಸಾಮಗ್ರಿಗಳಿವೆ. ಅಗರ್‌ಬತ್ತಿ ಜೊತೆಗೆ ಹೋಂ ಫ್ರೆಶ್ನರ್ಸ್, ರೂಂ ಫ್ರೆಶ್ನರ್ಸ್, ಕಾರ್ ಫ್ರೆಶ್ನರ್ಸ್,



ದೀಪದ ಎಣ್ಣೆ, ದೀಪದ ಬತ್ತಿ, ಸಾಂಬ್ರಾಣಿ, ಅರಿಶಿನ–ಕುಂಕುಮ, ಕರ್ಪೂರ ಹೀಗೆ ಎಲ್ಲಾ ರೀತಿಯ ಪೂಜಾ ಸಾಮಗ್ರಿಗಳಿವೆ. ಪ್ರೇಯರ್ ಅಂಡ್ ವೆಲ್ನೆಸ್(ಪ್ರಾರ್ಥನೆ ಮತ್ತು ಕ್ಷೇಮ) ಸಂಸ್ಥೆ ನಮ್ಮದು.

‘ಮಿತ್ರ’: ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸೈಕಲ್ ಬ್ರ್ಯಾಂಡ್ ನಂಬರ್ 1 ಸ್ಥಾನಕ್ಕೇರಿ, ಅದನ್ನು ಕಾಯ್ದುಕೊಂಡಿರುವುದರಲ್ಲಿ ನಿಮ್ಮ ಚಮತ್ಕಾರವೇನು?

ಅರ್ಜುನ್: ಹೌದು, ಸಾಂಪ್ರದಾಯಿಕ ಮಾರುಕಟ್ಟೆ ಬದಲಾಗಿ ಎಫ್‌ಎಂಸಿಜಿಗಳ ಮಾದರಿಯಲ್ಲಿ ಸಂಸ್ಥೆ ಸ್ವಾಮ್ಯದ ದೊಡ್ಡ ವಿತರಣಾ ಜಾಲದೊಂದಿಗೆ ಪ್ಯಾನ್–ಇಂಡಿಯಾದಲ್ಲಿ ಉತ್ಪನ್ನಗಳ ಮಾರಾಟ ಮಾಡುತ್ತಿದ್ದೇವೆ. ಸಂಗ್ರಹಣೆ ಮತ್ತು ಪೂರೈಕೆ ಸರಪಳಿ ಜಾಲ ಪರಿಣಾಮಕಾರಿಯಾಗಿದೆ. ಸಂಸ್ಥೆ ವತಿಯಿಂದಲೇ ಸೇಲ್ಸ್‌ಮ್ಯಾನ್, ವಿತರಕರನ್ನು ನೇಮಿಸಲಾಗಿದೆ. 2 ಸಾವಿರ ಕಂಪನಿ ಸೇಲ್ಸ್‌ಮನ್ ಮೂಲಕ 5 ಸಾವಿರ ವಿತರಕರಿಗೆ ಸೇವೆ ನೀಡಲಾಗುತ್ತಿದೆ. ನಿತ್ಯ ನೇರವಾಗಿ 8 ಲಕ್ಷ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದೇವೆ.

‘ಮಿತ್ರ’: ಸಂಸ್ಥೆಯ ಮುಂದಿನ ಯೋಜನೆಗಳು, ಹಾಗೆಯೇ ಹೊಸ ಬ್ರಾಂಡ್ ಬಗ್ಗೆ ತಿಳಿಸಬಹುದೇ?

ಅರ್ಜುನ್: ಪೂಜಾ ಸಾಮಗ್ರಿಗಳ ಸರ್ವೀಸ್ ಆರಂಭಿಸಿದ್ದೇವೆ. ವರ್ಚುಯಲ್ ಪ್ರೇಯರ್, ವರ್ಚುಯಲ್ ಪೂಜಾಸ್ ಆರಂಭ ಮಾಡಿದ್ದೇವೆ. ಹೋಂ ಫ್ರಾಗ್ರನ್ಸ್‌ನಲ್ಲೂ ಆಟೊ ಮೈಸರ್, ಎಲೆಕ್ಟ್ರಾನಿಕ್ ಆಟೊ ಮೈಸರ್ ಪರಿಚಯಿಸಬೇಕಿದೆ. ಅಲ್ಲದೆ ಮಣೆ, ಮಂಟಪಗಳು ಸೇರಿದಂತೆ ದೇವರ ಕೊಠಡಿಗೆ ಅಗತ್ಯವಾದ ಎಲ್ಲಾ ವಸ್ತುಗಳನ್ನು ಗ್ರಾಹಕರಿಗೆ ಪೂರೈಸುವ ಉದ್ದೇಶದಿಂದ ಚನ್ನಪಟ್ಟಣದಲ್ಲಿ ವುಡನ್ ಫ್ಯಾಕ್ಟರಿ ಆರಂಭಿಸಲಾಗುತ್ತಿದೆ. ಕಾಲಾನುಸಾರ ಹೊಸ ಹೊಸ ಉತ್ಪನ್ನಗಳ ಮೂಲಕ ಸೈಕಲ್ ಬ್ರ್ಯಾಂಡ್ ಸದಾ ಗ್ರಾಹಕರ ಜೊತೆಗಿರಲಿದೆ.

‘ಮಿತ್ರ’: ಮಾರುಕಟ್ಟೆಯಲ್ಲಿ ಜಾಹೀರಾತು ಅಗತ್ಯತೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅರ್ಜುನ್: ಅಗರ್‌ಬತ್ತಿ ಕಾಮನ್ ಪ್ರಾಡಕ್ಟ್, ಜನ ಅಂಗಡಿಗೆ ಹೋಗಿ ಅಗರ್‌ಬತ್ತಿ ಕೊಡಿ ಎನ್ನುತ್ತಾರೆಯೇ ಹೊರತು ಬ್ರ್ಯಾಂಡ್ ಹೇಳುವುದು ಅಪರೂಪ. ಇದೇ ನಮಗೆ ದೊಡ್ಡ ಸವಾಲಾಗಿತ್ತು. ನಾನು ಸಂಸ್ಥೆಗೆ ಸೇರಿದಾಗ ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಬ್ರ್ಯಾಂಡ್ ಅವೇರ್ನೆಸ್ ಶೇ.5ರಷ್ಟಿತ್ತು. ನಿರಂತರ ಜಾಹೀರಾತು ಪರಿಣಾಮವಾಗಿ ಸದ್ಯ ಶೇ.25ಕ್ಕೆ ಹೆಚ್ಚಿದೆ. ಜನ ಒಟ್ಟಿಗೆ ಪ್ರಾರ್ಥಿಸುವ ಸ್ಥಳದಲ್ಲಿ ಸೈಕಲ್ ಅಗರ್‌ಬತ್ತಿ ಇರಬೇಕೆಂಬ ಚಿಂತನೆ ಬಂತು. ಭಾರತ ಕ್ರಿಕೆಟ್ ತಂಡದ ಪಂದ್ಯವಿದ್ದ ದಿನ ಅಂತಹ ಸಂದರ್ಭ ಸೃಷ್ಟಿಯಾಗುತ್ತದೆ. ಅದರಲ್ಲೂ ಪಾಕಿಸ್ತಾನದ ವಿರುದ್ಧ ಪಂದ್ಯವಿದ್ದಾಗ ಎಲ್ಲರೂ ಒಟ್ಟಿಗೆ ಪ್ರಾರ್ಥನೆ ಮಾಡುತ್ತಾರೆ. ಹಾಗಾಗಿ 2004ರಲ್ಲಿ ಭಾರತಕ್ಕೆ ಪಾಕಿಸ್ತಾನ ತಂಡ ಬಂದಿದ್ದಾಗ ಮೊದಲ ಬಾರಿ ನಾವು ಕ್ರಿಕೆಟ್‌ನಲ್ಲಿ ಪ್ರಾಯೋಜಕತ್ವ ಪಡೆದೆವು. ಬೌಂಡರಿ ಬಂದಾಗ **‘ಪ್ರತಿ ಬಾರಿ ಪ್ರಾರ್ಥಿಸಲು ಎಲ್ಲರಿಗೂ ಒಂದು ಕಾರಣವಿದೆ’** ಎಂದು ಜಾಹೀರಾತು ಪ್ರಸಾರವಾಗಿತ್ತು. ಆಗಿನಿಂದ ನಿರಂತರವಾಗಿ ಕ್ರಿಕೆಟ್‌ನಲ್ಲಿ ಥರ್ಡ್ ಅಂಪೈರ್ ಬ್ರಾಂಡಿಂಗ್ ಮಾಡುತ್ತಿದ್ದೇವೆ. ಅದಲ್ಲದೆ ಕೆಪಿಎಲ್‌ನಲ್ಲಿ ಮೈಸೂರ್ ವಾರಿಯರ್ ತಂಡದ ಓನರ್‌ಶಿಪ್ ತೆಗೆದುಕೊಳ್ಳಲಾಗಿದೆ. ಅಮಿತಾಬ್ ಬಚ್ಚನ್, ರಮೇಶ್ ಅರವಿಂದ್, ಸೌರವ್ ಗಂಗೂಲಿ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದಾರೆ.

‘ಮಿತ್ರ’: ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ಬಗ್ಗೆ ವಿವರಿಸುವಿರಾ?

ಅರ್ಜುನ್: ಯಾರೇ ಬಂದು ವಿದ್ಯಾಭ್ಯಾಸಕ್ಕಾಗಿ ಸಹಾಯ ಕೇಳಿದರೆ ಖಂಡಿತವಾಗಿ ಮಾಡುವುದು ನಮ್ಮ ಕರ್ತವ್ಯ ಎಂದು ತಾತನವರು ಹೇಳುತ್ತಿದ್ದರು. ಅದರಂತೆ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿ, ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ನೀಡಲಾಗುತ್ತಿದೆ. 33 ವರ್ಷಗಳಿಂದ ರಂಗರಾವ್ ಮೆಮೋರಿಯಲ್ ಅಂಧ ಹೆಣ್ಣು ಮಕ್ಕಳ ರೆಸಿಡೆನ್ಷಿಯಲ್ ಸ್ಕೂಲ್ ನಡೆಸಲಾಗುತ್ತಿದೆ. ಎನ್.ಆರ್.ಕಮ್ಯೂನಿಟಿ ಅಂಡ್ ಡೆವಲಪ್‌ಮೆಂಟ್ ಸೆಂಟರ್‌ನಲ್ಲಿ ವೃತ್ತಿಯಾಧಾರಿತ ಹಾಗೂ ಸ್ವಯಂ ಉದ್ಯೋಗಕ್ಕೆ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ಸಾಧ್ಯ ಹೆಣ್ಣುಮಕ್ಕಳಿಗೆ ಉದ್ಯೋಗ ಹಾಗೂ ಶಿಕ್ಷಣಕ್ಕೆ ಸಂಸ್ಥೆ ನೆರವಾಗುತ್ತಿದೆ.

‘ಮಿತ್ರ’: ರಂಗರಾವ್ ಅವರ ಬಳಿಕ ಉದ್ಯಮದಲ್ಲಿ ಮಹತ್ತರ ಸವಾಲುಗಳು ಎದುರಾದವೇ?

ಅರ್ಜುನ್: ನಮ್ಮ ತಾತ ತುಂಬಾ ಶಿಸ್ತಿನ ಮನುಷ್ಯರಾಗಿದ್ದರು. ನಾನು 3ನೇ ತರಗತಿಯಲ್ಲಿದ್ದಾಗಲೇ ಅವರು ಕಾಲವಾದರು. ಸಿನಿಮಾಗೆ ಕರೆದುಕೊಂಡು ಹೋಗುತ್ತಿದ್ದರು. ಯಾವಾಗಲೂ ಬುಕ್ ಓದು ಎನ್ನುತ್ತಿದ್ದರು. ಬಿಸ್ಕೆಟ್ ಕೊಡುತ್ತಿದ್ದರು. ಅವರ ನೆನಪು ಹಸಿರಾಗಿದೆ. ತಾತ ಅವರಿದ್ದಾಗಲೇ ನಮ್ಮ ಸಂಸ್ಥೆ ನಂಬರ್ 1 ಆಗಿತ್ತು. ಆಗಲೇ ಮಕ್ಕಳಿಗೆ ಜವಾಬ್ದಾರಿ ನೀಡಿದ್ದರಿಂದ ಯಾವ ಸವಾಲು ಎದುರಾಗಲಿಲ್ಲ. ಈವರೆಗೂ ದೇವರ ದಯೆ, ತಾಯಿ ಚಾಮುಂಡೇಶ್ವರಿ ಆಶೀರ್ವಾದ, ಗ್ರಾಹಕರ ವಿಶ್ವಾಸದಿಂದ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

‘ಮಿತ್ರ’: ಯುವ ಉದ್ಯಮಿಗಳಿಗೆ ನಿಮ್ಮ ಕಿವಿಮಾತು ಏನು?

ಅರ್ಜುನ್: ಅಗರ್‌ಬತ್ತಿ ಸರಳ ಉತ್ಪನ್ನವಲ್ಲ. ನಾವು ಅಗರ್‌ಬತ್ತಿ ಬ್ಯುಸಿನೆಸ್‌ನಲ್ಲಿಲ್ಲ. ಜನರಲ್ಲಿ ವಿಶ್ವಾಸ, ಭರವಸೆ ಮೂಡಿಸುವ ಸೇವೆಯಲ್ಲಿದ್ದೇವೆ. ಒಬ್ಬ ತಾಯಿ ತನ್ನ ಮಕ್ಕಳಿಗಾಗಿ 2 ಅಗರ್‌ಬತ್ತಿ ಹಚ್ಚಿ ಪ್ರಾರ್ಥನೆ ಮಾಡುತ್ತಾರೆ. ಹಾಗಾಗಿ ಇದು ನಂಬಿಕೆ, ಭರವಸೆಯ ಮಾಧ್ಯಮ. ದೇವರು ಮತ್ತು ಪ್ರಾರ್ಥಿಸುವವರ ನಡುವಿನ ಕೊಂಡಿ. ನಮ್ಮ ಸಂಸ್ಥೆಯ ಧ್ಯೇಯವೇ ಅದು. ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುವ ಮುನ್ನ 25 ಕ್ವಾಲಿಟಿ ಟೆಸ್ಟ್ ಮಾಡುತ್ತೇವೆ. ವಾತಾವರಣ ಅಷ್ಟು ಪವಿತ್ರವಾಗಿರಬೇಕು. ಹಾಗೆಯೇ ದೇಶದಲ್ಲಿ ಮುಂದಿನ 10 ವರ್ಷ ಯುವ ಉದ್ಯಮಿಗಳಿಗೆ ತುಂಬಾ ಅವಕಾಶಗಳಿವೆ. ಅವಸರದಿಂದ ಕಷ್ಟಕ್ಕೆ ಸಿಲುಕದೆ ಯೋಜಿತವಾಗಿ ಉದ್ಯಮ ಆರಂಭಿಸಿ, ಜವಾಬ್ದಾರಿಯಿಂದ ಮುಂದೆ ಹೋಗಬೇಕು. ಆತ್ಮವಿಶ್ವಾಸ ತುಂಬಾ ಮುಖ್ಯ ಅವಕಾಶ ಸಾಕಷ್ಟಿವೆ, ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಿ.

ಮೈಸೂರು ಮಿತ್ರ ಭಾನುವಾರ 22 ಅಕ್ಟೋಬರ್ 2023

ಮಡಿಕೇರಿ ದಸರಾ ದಶಮಂಟಪಗಳ ಶೋಭಾಯಾತ್ರೆ

ಸುಪ್ರಿಂಕೋರ್ಟ್, ರಾಜ್ಯ ಹೈಕೋರ್ಟ್ ಸೂಚನೆಯಂತೆ ಧ್ವನಿವರ್ಧಕ ಬಳಕೆ

ಮಡಿಕೇರಿ,ಅ.21– ಈ ಬಾರಿಯ ಮಡಿಕೇರಿ ದಸರಾ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಸುಪ್ರಿಂ ಕೋರ್ಟ್ ಮತ್ತು ರಾಜ್ಯ ಹೈಕೋರ್ಟ್ ನೀಡಿರುವ ಸೂಚನೆಗಳನ್ನು ಅನುಸರಿಸಿ ಧ್ವನಿವರ್ಧಕ ಬಳಸಲಾಗುತ್ತದೆ ಎಂದು ಮಡಿಕೇರಿ ದಸರಾ ದಶಮಂಟಪ ಸಮಿತಿ ಅಧ್ಯಕ್ಷ ಹೆಚ್.ಮಂಜುನಾಥ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಶಮಂಟಪ ಸಮಿತಿ ಅಧ್ಯಕ್ಷ ಹೆಚ್. ಮಂಜುನಾಥ್, ಮಡಿಕೇರಿ ದಸರಾಕ್ಕೆ 4 ಶಕ್ತಿ ದೇವತೆಗಳ ಕರಗ ಮತ್ತು ದಶ ಮಂಟಪಗಳ ಶೋಭಾಯಾತ್ರೆಯೇ ಕೇಂದ್ರ ಬಿಂದುವಾಗಿದೆ. ದಶಮಂಟಪಗಳು ಶೋಭಾಯಾತ್ರೆಯಲ್ಲಿ ಸಾವಿರಾರು ಮಂದಿ ಒಂದೆಡೆ ಸೇರುತ್ತಾರೆ. ಈ ವೇಳೆ ದಶ ಮಂಟಪಗಳ ಕಥಾ ಸಾರಾಂಶವನ್ನು ಜನರಿಗೆ ತಿಳಿಸಲು ಧ್ವನಿವರ್ಧಕಗಳು ಅವಶ್ಯಕವಾಗಿದೆ ಎಂದರು.

ಧ್ವನಿವರ್ಧಕಗಳನ್ನು ಬಳಸುವ ಸಂದರ್ಭ ಸುಪ್ರಿಂ ಮತ್ತು ಹೈಕೋರ್ಟ್ ಸೂಚನೆಗಳನ್ನು ದಶಮಂಟಪಗಳು ಪಾಲಿಸಲಿವೆ. ಕೋರ್ಟ್‌ಗಳ ಸೂಚನೆಗಳನ್ನು ಪ್ರತಿ ಮಂಟಪಗಳು ಗೌರವಿಸಲಿವೆ ಎಂದು ಮಂಜುನಾಥ್ ಹೇಳಿದರು.

ಅನುದಾನಕ್ಕೆ ಬೇಡಿಕೆ: ಈ ಬಾರಿ ಮಡಿಕೇರಿ ದಸರಾ ಉತ್ಸವಕ್ಕೆ 95 ಲಕ್ಷ ರೂ. ಗಳನ್ನು ಸರಕಾರ ಬಿಡುಗಡೆ ಮಾಡಿದೆ. ಇದಕ್ಕೆ ಕಾರಣಕರ್ತರಾದ ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂಥರ್ ಗೌಡ, ಉಸ್ತುವಾರಿ ಸಚಿವ ಬೋಸರಾಜು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೆಚ್.ಮಂಜುನಾಥ್ ಹೇಳಿದರು. ಈ ಅನುದಾನದಲ್ಲಿ ಪ್ರತಿ ಮಂಟಪಗಳಿಗೆ ಕನಿಷ್ಠ 4 ಲಕ್ಷ ರೂ. ಹಾಗೂ ಶಕ್ತಿ ದೇವತೆಗಳ 4 ಕರಗಗಳಿಗೆ ಕನಿಷ್ಠ 2 ಲಕ್ಷ ರೂಗಳ ಅನುದಾನ ನೀಡಬೇಕೆಂದು ಮನವಿ ನಗರ ದಸರಾ ಸಮಿತಿಗೆ ಮನವಿ ಮಾಡಲಾಗಿದೆ. ಅದರೊಂದಿಗೆ ಕಳಗ ಹೊರುವವರಿಗೂ ಹೆಚ್ಚಿನ ಗೌರವಧನ ನೀಡಬೇಕೆಂದು ಸಮಿತಿಯನ್ನು ಕೋರಲಾಗಿದೆ ಎಂದು ಮಂಜುನಾಥ್ ಹೇಳಿದರು.



ಸ್ವಯಂ ನಿರ್ಬಂಧ ಹೇರಿಕೆ: ಅ.19ರಂದು ದಶಮಂಟಪಗಳ ಪ್ರಮುಖರು ಸಭೆ ಸೇರಿ ಕೆಲವು ನಿಯಮಗಳನ್ನು ಜಾರಿಗೆ ತಂದಿದ್ದೇವೆ. ಈ ಬಾರಿಯ ದಶಮಂಟಪಗಳಲ್ಲಿ ಲೇಸರ್ ಲೈಟ್ ಅಳವಡಿಕೆ, ದಶಮಂಟಪಗಳ ಶೋಭಾಯಾತ್ರೆಯಲ್ಲಿ 'ಪ್ಲಾಸ್ಟಿಕ್ ಬ್ಯಾಸ್' ಬಳಸುವುದು ಹಾಗೂ ಕ್ರೇನ್‌ಗಳ ಮೂಲಕ ಧ್ವನಿವರ್ಧಕ ಅಳವಡಿಸುವುದಕ್ಕೆ ನಿರ್ಬಂಧ ಹೇರಿದ್ದೇವೆ. ಮಾತ್ರವಲ್ಲದೇ ಇತರೆ 17 ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದ್ದೇವೆ. 2 ಟ್ರ್ಯಾಕ್ಟರ್ ಬಳಸುವುದು, ಧ್ವನಿವರ್ಧಕ ಶಬ್ದ ಕಡಿಮೆಗೊಳಿಸುವುದು, ಎಲ್ಲಾ ಕಲಾಕೃತಿಗಳು ಟ್ರ್ಯಾಕ್ಟರ್‌ನಲ್ಲಿರಿಸುವುದು, ಧ್ವನಿವರ್ಧಕದಲ್ಲಿ ಭಕ್ತಿ ಸಂಗೀತಕ್ಕೆ ಆದ್ಯತೆ ನೀಡುವುದು, ತೀರ್ಪುಗಾರರ ವಿರುದ್ಧ ಧಿಕ್ಕಾರದ ಘೋಷಣೆ ಕೂಗುವ ಮಂಟಪಗಳನ್ನು 3 ವರ್ಷಗಳ ಕಾಲ ಬಹುಮಾನ ಸ್ಪರ್ಧೆಯಿಂದ ಹೊರಗಿಡುವುದು ಸೇರಿದಂತೆ ಹಲವು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಮಾತ್ರವಲ್ಲದೆ ಎಲ್ಲಾ ಮಂಟಪಗಳ ಬಳಿ ಕನಿಷ್ಠ 4 ರಿಂದ 5 ಪ್ರಥಮ ನೀಡುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ಇದು ದಶಮಂಟಪಗಳ ಸಮಿತಿ ಪ್ರಮುಖರು ಸಭೆಯಲ್ಲಿ ಚರ್ಚಿಸಿ ಜಾರಿಗೆ ತಂದ ನಿಯಮಗಳಾಗಿದೆ ಎಂದು ಹೆಚ್.ಮಂಜುನಾಥ್ ಸ್ಪಷ್ಟಪಡಿಸಿದರು.

ತೀರ್ಪುಗಾರಿಕೆಗೆ ಸ್ಥಳ ನಿಗದಿ

ಅ.24ರ ರಾತ್ರಿ ದಶಮಂಟಪಗಳು ಶೋಭಾಯಾತ್ರೆ ನಡೆಸಲಿದ್ದು ಈಗಾಗಲೇ ತೀರ್ಪುಗಾರಿಕೆಯ ಸಮಯ ಮತ್ತು ಸ್ಥಳ ನಿಗದಿ ಮಾಡಲಾಗಿದೆ ಎಂದು ಹೆಚ್.ಮಂಜುನಾಥ್ ಮಾಹಿತಿ ನೀಡಿದರು. ಅ.24ರ ರಾತ್ರಿ 10 ಗಂಟೆಗೆ ಶ್ರೀ ಪೇಟೆ ರಾಮಮಂದಿರ ಗಾಂಧಿ ಮೈದಾನದ ಬಳಿ, 11 ಗಂಟೆಗೆ ದೇಚೂರು ಶ್ರೀರಾಮ ಮಂದಿರ ಆಂಜನೇಯ ದೇವಾಲಯ ಬಳಿ, 11.45 ಗಂಟೆಗೆ ಶ್ರೀ ಕೋಟೆ ಗಣಪತಿ ಮಂಟಪ ನಗರ ಪೊಲೀಸ್ ಠಾಣೆಯ ಬಳಿ, 12.30 ಗಂಟೆಗೆ ಶ್ರೀ ಚೌಡೇಶ್ವರಿ ಮಂಟಪ ಹೋಟೆಲ್ ಹಾಪ್ಸ್ ಮುಂಭಾಗ, ಅ.25ರ ಬೆಳಗಿನ 1.15 ವೇಳೆಗೆ ಶ್ರೀ ಕೋಟೆ ಮಾರಿಯಮ್ಮ ಮಂಟಪ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗ, 1.45 ಗಂಟೆಗೆ ಶ್ರೀ ಕೋದಂಡರಾಮ ಮಂಟಪ ಮೆಟ್ರೋ ಫ್ರೆಷ್ ಮುಂಭಾಗ, ಸಿಂಥಿಯಾ ಮಳಿಗೆ ಮುಂಭಾಗ 2.15 ಗಂಟೆಗೆ ಶ್ರೀ ಕರವಲೆ ಭಗವತಿ, ಶ್ರೀ ದಂಡಿನ ಮಾರಿಯಮ್ಮ ಮಂಟಪ 3 ಗಂಟೆಗೆ ಕೊಡವ ಸಮಾಜದ ಮುಂಭಾಗ, ಶ್ರೀ ಕಂಚಿ ಕಾಮಾಕ್ಷಮ್ಮ ಮಂಟಪ 3.30ರ ಸಮಯದಲ್ಲಿ ಜನರಲ್ ತಿಮ್ಮಯ್ಯ ವೃತ್ತದ ಬಳಿ ಹಾಗೂ ಬೆಳಗಿನ 4 ಗಂಟೆಗೆ ಶ್ರೀ ಚೌಟಿ ಮಾರಿಯಮ್ಮ ಮಂಟಪ ಕಾವೇರಿ ಕಲಾ ಕ್ಷೇತ್ರದ ಮುಂಭಾಗ ತೀರ್ಪುಗಾರರಿಗೆ ಪ್ರದರ್ಶನ ನೀಡಲಿದೆ. ಅ.26ರಂದು ಎಲ್ಲಾ 10 ಮಂಟಪ ಸಮಿತಿಗಳು ಸೇರಿಕೊಂಡು ಮಡಿಕೇರಿ ಕ್ಷೇತ್ರ ಶಾಸಕರ ನೇತೃತ್ವದಲ್ಲಿ ಮಡಿಕೇರಿ ನಗರದ ಸ್ವಚ್ಛತೆಯನ್ನು ಶ್ರಮದಾನದ ಮೂಲಕ ಮಾಡಲಾಗುತ್ತದೆ ಎಂದು ಮಂಜುನಾಥ್ ವಿವರಿಸಿದರು.

ಕೋರ್ಟ್ ಸೂಚನೆಗೆ ಗೌರವ: ದಶಮಂಟಪ ಸಮಿತಿ ಕಾರ್ಯದರ್ಶಿ ಜಯಂತಿ ಆರ್.ಶೆಟ್ಟಿ ಮಾತನಾಡಿ, ವಕೀಲರೊಬ್ಬರು ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿ, ಧ್ವನಿವರ್ಧಕದಲ್ಲಿ ಅಧಿಕ ಶಬ್ದ ಬಳಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಹಿನ್ನಲೆಯಲ್ಲಿ ಈ ಬಾರಿ ದಸರಾ ಉತ್ಸವದಲ್ಲಿ ಕೋರ್ಟ್ ಸೂಚನೆಗಳನ್ನು ಪಾಲಿಸಿಕೊಂಡು ಧ್ವನಿವರ್ಧಕ ಬಳಸಲಾಗುತ್ತದೆ. ಈ ಕುರಿತು ಪೊಲೀಸ್ ಇಲಾಖೆ ಕೂಡ ದಶಮಂಟಪಗಳ ಪ್ರಮುಖರ ಸಭೆ ನಡೆಸಿ ಕೆಲವು ಸಲಹೆ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಸಂಪ್ರದಾಯ ಮತ್ತು ಕೋರ್ಟ್ ಸೂಚನೆ ಎರಡನ್ನೂ ಉಲ್ಲಂಘನೆ ಮಾಡುವುದಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದಶಮಂಟಪ ಸಮಿತಿ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಜಗದೀಶ್, ಕಾರ್ಯದರ್ಶಿಗಳಾದ ಆನಂದ್, ರಘುಪತಿ, ಶ್ರೀ ಕೋದಂಡರಾಮ ಉತ್ಸವ ಸಮಿತಿ ಅಧ್ಯಕ್ಷ ಗೋಪಿನಾಥ್ ಉಪಸ್ಥಿತರಿದ್ದರು.

ಬಸ್ಸು–ಲಾರಿ ಡಿಕ್ಕಿ: ತಪ್ಪಿದ ಭಾರಿ ಅನಾಹುತ

ಗುಡ್ಡೆಹೊಸೂರು, ಅ.21– ಇಲ್ಲಿಗೆ ಸಮೀಪದ ನಿಸರ್ಗಧಾಮದ ಬಳಿ ಖಾಸಗಿ ಬಸ್ಸು ಮತ್ತು ಜಲ್ಲಿ ಕಲ್ಲು ತುಂಬಿದ ಮಿನಿನ ಲಾರಿ ನಡುವೆ ಅಪಘಾತ ಸಂಭವಿಸಿದ್ದು, ಭಾರಿ ಅನಾಹುತ ತಪ್ಪಿದೆ. ಲಾರಿ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿ ಪಾರಾಗಿದ್ದಾರೆ. ಲಾರಿಯ ಸ್ಟೀಯರಿಂಗ್ ತುಂಡಾಗಿ ಈ ಅಪಘಾತ ನಡೆದಿದೆ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾತಂಡ ಮೊಣ್ಣಪ್ಪ ನಿಧನಕ್ಕೆ ಗಣ್ಯರ ಸಂತಾಪ



ಮಡಿಕೇರಿ,ಅ.21– ಅಖಿಲ ಕೊಡವ ಸಮಾಜದ ಮಾಜಿ ಅಧ್ಯಕ್ಷ ಮಾತಂಡ ಮೊಣ್ಣಪ್ಪ ನಿಧನಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ತೀವ್ರ ಸಂತಾಪ ಸೂಚಿಸಿದ್ದಾರೆ. ಸಾಮಾಜಿಕ ಪ್ರಜ್ಞೆ ಹಾಗೂ ಸಾಮಾಜಿಕ ಕಳಕಳಿ ಹೊಂದಿದ್ದ ಮಾತಂಡ ಮೊಣ್ಣಪ್ಪ ಅವರ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ದೇವರು ಮೃತರ ಕುಟುಂಬಕ್ಕೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಎ.ಎಸ್. ಪೊನ್ನಣ್ಣ ಶೋಕ ವ್ಯಕ್ತಪಡಿಸಿದ್ದಾರೆ. ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ, ಅಖಿಲ ಕೊಡವ ಸಮಾಜ ಪೊಮ್ಮಕ್ಕಡ ಪರಿಷತ್ ಅಧ್ಯಕ್ಷೆ ಬಾಚರಣಿಯಂಡ ರಾಣು ಅಪ್ಪಣ್ಣ, ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ, ಕೊಡಗು ಜಿಲ್ಲಾ ಏಲಕ್ಕಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಸೂದನ ಎಸ್.ಈರಪ್ಪ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಸಂತಾಪ ವ್ಯಕ್ತಪಡಿಸಿವೆ.

ನ.3, ವಿ.ಪೇಟೆಯಲ್ಲಿ ತಾಲೂಕು ಮಟ್ಟದ ಸ್ಪರ್ಧೆ

ವಿರಾಜಪೇಟೆ, ಅ.21– ಗಡಿ ಭಾಗವಾದ ವಿರಾಜಪೇಟೆ ಕರ್ನಾಟಕ ಸಂಘ 68ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ನ.3 ರಂದು ಶುಕ್ರವಾರ ಸ್ಥಳೀಯ ಪುರಭವನದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಾಲೂಕು ಮಟ್ಟದ ವಿವಿಧ ಸ್ಪರ್ಧಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಮಾಳೇಟಿರ ಬೆಲ್ಲು ಬೋಪಯ್ಯ ತಿಳಿಸಿದ್ದಾರೆ.

ಕರ್ನಾಟಕ ಸಂಘದ ವತಿಯಿಂದ ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕು ಮಟ್ಟದ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗಕ್ಕೆ 'ಕನ್ನಡ ಹಾಡಿನ ನೃತ್ಯ' 1 ರಿಂದ 7ನೇ ತರಗತಿ ಮತ್ತು ಪ್ರೌಢಶಾಲೆ ಒಂದು ಶಾಲೆಯಿಂದ 9 ವಿದ್ಯಾರ್ಥಿಗಳು ಒಂದು ತಂಡಕ್ಕೆ ಅವಕಾಶ, ಕಾಲೇಜು ವಿಭಾಗಕ್ಕೆ ದೇಶಭಕ್ತಿಗೀತೆಗಳ ಸಾಮೂಹಿಕ ನೃತ್ಯ ಮತ್ತು ಸಾರ್ವಜನಿಕರಿಗೆ ಜಾನಪದ ಗೀತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಭಾಗವಹಿಸುವವರು ಅ.25 ರೊಳಗಾಗಿ ಸಂಘದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಬೆಲ್ಲು ಬೋಪಯ್ಯ ಹೇಳಿದರು.

ಸಂಘದ ಖಜಾಂಚಿ ಕೆ.ಯು.ಗಣೇಶ್ ತಮ್ಮಯ್ಯ ಮಾತನಾಡಿ, ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪುರಭವನದಲ್ಲಿ ನಡೆಯುವ ಸ್ಪರ್ಧಾ ಕಾರ್ಯಕ್ರಮವನ್ನು ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಉದ್ಘಾಟಿಸಲಿದ್ದಾರೆ. ಕರ್ನಾಟಕ ಸಂಘದ ಅಧ್ಯಕ್ಷ ಬೆಲ್ಲು ಬೋಪಯ್ಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ಶಾಸಕ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಭಾಗವಹಿಸಲಿದ್ದಾರೆ. ಈ ಸಂದರ್ಭ ಕ್ರೀಡಾ ಕ್ಷೇತ್ರದ ಮಾದಂಡ ಪಿ.ತಿಮ್ಮಯ್ಯ ಅವರಿಗೆ ಸನ್ಮಾನಿಸಿ, ಗೌರವಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಮುಂಡ್ಯೋಳಂಡ ಕುಸುಮ ಸೋಮಣ್ಣ, ನಿರ್ದೇಶಕರಾದ ಚೆಲ್ಲವಂಡ ಪಿ.ಕಾವೇರಪ್ಪ, ಅಪ್ಪನೆರವಂಡ ಎಂ.ಜೋಯಪ್ಪ, ಮಳವಂಡ ಜಿ.ಮಾಚಯ್ಯ, ಕಂಜಿತಂಡ ಗಿಣಿ ಮೊಣ್ಣಪ್ಪ ಉಪಸ್ಥಿತರಿದ್ದರು.

ಪೊಲೀಸರ ಕರ್ತವ್ಯ ನಿಷ್ಠೆಯಿಂದ ಸಮಾಜ ಶಾಂತಿಯುತ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಮಾ

ಮಂಡ್ಯ, ಅ.21– ಪೊಲೀಸರ ಕರ್ತವ್ಯ ನಿಷ್ಠೆಯಿಂದ ಸಮಾಜದಲ್ಲಿ ಪ್ರತಿಯೊಬ್ಬರೂ ಶಾಂತಿಯುತ ಮತ್ತು ನೆಮ್ಮದಿ ಜೀವನ ನಡೆಸಲು ಸಾಧ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಜಿ.ರಮಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಮಾಜದ ನಿರ್ವಹಣೆಗೆ ಹಲವಾರು ಇಲಾಖೆಗಳಿವೆ. ಆದರೆ ಸೇನೆ ಹಾಗೂ ಪೊಲೀಸ್ ಇಲಾಖೆ ವಿಶೇಷವಾಗಿದೆ. ಹುತಾತ್ಮರಿಗೆ ನಮನ ಸಲ್ಲಿಸುವ ಪದ್ಧತಿ ಸೇನೆ ಹಾಗೂ ಪೊಲೀಸ್ ಇಲಾಖೆಯಲ್ಲಿದೆ. ಇದಕ್ಕೆ ಅಭಿನಂದನೆಗಳು ಎಂದ ಅವರು, ಸಮಾಜದ ನಿರ್ವಹಣೆಗೆ ಎಲ್ಲಾ ರಂಗಗಳು ಮುಖ್ಯವಾಗುತ್ತದೆ. ಸಮಾಜದ ಶಾಂತಿಯುತ ನಿರ್ವಹಣೆ ಹಾಗೂ ಸುವ್ಯವಸ್ಥೆಗೆ ಎಲ್ಲರೂ ಮುಖ್ಯ, ಸಮಾಜಕ್ಕೆ ಸೇವೆ ಸಲ್ಲಿಸುವುದು ಎಲ್ಲರ ಮನೋಭಾವವಾಗಿರಬೇಕು. ಸೇವೆಯಲ್ಲಿ ಪ್ರಾಣ ತೆತ್ತವರು ಮಾತ್ರ ಹೆಚ್ಚಲ್ಲಾ. ನಾವು ನಮ್ಮ ಕರ್ತವ್ಯವನ್ನು ಪ್ರಾಮಾಣಿಕ ಹಾಗೂ ನಿಷ್ಠೆಯಿಂದ ಮಾಡಿದರೂ ಕೂಡ ಅಭಿನಂದನಾರ್ಹ ಎಂದರು.



ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ದೇಶಕ್ಕಾಗಿ ಸೇವೆ ಸಲ್ಲಿಸುವ ಮೂಲಕ ತಮ್ಮ ಪ್ರಾಣತೆತ್ತ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ. ಹುತಾತ್ಮರಾದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಗೌರವಿಸಿದರೆ ನಮ್ಮ ದೇಶ ಹಾಗೂ ಸಂವಿಧಾನದ ಗೌರವ ಹೆಚ್ಚಾಗುತ್ತದೆ. ಸಮವಸ್ತ್ರ ಧರಿಸಿ ಸಮಯದ ಇತಿಮಿತಿ ಇಲ್ಲದೇ, ಕುಟುಂಬವನ್ನು ಲೆಕ್ಕಿಸದೇ ಸಮಾಜಕ್ಕಾಗಿ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳ ಸೇವೆ ನಿಜಕ್ಕೂ ಶ್ಲಾಘನೀಯ ಎಂದರು.

ಪೊಲೀಸರು ಸಮಾಜವನ್ನೇ ತಮ್ಮ ಕುಟುಂಬ ಎಂದು ಕೆಲಸ ನಿರ್ವಹಿಸುತ್ತಾರೆ. ಕರ್ತವ್ಯ, ನಿಷ್ಠೆ ಹಾಗೂ ಸಮಯಪಾಲತೆ, ಶಿಸ್ತು, ವಿನಯತೆ, ಬದ್ಧತೆಯಿಂದ ಕೆಲಸ ನಿರ್ವಹಿಸುತ್ತಾರೆ. ಪೊಲೀಸ್ ಅಧಿಕಾರಿಗಳು ನಿಮ್ಮ ವೈಯಕ್ತಿಕ ಬದುಕಿಗೂ ಗಮನಕೊಟ್ಟು ಆರೋಗ್ಯ ಕಾಪಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಇತ್ತೀಚೆಗೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಅಪಘಾತವಾದಾಗ ನಮ್ಮ ಆರಕ್ಷಕ ಸಿಬ್ಬಂದಿ ನಮ್ಮ ಆರಕ್ಷಕ ಸಿಬ್ಬಂದಿ ತಮ್ಮ ಜೀವ ಲೆಕ್ಕಿಸದೆ ಕಾರಿನ ಗಾಜನ್ನು ಹೊಡೆದು ಪ್ರಾಣ ಉಳಿಸಿದರು. ಇದು ಅವರ ಸಾಮಾಜಿಕ ಕಳಕಳಿ ಸೂಚಿಸುತ್ತದೆ. ಅಪಘಾತದಲ್ಲಿ ಕಾಪಾಡಿದ ಪೊಲೀಸ್ ಅಧಿಕಾರಿಗಳನ್ನು ಜಿಲ್ಲಾಡಳಿತ ವತಿಯಿಂದ ಗೌರವಿಸಲಾಗಿದೆ ಎಂದರು.


ಇದೇ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಹುತಾತ್ಮ ಸಿಬ್ಬಂದಿಗೆ ಗೌರವ ನಮನ ಸಲ್ಲಿಸಿದರು. ಹುತಾತ್ಮ ಯೋಧರಿಗೆ ಗೌರವ ಸೂಚಕವಾಗಿ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಲಾಯಿತು.

ಅಮೆರಿಕಾ ವಿವಿಯೊಂದಿಗೆ 'ವಿದ್ಯಾರ್ಥಿ ವಿನಿಮಯ'ಕ್ಕೆ ಎಸ್‌ಟಿಜಿ ಒಪ್ಪಂದ

ಒಪ್ಪಂದಕ್ಕೆ ಸಹಿ ಹಾಕಿದ ಸಂಸ್ಥೆ ಅಧ್ಯಕ್ಷ ಸಿ.ಎಸ್.ಪುಟ್ಟರಾಜು

ಚಿನಕುರಳಿ, ಅ.21– ಗ್ರಾಮೀಣ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಶಿಕ್ಷಣ ಪದ್ಧತಿ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಅಮೆರಿಕಾ ಯೂನಿವರ್ಸಿಟಿಯೊಂದಿಗೆ ಚಿನಕುರಳಿಯ ಎಸ್‌ಟಿಜಿ ಶಿಕ್ಷಣ ಸಂಸ್ಥೆ 'ವಿದ್ಯಾರ್ಥಿ ವಿನಿಮಯ'ಕ್ಕೆ ಸಹಿ ಹಾಕುವ ಮೂಲಕ ಒಪ್ಪಂದ ಮಾಡಿಕೊಂಡಿದೆ.

ಚಿನಕುರಳಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಅಧ್ಯಕ್ಷರೂ ಆದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಸಿಇಓ ಸಿ.ಪಿ.ಶಿವರಾಜು, ಟ್ರಸ್ಟಿ ತನುಶ್ರೀ ಶಿವರಾಜು ಅವರು ಅಮೆರಿಕಾದ ಸಾಗಿನಾವ್ ವ್ಯಾಲಿ ಯೂನಿವರ್ಸಿಟಿಯ ಡೀನ್ ಡಾ.ಜೇಮ್ಸ್ ಹಾಗೂ ಪ್ರೊ.ಡಾ. ಡೇವಿಡ್ ಸೇರಿದಂತೆ ಪ್ರೊಫೆಸರ್ ಹಾಗೂ ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಿದ್ಯಾರ್ಥಿ ವಿನಿಮಯಕ್ಕೆ ಸಹಿ ಹಾಕಲಾಯಿತು. ಆ ಮೂಲಕ ಅಂತಾರಾಷ್ಟ್ರೀಯ ಶಿಕ್ಷಣ ಸಂಸ್ಥೆಯೊಂದಿಗೆ ವಿದ್ಯಾರ್ಥಿ ವಿನಿಮಯಕ್ಕೆ ಒಪ್ಪಂದ ಮಾಡಿಕೊಂಡ ರಾಜ್ಯದ ಎರಡನೇ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಇದಕ್ಕೂ ಮುನ್ನ ಬೆಳಗಾವಿಯ ಸೈನಿಕ ಶಾಲೆ ವಿದ್ಯಾರ್ಥಿ ವಿನಿಮಯಕ್ಕೆ ಒಪ್ಪಂದ ಮಾಡಿಕೊಂಡಿತ್ತು.



ಗ್ರಾಮೀಣ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಶಿಕ್ಷಣ ಪದ್ಧತಿ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಸಂಸ್ಥೆ ಅಧ್ಯಕ್ಷ ಸಿ.ಎಸ್. ಪುಟ್ಟರಾಜು ಅವರ ಸಲಹೆಯಂತೆ ಸಿಇಓ ಸಿ.ಪಿ.ಶಿವರಾಜು ಅವರು ಅಮೆರಿಕಾದ ಸಾಗಿನಾವ್ ವ್ಯಾಲಿ ಯೂನಿವರ್ಸಿಟಿಯೊಂದಿಗೆ ವಿದ್ಯಾರ್ಥಿ ವಿನಿಮಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ತೀರ್ಮಾನ ಕೈಗೊಂಡಿದ್ದರು. ಅದರಂತೆ ವಿದ್ಯಾರ್ಥಿ ವಿನಿಮಯ ಒಪ್ಪಂದಕ್ಕೆ ಒಪ್ಪಿಗೆ ನೀಡಿದ ನಾಗಿನಾವ್ ವ್ಯಾಲಿ ಯೂನಿವರ್ಸಿಟಿಯ ಡೀನ್ ಡಾ.ಜೇಮ್ಸ್, ಪ್ರೊ.ಡಾ.ಡೇವಿಡ್ ಅವರು ಕಳೆದ 2022 ಜುಲೈ ತಿಂಗಳಲ್ಲಿ ತಾಲೂಕಿನ ಎಸ್‌ಟಿಜಿ ಶಿಕ್ಷಣ ಸಂಸ್ಥೆಗೆ ಆಗಮಿಸಿ ಅಧ್ಯಕ್ಷ ಸಿ.ಎಸ್. ಪುಟ್ಟರಾಜು, ಸಿಇಓ ಸಿ.ಪಿ.ಶಿವರಾಜು ಹಾಗೂ ಸಂಸ್ಥೆ ಟ್ರಸ್ಟಿಗಳ ವಿದ್ಯಾರ್ಥಿ ವಿನಿಮಯ ಒಪ್ಪಂದಕ್ಕೆ ಸಹಿ ಹಾಕಿದ್ದರು. ಇದೀಗ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪುಟ್ಟರಾಜು, ಸಿಇಓ ಸಿ.ಪಿ.ಶಿವರಾಜು ಅವರು ಅಮೆರಿಕಾಕ್ಕೆ ತೆರಳಿ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಒಪ್ಪಂದ ಮಾಡಿಕೊಂಡಿದ್ದಾರೆ.

ವಿದ್ಯಾರ್ಥಿ ವಿನಿಮಯ ಒಪ್ಪಂದ ಪ್ರಕಾರ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ನಾಲ್ವರು ವಿದ್ಯಾರ್ಥಿಗಳು ಅಮೆರಿಕಾದ ಸಾಗಿನಾವ್ ವ್ಯಾಲಿ ಯೂನಿವರ್ಸಿಟಿಗೆ ತೆರಳಿ 15 ದಿನಗಳ ಕಾಲ ಅಮೆರಿಕಾದ ಶಿಕ್ಷಣ ವ್ಯವಸ್ಥೆ, ಗುಣಮಟ್ಟ, ಅಲ್ಲಿನ ಶಾಲೆಗಳಲ್ಲಿ ದೊರೆಯುವ ಮೂಲ ಸೌಕರ್ಯಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು, ಅಮೆರಿಕದ ಸಾಗಿನಾವ್ ವ್ಯಾಲಿ ಯೂನಿವರ್ಸಿಟಿಯ ನಾಲ್ವರು ವಿದ್ಯಾರ್ಥಿಗಳು ಎಸ್‌ಟಿಜಿ ಶಿಕ್ಷಣ ಸಂಸ್ಥೆಗೆ ಆಗಮಿಸಿ ಇಲ್ಲಿನ ಶಿಕ್ಷಣ ಪದ್ಧತಿ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ವಿದ್ಯಾರ್ಥಿ ವಿನಿಮಯದ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಅಮೆರಿಕಾಕ್ಕೆ ತೆರಳುವ ಎಲ್ಲಾ ಖರ್ಚು ವೆಚ್ಚವನ್ನು ಎಸ್‌ಟಿಜಿ ಶಿಕ್ಷಣ ಸಂಸ್ಥೆ ಭರಿಸಲು ಮುಂದಾಗಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾನಕ್ಕೆ

ಶಿಕ್ಷಕರು ಹೆಸರು ನೋಂದಾಯಿಸಿಕೊಳ್ಳಿ: ಮರಿತಿಬ್ಬೇಗೌಡ



ಮಂಡ್ಯ, ಅ.21– ವಿಧಾನಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ 2024ರ ಜೂನ್‌ನಲ್ಲಿ ನಡೆಯುವ ಚುನಾವಣೆ ಸಂಬಂಧ ಈಗಾಗಲೇ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದ್ದು, ತಪ್ಪದೇ ಶಿಕ್ಷಕರು ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು. ನಗರದ ಸರ್ಕಾರಿ ಮಹಿಳಾ ಕಾಲೇಜು, ಪಿಇಎಸ್ ಕಾಲೇಜು, ಐಟಿಐ ಕಾಲೇಜು, ಮಾಂಡವ್ಯ ಕಾಲೇಜಿಗೆ ಶನಿವಾರ ಭೇಟಿ ನೀಡಿದ ಅವರು, ಉಪನ್ಯಾಸಕರನ್ನು ಭೇಟಿ ಮಾಡಿ ಮಾತನಾಡಿದರು.

ಈಗಾಗಲೇ ಶಿಕ್ಷಕರ ಕ್ಷೇತ್ರದ ಚುನಾವಣೆ ಪ್ರಕ್ರಿಯೆ ಆರಂಭವಾಗಿದೆ. ಚುನಾವಣಾ ಆಯೋಗ ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದು, ಮೊದಲ ಹಂತವಾಗಿ ಶಿಕ್ಷರಿಗೆ ಚುನಾವಣಾ ಆಯೋಗ ನಮೂನೆ 19ರ ಫಾರಂ ಅನ್ನು ಕಳುಹಿಸಿಕೊಟ್ಟಿದೆ. ಹಾಗೂ ಜೊತೆಗೆ ನಾವು ಸಹ ಕಾಲೇಜುಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ಎಲ್ಲರೂ ನಿಗದಿತ ಅವಧಿ ಒಳಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ನೋಂದಣಿ ಕಾರ್ಯಕ್ಕೆ ಸಹಕರಿಸಬೇಕು ಎಂದರು.

ಶಿಕ್ಷಕರು ಮತದಾನಕ್ಕೆ ಹೆಸರು ನೋಂದಾಯಿಸಿಕೊಂಡು ಹಕ್ಕು ಚಲಾಯಿಸಬೇಕು. ಶಾಲಾ ಮುಖ್ಯಸ್ಥರಿಂದ ಅರ್ಜಿ ಪಡೆದು, ಅಧಿಕೃತ ವಿಳಾಸ ಮತ್ತು ಸಂಸ್ಥೆ ಹೆಸರು ನಮೂದಿಸಿ, ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳಿ ಎಂದ ಅವರು, ಕಳೆದ 20 ವರ್ಷಗಳಿಂದ ನಿಮ್ಮೆಲ್ಲರ ಪ್ರತಿನಿಧಿಯಾಗಿ ವಿಧಾನಸಭೆ ಒಳಗೆ ಮತ್ತು ಹೊರಗೆ ಹೋರಾಟ ಮಾಡುತ್ತಾ ಬಂದಿದ್ದೇನೆ. ನಿಮ್ಮೆಲ್ಲರ ಹಕ್ಕೊತ್ತಾಯ ಮತ್ತು ಮನವಿಗಳಿಗೆ ಸ್ಪಂದಿಸಿ, ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬಂದಿದ್ದೇನೆ ಎಂದರು.

ಈ ವೇಳೆ ಮುಖಂಡರಾದ ಜಿ.ಎನ್. ಶಿವರುದ್ರಪ್ಪ, ಹೆಚ್.ವಿ.ಜಯರಾಮು, ಕೃಷ್ಣೇಗೌಡ, ಜಯರಾಮು, ಸಂತೋಷ್, ದಾನಿಗೌಡ, ಕೆಂಪಮ್ಮ, ನವೀನ್, ಲೋಕೇಶ್, ಲಿಂಗರಾಜು, ರಾಘು ಇತರರಿದ್ದರು.

ಮೈಸೂರು ದಸರಾ ವಜ್ರಮುಷ್ಠಿ ಕಾಳಗದಲ್ಲಿ ಚಾ.ನಗರದ ವೆಂಕಟೇಶ್ ಜೆಟ್ಟಿ

ಚಾಮರಾಜನಗರ, ಅ.21– ಮೈಸೂರು ದಸರಾದ ವಿಜಯದಶಮಿಯ ಬೆಳಗ್ಗೆ ಶಮಿ ಪೂಜೆಗೂ ಮೊದಲು ನಡೆಯುವ ವಜ್ರಮುಷ್ಠಿ ಕಾಳಗದಲ್ಲಿ ಭಾಗವಹಿಸಲು ನಗರದ ವೆಂಕಟೇಶ್ ಜೆಟ್ಟಿ ತೆರಳಿದರು.

ನಗರದ ದೇವಾಂಗ ಬೀದಿಯಲ್ಲಿರುವ ದೊಡ್ಡ ಗರಡಿ, ವಜ್ರಮುಷ್ಠಿ ಆಖಾಡದಲ್ಲಿ ವೆಂಕಟೇಶ್ ಜೆಟ್ಟಿ ಅವರನ್ನು ತರಬೇತುದಾರರಾದ ಪುಟ್ಟಣ್ಣಜೆಟ್ಟಿ, ರಮೇಶ್‌ಜೆಟ್ಟಿ ಮತ್ತು ಮಂಜುನಾಥ್ ಜೆಟ್ಟಿ ಬೀಳ್ಕೊಟ್ಟರು.

ವಿಜಯ ದಶಮಿ ದಿನದ ಕಾರ್ಯಕ್ರಮಗಳು ಆರಂಭವಾಗುವುದು ವಜ್ರಮುಷ್ಠಿ ಕಾಳಗದಿಂದಲೇ. ಈ ಕಾಳಗವಾದ ಬಳಿಕ ರಾಜಮನೆತನದವರು ಶಮಿ ಪೂಜೆ ನಡೆಸುತ್ತಾರೆ. ದಸರಾ ಮಹೋತ್ಸವದಲ್ಲಿ ವಜ್ರಮುಷ್ಠಿ ಕಾಳಗಕ್ಕೆ ಅತ್ಯಂತ ಮಹತ್ವವಿದೆ. ವಿಜಯದಶಮಿಯ ದಿನ ನಡೆಯುವ ಜಂಬೂಸವಾರಿಗೂ ಮೊದಲು ರಾಜ ಮನೆತನದವರ ಸಮ್ಮುಖದಲ್ಲಿ ಈ ಕಾಳಗ ನಡೆಯುತ್ತದೆ.



ಕಾಳಗದಲ್ಲಿ ಯಾರಾದರೂ ಒಬ್ಬ ಜಟ್ಟಿಯ ತಲೆಯಲ್ಲಿ ರಕ್ತ ಸುರಿಯಲು ಆರಂಭವಾದ ತಕ್ಷಣ ಕಾಳಗವನ್ನು ಮುಕ್ತಾಯ ಮಾಡುವುದು ರೂಢಿಯಿಂದಲೂ ನಡೆದುಕೊಂಡು ಬಂದಿದೆ. ಬೆಂಗಳೂರು, ಮೈಸೂರು, ಚನ್ನಪಟ್ಟಣ ಮತ್ತು ಚಾಮರಾಜನಗರದ ತಲಾ ಒಬ್ಬೊಬ್ಬ ಜಟ್ಟಿ ಈ ವಜ್ರಮುಷ್ಠಿ ಕಾಳಗದಲ್ಲಿ ಭಾಗವಹಿಸುವುದು ರೂಢಿ.

ಬೆಳೆ ಸಮೀಕ್ಷೆ ಮಾಹಿತಿಯನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನಮೂದಿಸಿ

ಚಾ.ನಗರದಲ್ಲಿ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ

ಚಾಮರಾಜನಗರ, ಅ.21– ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಬೆಳೆ ಸಮೀಕ್ಷೆ ಕುರಿತ ಎಲ್ಲಾ ರೈತರ ಸಂಪೂರ್ಣ ಮಾಹಿತಿಯನ್ನು 'ಫ್ರೂಟ್ಸ್' (Fruits) ತಂತ್ರಾಂಶದಲ್ಲಿ ನಮೂದಿಸಿ ರೈತರಿಗೆ ನ್ಯಾಯಯುತ ಪರಿಹಾರ ತಲುಪಿಸಲು ಸಹಕರಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಈ ವರ್ಷ ಇತಿಹಾಸ ಕಾಣದ ಬರಕ್ಕೆ ತುತ್ತಾಗಿದೆ. ಮಳೆ ಇಲ್ಲದ ಕಾರಣ ರೈತರು ಪರಿತಪಿಸುವಂತಾಗಿದೆ. ಬೆಳೆ ಕೈಸೇರದೆ ಸಂಕಷ್ಟಕ್ಕೀಡಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ರೈತರ ಪರ ನಿಲ್ಲಬೇಕಾಗಿದೆ ಎಂದು ಹೇಳಿದರು.



ಅಧಿಕಾರಿಗಳು ಚಾಮರಾಜನಗರದಲ್ಲಿ ಈಗಾಗಲೇ ಬೆಳೆ ಸಮೀಕ್ಷೆ ನಡೆಸಿದ್ದೀರಿ. ಆದರೆ, 2015–16ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ 2.16 ಲಕ್ಷ ರೈತರು ಇದ್ದು, ಈವರೆಗೆ 1.8 ಲಕ್ಷ ರೈತರ ಮಾಹಿತಿಯನ್ನು ಮಾತ್ರ ಫ್ರೂಟ್ಸ್ ತಂತ್ರಾಂಶದಲ್ಲಿ ನಮೂದಿಸಲಾಗಿದೆ. ಜಿಲ್ಲೆಯ ಎಲ್ಲಾ ರೈತರ ಮಾಹಿತಿಯನ್ನು ಸರಿಯಾಗಿ ತಂತ್ರಾಂಶದಲ್ಲಿ ನಮೂದಿಸಿದರೆ ಮಾತ್ರ ಅವರಿಗೆ ಸೂಕ್ತ ಪರಿಹಾರ ನೀಡುವುದು ಸಾಧ್ಯ.

ಅಲ್ಲದೆ, ಬೆಳೆ ನಷ್ಟಕ್ಕೆ ರೈತರಿಗೆ 5 ಎಕರೆವರೆಗೆ ಪರಿಹಾರ ಸಿಗಲಿದೆ. ಒಮ್ಮೆ ಬೆಳೆ ಸಮೀಕ್ಷೆ ಮುಗಿಸಿದ ನಂತರ ಬಿಟ್ಟುಹೋದ ರೈತರ ಹೆಸರನ್ನು ಮತ್ತೆ ಪರಿಹಾರದ ಪಟ್ಟಿಗೆ ಸೇರಿಸುವುದು ಅಸಾಧ್ಯ. ನಗದಿನ ಮೂಲಕವೂ ಪರಿಹಾರ ನೀಡಿಕೆಗೆ ಅವಕಾಶ ಇಲ್ಲ. ಪರಿಹಾರದ ಹಣ ಬ್ಯಾಂಕ್ ಖಾತೆಗೆ ಸಂದಾಯವಾಗಲಿದೆ. ಹೀಗಾಗಿ ಅಧಿಕಾರಿಗಳು ಈಗಲೇ ಬೆಳೆ ಸಮೀಕ್ಷೆಯನ್ನು ಶೇ.100ರಷ್ಟು ದಕ್ಷತೆಯಿಂದ ಮುಗಿಸಬೇಕು ಎಂದು ಸಚಿವರು ಸೂಚಿಸಿದರು.

ಅಕ್ರಮ ಸಕ್ರಮ ಬಗರ್‌ಹುಕುಂ ಯೋಜನೆಯಡಿ ಸಾಗುವಳಿ ಚೀಟಿ ನೀಡುವಂತೆ ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳನ್ನು ಮುಂದಿನ ಒಂದು ವರ್ಷದಲ್ಲಿ ವಿಲೇವಾರಿಗೊಳಿಸಬೇಕು ಎಂದು ಸಚಿವರಾದ ಕೃಷ್ಣ ಬೈರೇಗೌಡ ನಿರ್ದೇಶನ ನೀಡಿದರು.

ಬಗರ್ ಹುಕುಂ ಅರ್ಜಿ ವಿಲೇವಾರಿ ಸಂದರ್ಭದಲ್ಲಿ ಅಧಿಕಾರಿಗಳು ಯಾವುದೇ ಪ್ರಭಾವಿಗಳ ಅಥವಾ ರಾಜಕೀಯ ಪಕ್ಷದವರಿಗೆ ಅನುಕೂಲವಾಗುವಂತೆ ವರ್ತಿಸಬಾರದು, ಬದಲಾಗಿ ಬಡ ಜನರಿಗೆ ಮತ್ತು ಅರ್ಹರಿಗೆ ನ್ಯಾಯ ಒದಗಿಸಲು ಬದ್ಧರಾಗಿರಬೇಕು. ಅಲ್ಲದೆ, ಅಧಿಕಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಗರ್‌ಹುಕುಂ ಆ್ಯಪ್ ಅಭಿವೃದ್ಧಿಪಡಿಸುತ್ತಿದ್ದು ಇದರ ಸಹಾಯದಿಂದ ಸ್ಯಾಟಲೈಟ್ ಇಮೇಜ್ ಪಡೆದು ನೈಜ ಸಾಗುವಳಿದಾರರನ್ನು ಗುರುತಿಸಬಹುದು. ಅಲ್ಲದೆ, ಇ–ಸಾಗುವಳಿ ಚೀಟಿಯನ್ನೂ ನೀಡಬಹುದು ಎಂದರು.

ಚಾಮರಾಜನಗರದಲ್ಲೂ ಒಟ್ಟು 67 ಕಂದಾಯ ಗ್ರಾಮಗಳು ರಚನೆಯಾಗಬೇಕಿತ್ತು. ಆದರೆ, ಈವರೆಗೆ 53 ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದರೆ, 13 ಗ್ರಾಮಗಳಿಗೆ ಮಾತ್ರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಇನ್ನೂ 14 ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆ, 32 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿದೆ. ಹೀಗಾಗಿ ಮುಂದಿನ ಮೂರು ತಿಂಗಳಲ್ಲಿ ಕ್ರಮಕೈಗೊಂಡು ಕಂದಾಯ ಗ್ರಾಮ ರಚಿಸಿ ಹಕ್ಕುಪತ್ರ ವಿತರಿಸಿ ಎಂದು ಸೂಚಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಕಂದಾಯ ಇಲಾಖೆಯ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತ ಹುಡೇದ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಅರಣ್ಯ ಸಂರಕ್ಷಣಾ ಅಧಿಕಾರಿ ಸಂತೋಷ್‌ಕುಮಾರ್ ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯಕ್ಕೆ ಬರ ಪರಿಹಾರ ನೀಡಲು ಮನವಿ

ಚಾಮರಾಜನಗರ: ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಹೀಗಾಗಿ, ಕೇಂದ್ರ ಸರ್ಕಾರ ನೀತಿ, ನಿಯಮದಂತೆ ರಾಜ್ಯಕ್ಕೆ ಬರ ಪರಿಹಾರ ನೀಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಬೇರೆ ರಾಜ್ಯಗಳಿಗೆ ನೀಡಿದಂತೆ ನಮ್ಮ ರಾಜ್ಯಕ್ಕೂ ಪರಿಹಾರ ನೀಡಬೇಕಾಗಿದ್ದು ಕೇಂದ್ರದ ಕರ್ತವ್ಯ. ನಮಗೆ ಬರಬೇಕಾದ ಅನುದಾನ ಬಿಟ್ಟು ಹೆಚ್ಚುವರಿ ನಿರೀಕ್ಷೆ ಮಾಡುತ್ತಿಲ್ಲ. ನೀತಿ ನಿಯಮಗಳ ಪ್ರಕಾರ ಅನುದಾನ ನೀಡಲೇಬೇಕು ಎಂದು ಹೇಳಿದರು. ರಾಜ್ಯದಲ್ಲಿ 216 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ. ಈ ವರದಿಯ ಬಗ್ಗೆ ಕೇಂದ್ರ ಸರ್ಕಾರ ಶೀಘ್ರವೇ ತೀರ್ಮಾನ ಕೈಗೊಳ್ಳಬೇಕು. ನಮ್ಮ ಹಕ್ಕಿನ ಪ್ರಕಾರ, ಎನ್‌ಡಿಆರ್‌ಎಫ್ ಪರಿಹಾರ ರಾಜ್ಯಕ್ಕೆ ನೀಡಬೇಕು ಎಂದರು.

ಕೇಂದ್ರ ಸಚಿವರ ಭೇಟಿಗೆ ಅವಕಾಶವಿಲ್ಲ: ಬರ ಪರಿಹಾರ ಕೇಳಲು ಕೇಂದ್ರ ಗೃಹ ಹಾಗೂ ಕೃಷಿ ಸಚಿವರನ್ನು ಸೆ.23ರಿಂದ ಭೇಟಿಗೆ ಅವಕಾಶ ಕೇಳುತ್ತಿದ್ದೇವೆ. ಆದರೆ, ಇಲ್ಲಿಯವರೆಗೂ ಭೇಟಿಗೆ ಅವಕಾಶವನ್ನೇ ನೀಡಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ದೂರಿದರು.

ಅಧಿಕಾರಿಗಳು ಪ್ರತಿದಿನ ಕೇಂದ್ರ ಸಚಿವರ ಕಚೇರಿಗೆ ಕರೆ ಮಾಡುತ್ತಿದ್ದಾರೆ. ನಾನೂ ಪತ್ರ ಬರೆದು ಕಾಲಾವಕಾಶ ಕೇಳಿದ್ದೇನೆ. ಆದರೂ ಅವಕಾಶ ಸಿಕ್ಕಿಲ್ಲ. ಮುಂದಿನ ವಾರ ದೆಹಲಿಗೆ ಹೋಗಿ ಅಲ್ಲೇ ಕುಳಿತು ಭೇಟಿ ಮಾಡುವ ಪ್ರಯತ್ನ ಮಾಡುತ್ತೇನೆ ಎಂದರು.

ಚಾಮರಾಜನಗರ ದಸರಾದಲ್ಲಿ ಕಳಪೆ ದೀಪಾಲಂಕಾರ

ಕರ್ನಾಟಕ ಸೇವಾ ಸಂಘದಿಂದ ಚೆಸ್ಕಾಂ ಮುಂದೆ ಪ್ರತಿಭಟನೆ

ಚಾಮರಾಜನಗರ, ಅ.21– ನಗರದ ದಸರಾ ಕಾರ್ಯಕ್ರಮದಲ್ಲಿ ಕಳಪೆ ದೀಪಾಲಂಕಾರ ಮಾಡಲಾಗಿದೆ ಎಂದು ಆರೋಪಿಸಿ ಯುವಸೇನೆ ಕರ್ನಾಟಕ ಸೇವಾ ಸಂಘದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಚೆಸ್ಕಾಂ ಕಚೇರಿ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಗುತ್ತಿಗೆದಾರರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾರ್ಯಪಾಲಕ ನಿರ್ವಾಹಕ ಅಭಿಯಂತರ ವಸಂತ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿ, ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಮ್ಮನೆ ಪ್ರಶಾಂತ ಮಾತನಾಡಿ, ನಗರದಲ್ಲಿ ದಸರಾ ಮಾಡುವುದಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಿಂದ ಟೆಂಡರ್ ಪಡೆದಿರುವ ಗುತ್ತಿಗೆದಾರರು ಸರಿಯಾದ ರೀತಿಯಲ್ಲಿ ದೀಪಾಲಂಕಾರ ಮಾಡಿರುವುದಿಲ್ಲ. ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಜೋಡಿ ಉದ್ಯಾನವನ ಯಾವುದೇ ದೀಪಾಲಂಕಾರವಿಲ್ಲದೇ, ಕತ್ತಲಿನಿಂದ ಕೂಡಿತ್ತು. ಜಿಲ್ಲಾಡಳಿತ ಭವನಕ್ಕೆ ಕಳೆದ ವರ್ಷಕ್ಕಿಂತಲೂ ತೀರ ಕಳಪೆಯಾಗಿ ದೀಪಾಲಂಕಾರ ಮಾಡಲಾಗಿತ್ತು ನಗರದಲ್ಲಿ ಮಾಡಿರುವ ದೀಪಾಲಂಕಾರಗಳು ಪ್ರತಿ ದಿನ ಒಂದಲ್ಲ ಒಂದು ಕಡೆ ಕೆಟ್ಟುನಿಂತಿತ್ತು. ಭ್ರಮರಾಂಭ ಚಿತ್ರಮಂದಿರ ಮುಂಭಾಗದಲ್ಲಿ ಅರಮನೆಯ ರೀತಿಯಲ್ಲಿ ಮಾಡಬೇಕಾದ ಆಕೃತಿಯನ್ನು ಬದಲಾಯಿಸಿ ಎಲ್‌ಇಡಿ ದೀಪಗಳು ಕಳಪೆಯಿಂದ ಕೂಡಿದ್ದು, ಅಕ್ಷರಗಳು ತಪ್ಪಾಗಿತ್ತು ಎಂದು ಆರೋಪಿಸಿದರು.



ಮೈಸೂರು ಮಿತ್ರ

ಒಂದನೇ ಪುಟದಿಂದ

ಮೈಸೂರಲ್ಲಿ ಇಂದು, ನಾಳೆ ಏರ್ ಶೋ

ನಿರ್ಮಾಣ ಹಾಗೂ ದ್ವಿಚಕ್ರ ವಾಹನ, ಕಾರುಗಳು, ಆಟೋರಿಕ್ಷಾ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಇಂದು ಸಂಜೆ ವಾಯು ಪಡೆಯ ಕೆಲವು ವಿಮಾನಗಳು ಹಾರಾಟ ನಡೆಸಿದವು. ಅವುಗಳ ಭಾರೀ ಸದ್ದಿಗೆ ಅಂಗಡಿ, ಮನೆಗಳಿಂದ ಹೊರ ಬಂದ ಜನ ಕೆಲ ಕಾಲ ಕುತೂಹಲದಿಂದ ವೀಕ್ಷಿಸಿದರು. ಸುಮಾರು 45 ನಿಮಿಷಗಳ ಕಾಲ ವಾಯು ಪಡೆಯ ವಿಮಾನಗಳು ಸಾಹಸ ಪ್ರದರ್ಶನ ನಡೆಸಿದವು. ಭಾನುವಾರ ಸಂಜೆ ನಡೆಯಲಿರುವ ವೈಮಾನಿಕ ಪ್ರದರ್ಶನದ ರಿಹರ್ಸಲ್ ವೀಕ್ಷಣೆಗೆ ಪ್ರವೇಶ ಉಚಿತವಾಗಿದ್ದು, ಸಾರ್ವಜನಿಕರು ಒಂದು ಗಂಟೆ ಮೊದಲೇ ಅಂದರೆ ಮಧ್ಯಾಹ್ನ 3 ಗಂಟೆಗೆ ಕ್ರೀಡಾಂಗಣದಲ್ಲಿ ಹಾಜರಿರಬೇಕೆಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಅಕ್ಟೋಬರ್ 23ರಂದು ನಡೆಯಲಿರುವ ಏರ್ ಶೋಗೆ ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ನೀಡಿರುವ ಪಾಸ್ ಹೊಂದಿದವರಿಗೆ ಮಾತ್ರ ಪ್ರವೇಶಾವಕಾಶವಿದ್ದು, ಅಂದೇ ಸಂಜೆ 7 ಗಂಟೆಗೆ ನಡೆಯಲಿರುವ ಪಂಜಿನ ಕವಾಯತು ರಿಹರ್ಸಲ್‌ಗೂ ಅದೇ ಪಾಸ್ ಅನ್ವಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದಸರಾ ಕಿಶೋರಿ'

ಪೈಲ್ವಾನರು ಎದುರಾಳಿಗೆ ಮಣ್ಣು ಮುಕ್ಕಿಸಿ ಪ್ರಶಸ್ತಿ ಜಯಿಸಿದರು. 'ದಸರಾ ಕಂಠೀರವ' ಪ್ರಶಸ್ತಿಗೆ ಬೆಳಗಾಂನ ಮುದೋಳ್ ಪೈ.ಸುನೀಲ್ ಪಡತಾರೆ ಹಾಗೂ ಜಮಖಂಡಿ ಪೈ.ಗೋಪಾಲ್ ಗೂಳಿ ನಡುವೆ ನಡೆಯಬೇಕಿದ್ದ ಪಂದ್ಯದಲ್ಲಿ ಅನಾರೋಗ್ಯ ಹಿನ್ನೆಲೆ ಪಂದ್ಯದಿಂದ ಪೈ.ಗೋಪಾಲ್ ಗೂಳಿ ಹಿಂದೆ ಸರಿದಿದ್ದರಿಂದಾಗಿ ಪೈ.ಸುನೀಲ್ ಪಡತಾರೆ ಅವರನ್ನು ವಿಜೇತರೆಂದು ಘೋಷಣೆ ಮಾಡಲಾಯಿತು.

'ದಸರಾ ಕೇಸರಿ' ಪ್ರಶಸ್ತಿಗೆ ಬೆಳಗಾಂ ಪೈ.ರೋಹನ್ ನಾರಾಯಣ್ ಗವಾಡೆ ಹಾಗೂ ಹಳಿಯಾಳದ ಎಂ.ಜಿ.ಮಂಜುನಾಥ್ ನಡುವೆ ನಡೆದ 30 ನಿಮಿಷಗಳ ಕಾಳಗದಲ್ಲಿ ಅಂತಿಮವಾಗಿ ಬೆಳಗಾಂ ಪೈ.ರೋಹನ್ ನಾರಾಯಣ್ ಗವಾಡೆ ವಿಜಯ ಸಾಧಿಸಿದರು. ಹಾಗೆಯೇ 'ದಸರಾ ಕಿಶೋರ' ಪ್ರಶಸ್ತಿಗೆ ದಾವಣಗೆರೆ ಪೈ.ಮಹೇಶ್ ಪಿ.ಗೌಡ ಹಾಗೂ ಪೈ.ಕೊರವರ ಸಂಜೀವ್ ನಡುವೆ ನಡೆದ ಹಣಾಹಣಿಯಲ್ಲಿ ಚುರುಕಿನ ಆಟವಾಡಿದ ಪೈ.ಕೊರವರ ಸಂಜೀವ್ ಪ್ರಶಸ್ತಿ ಜಯಿಸಿದರು, ಮಹಿಳಾ ವಿಭಾಗದ ಪ್ರಶಸ್ತಿ ಪೈಪೋಟಿಯಲ್ಲಿ ಬೆಳಗಾಂ ಪೈ.ಸ್ವಾತಿ ಪಾಟೀಲ್ ಅವರನ್ನು ಚಿತ್ ಮಾಡುವ ಮೂಲಕ ಹಳಿಯಾಳದ ಪೈ.ಲಕ್ಷ್ಮಿ ಪಾಟೀಲ್ 'ದಸರಾ ಕಿಶೋರಿ'ಯಾಗಿ ಹೊರಹೊಮ್ಮಿದ್ದರು.

'ದಸರಾ ಕುಮಾರ' ಸಮಬಲ: ಕ್ರೀಡಾಭಿಮಾನಿಗಳಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಮೈಸೂರು ವಿಭಾಗ ಮಟ್ಟದ ಮೈಸೂರು 'ದಸರಾ ಕುಮಾರ' ಪ್ರಶಸ್ತಿ ಪಂದ್ಯದಲ್ಲಿ ಮೈಸೂರಿನ ಉದಯೋನ್ಮುಖ ಕುಸ್ತಿ ಪಟು ಪೈ.ದೀಕ್ಷಿತ್ ಕುಮಾರ್ ಹಾಗೂ ಶ್ರೀರಂಗಪಟ್ಟಣದ ಮಹದೇವಪುರ ಪೈ.ವಿಕಾಶ್ 30 ನಿಮಿಷಗಳ ಜಿದ್ದಾಜಿದ್ದಿನ ಹೋರಾಟ ನಡೆಸಿದರೂ ಇಬ್ಬರು ಪೈಲ್ವಾನರು ಒಂದೇ ಒಂದು ಪಾಯಿಂಟ್ ಗಳಿಸುವಲ್ಲಿ ವಿಫಲರಾದರು. ಹೆಚ್ಚುವರಿ ಸಮಯ ನೀಡಬಹುದು ಎಂಬ ನಿರೀಕ್ಷೆಯಲ್ಲಿದ್ದ ಪೈಲ್ವಾನರಿಗೆ ದಸರಾ ಉಪ ಸಮಿತಿ ನಿರ್ಧಾರ ಕುಸ್ತಿ ಪಂದ್ಯ ಸಮಬಲಗೊಂಡಿದೆ ಎಂದು ಘೋಷಣೆ ಮಾಡುವ ಮೂಲಕ ಪ್ರಶಸ್ತಿಯನ್ನು ವಾಪಸ್ ಪಡೆದುಕೊಂಡಿತು. ಕಳೆದ ವರ್ಷವೂ 'ದಸರಾ ಕುಮಾರ' ಪ್ರಶಸ್ತಿ ಪಂದ್ಯದಲ್ಲಿ ಪರಾಭವಗೊಂಡು ಈ ವರ್ಷ ಗೆಲ್ಲುವ ಉತ್ಸಾಹದಲ್ಲಿದ್ದ ಮೈಸೂರು ಪೈ.ದೀಕ್ಷಿತ್ ಕುಮಾರ್ ಸಾಕಷ್ಟು ಪ್ರಯತ್ನ ನಡೆಸಿದರೂ, ಎದುರಾಳಿ ಪೈ.ವಿಕಾಶ್ ಅಂಕಗಳನ್ನು ಬಿಟ್ಟುಕೊಡದೆ ರಕ್ಷಣಾತ್ಮಕವಾಗಿ ಆಟವಾಡಿದ್ದರಿಂದ ಇಬ್ಬರೂ ಪೈಲ್ವಾನರು ನಿರಾಸೆ ಅನುಭವಿಸುವಂತಾಯಿತು.

50 ಲಕ್ಷಕ್ಕೆ ಏರಿಕೆ

ನಾಗರಿಕರ ಸುರಕ್ಷತೆ ಮತ್ತು ಭದ್ರತೆಗೆ ಹೆಚ್ಚಿನ ರಕ್ಷಣೆ ಕೊಡುವ ಅಗತ್ಯವಿದೆ. ಸುಗಮ ಸಂಚಾರ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಬೇಕು. ಹೀಗಾಗಿ ಹೆಚ್ಚುವರಿ ಪೊಲೀಸ್ ಹುದ್ದೆ ಸೃಷ್ಟಿಸಿದ್ದೇವೆ. ಹೆಚ್ಚುವರಿ ಮಹಿಳಾ ಮತ್ತು ಸಂಚಾರ ಠಾಣೆಗಳನ್ನು ಆರಂಭಿಸಿದ್ದೇವೆ. ಹೊಸ ವಾಹನ ಖರೀದಿಗೆ 100 ಕೋಟಿ ರೂ.ಗಳನ್ನು ನೀಡಲಾ ಗುವುದು ಎಂದರು. 2125 ಪೊಲೀಸ್ ವಸತಿ ಗೃಹಗಳನ್ನು ನಿರ್ಮಿಸಲು 450 ಕೋಟಿ ನೀಡಲಾಗುವುದು. ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ಆರೋಗ್ಯ ಭಾಗ್ಯಕ್ಕಾಗಿ 100 ಕೋಟಿ ರೂ ಒದಗಿಸಲಾಗಿದೆ. ನಿವೃತ್ತ ಸಿಬ್ಬಂದಿಯ ಆರೋಗ್ಯ ಮತ್ತು ಚಿಕಿತ್ಸೆಗಾಗಿ ನಿಶ್ಚಿತ ಠೇವಣಿ ಇರಿಸಲಾಗಿದೆ. ಪೊಲೀಸ್ ಸಿಬ್ಬಂದಿಯ ಮಕ್ಕಳ ಶಿಕ್ಷಣಕ್ಕಾಗಿ ಏಳು ಜಿಲ್ಲೆಗಳಲ್ಲಿ ಏಳು ಪೊಲೀಸ್ ಸಾರ್ವಜನಿಕ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಬದ್ಧವಾಗಿದೆ. ಪೊಲೀಸ್ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುತ್ತಿದೆ ಎಂದು ಹೇಳಿದರು.

ಮಾತಂಡ ಮೊಣ್ಣಪ್ಪ ನಿಧನ

ಸಮಾಜ ಅಧ್ಯಕ್ಷರಾಗಿ, ದೇಶ ತಕ್ಕರಾಗಿ ಕಾರ್ಯನಿರ್ವಹಿಸಿದ ಮೊಣ್ಣಪ್ಪ ಹಲವಾರು ಸಂಘ-ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಇವರು ಕೊಡವ ಸಮಾಜ ಒಕ್ಕೂಟದ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಅದರ ಬೆಳವಣಿಗೆಗೆ ಕಾರಣರಾಗಿದ್ದರು. ಕೊಡವ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ಆರಂಭವಾದ ಹಳ್ಳಿಗಟ್ಟುವಿನ ಸಿ.ಐ.ಟಿ ಕಾಲೇಜು ಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಜಮ್ಮಬಾಣೆ ಸಮಸ್ಯೆ, ಕೊಡವರ ಕೋವಿ ಹಕ್ಕಿನ ವಿಚಾರದಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸಿದ್ದರು. ಮಾತಂಡ ಮೊಣ್ಣಪ್ಪ ಅವರ ಪತ್ನಿ ಶ್ರೀಮತಿ ಕೊಟೇರ ಕಮಲ ತಂಗಮ್ಮ ಕುಂಜಿಲ ಗ್ರಾಮದ ಶಾಲೆಯ ಮುಖ್ಯ ಶಿಕ್ಷಕಿ. ಮೊಣ್ಣಪ್ಪನವರು ಅನಾರೋಗ್ಯದಿಂದಾಗಿ ಬೆಂಗಳೂರಿನ ಮಗನ ಮನೆಯಲ್ಲಿ ನೆಲೆಸಿದ್ದರು.

ಟಿಕೆಟ್‌ಗೆ ಭಾರಿ ಬೇಡಿಕೆ

ನಾಳೆ (ಅಕ್ಟೋಬರ್ 22) ಬೆಳಗ್ಗೆ 10 ಗಂಟೆಯಿಂದ ವೆಬ್‌ಸೈಟ್ ಮೂಲಕ ಹೆಚ್ಚಿನ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಮಾರಾಟ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಗೋಲ್ಡ್ ಕಾರ್ಡ್‌ಗೆ 6,000 ಸಾವಿರ ರೂಪಾಯಿ, ಅರಮನೆಯಲ್ಲಿ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ 3,000 ಹಾಗೂ 2,000 ರೂ. ನಿಗದಿ ಮಾಡಲಾಗಿದೆ. ಅಲ್ಲದೆ ಬನ್ನಿಮಂಟಪದಲ್ಲಿ ನಡೆಯುವ ಟಾರ್ಚ್‌ಲೈಟ್ ಪರೇಡ್ ವೀಕ್ಷಣೆಗೆ 500 ರೂಪಾಯಿ ಟಿಕೆಟ್ ದರ ನಿಗದಿ ಮಾಡಲಾಗಿದೆ ಎಂದು ಹೇಳಿದ್ದಾರೆ. ವೆಬ್‌ಸೈಟ್ ವಿಳಾಸ mysoredasara.gov.in ಮೂಲಕ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಖರೀದಿಸಬಹುದು. ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ರೀತಿಯಲ್ಲಿ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಮಾರಾಟ ಇರುವುದಿಲ್ಲ ಎಂದು ಡಾ.ರಾಜೇಂದ್ರ ಸ್ಪಷ್ಟಪಡಿಸಿದ್ದಾರೆ. ಗೋಲ್ಡ್ ಕಾರ್ಡ್ ಮತ್ತು ಟಿಕೆಟ್‌ಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಈಗಿರುವ ಆಸನಗಳ ಜೊತೆಗೆ ಮತ್ತಷ್ಟು ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಆದರೆ ಎಷ್ಟು ಆಸನಗಳನ್ನು ಹೆಚ್ಚುವರಿಯಾಗಿ ಹಾಕಬೇಕೆಂದು ಇಂಜಿನಿಯರಿಂಗ್ ಸೆಕ್ಷನ್ ನವರು ತೀರ್ಮಾನ ಮಾಡುತ್ತಿದ್ದಾರೆ. ಈ ಸಂಬಂಧ ನಾಳೆ ಬೆಳಿಗ್ಗೆ ತೀರ್ಮಾನ ಮಾಡಿ ಲಭ್ಯತೆಗನುಗುಣವಾಗಿ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಮಾರಾಟ ಮಾಡಲಾಗುವುದು ಎಂದು ಡಾ.ರಾಜೇಂದ್ರ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ 6 ಸಾವಿರ ಕೊಡಬೇಕೆ...?

ಗೋಲ್ಡ್‌ಕಾರ್ಡ್ ಮಾರಾಟ ಮಾಡಲಾಗಿದೆ. ಇನ್ನು ಗೋಲ್ಡ್‌ಕಾರ್ಡ್‌ಗೆ ಬೇಡಿಕೆ ಇದೆ ಎಂಬ ಕಾರಣದಿಂದ ಜಂಬೂಸವಾರಿ ಮೆರವಣಿಗೆ ಹಾಗೂ ಟಾರ್ಚ್‌ಲೈಟ್ ಪರೇಡ್‌ಗೆ ಒಂದು ದಿನ ಇರುವಂತೆ ಹೆಚ್ಚುವರಿ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗು ತ್ತಿದೆ. ಇದರಿಂದ ಒಂದು ದಿನದ ಕಾರ್ಯಕ್ರಮಕ್ಕೆ 6,000 ರೂಪಾಯಿ ನೀಡಬೇಕೇ... ಎಂದು ಜನರು ಕಿಡಿಕಾರುತ್ತಿದ್ದಾರೆ. ಅದೂ ನಾಳೆ ಬೆಳಿಗ್ಗೆ 10 ಗಂಟೆಯಿಂದ ಹೆಚ್ಚುವರಿ ಗೋಲ್ಡ್ ಕಾರ್ಡ್ ಮಾರಾಟ ಆರಂಭಿಸುತ್ತಿದ್ದು, ಈತನಕ ಎಷ್ಟು ಆಸನಗಳಿರಬೇಕು ಎಂದು ಇನ್ನು ತೀರ್ಮಾನ ಮಾಡಿಲ್ಲ. ಈ ವಿಚಾರವಾಗಿ ಜಿಲ್ಲಾಡಳಿತಕ್ಕೆ ಬಹಳಷ್ಟು ಗೊಂದಲಗಳಿರುವುದು ಸ್ಪಷ್ಟ. ದಸರಾಗೆ ಮುನ್ನ ಅಧಿಕಾರಿಗಳು ಈ ಎಲ್ಲಾ ತಯಾರಿ ಮಾಡಿಕೊಳ್ಳದೆ ದಸರಾ ಉದ್ಘಾಟನೆಯಾದ ಮೂರು ದಿನದ ನಂತರ ಹಾಗೂ ಸಮಾಪ್ತಿಗೊಳ್ಳುವ ಒಂದು ದಿನದ ಮುನ್ನ ತಯಾರಿ ಮಾಡಿಕೊಳ್ಳುತ್ತಿರುವುದು ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ನೃತ್ಯ, ಗಾಯನದ ಮೂಲಕ ರಂಜನೆ

ವೇದಿಕೆಗೆ ಆಗಮಿಸಿದ ಮೈಸೂರು ಮಹಾರಾಜ ಕಾಲೇಜು ವಿದ್ಯಾರ್ಥಿಗಳು 'ಸಂವಿಧಾನವೇ ಶ್ರೇಷ್ಠ ಗ್ರಂಥ', ಆ ಗ್ರಂಥದ ಮೂಲಕ ಪ್ರತಿಯೊಬ್ಬರಿಗೂ ನ್ಯಾಯ ಸಿಗುತ್ತಿದೆ. ಸ್ತ್ರೀ ಸಮಾನತೆಗಾಗಿ ಹೋರಾಟ ನಡೆಸಿದ ಹಾಗೂ ಸಂವಿಧಾನದ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನದ ಸಾಹಸ ಗಾಥೆಗಳನ್ನು ತಮ್ಮ ಅಮೋಘ ನೃತ್ಯದ ಮೂಲಕ ತಿಳಿಸುವುದರೊಂದಿಗೆ ಭವ್ಯ ಆರಂಭ ನೀಡಿದರು.

ಯೋಗ ನೃತ್ಯ: ಮೈಸೂರು ವಿಶ್ವವಿದ್ಯಾನಿಲಯದ ಯೋಗ ತರಬೇತಿ ವಿದ್ಯಾರ್ಥಿಗಳ ತಂಡ 'ಏಕದಂತಾಯ ವಕ್ರತುಂಡಯಾ' ಹಾಡಿಗೆ ಅನುಗುಣವಾಗಿ ಯೋಗಾಭ್ಯಾಸದ ವಿವಿಧ ಭಂಗಿಗಳ ಮೂಲಕ ಉತ್ತಮ ಆರೋಗ್ಯಕ್ಕಾಗಿ ಯೋಗಾಸನ ಅಗತ್ಯವೆಂಬ ಸಂದೇಶ ಸಾರಿದರು. ಕೊಡಗಿನ ನಾಪೊಕ್ಲು ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಕೊಡವ ಸಾಂಪ್ರದಾಯಿಕ ನೃತ್ಯದ ಸೊಬಗಿಗೆ ನೆರೆದಿದ್ದವರು ಕುಣಿದು ಕುಪ್ಪಳಿಸಿದರು. ಬಳಿಕ ಡ್ಯಾನ್ಸ್ ಕ್ಲಾಸ್ ಮೈಸೂರು ತಂಡದವರು ಉಪೇಂದ್ರ ಅಭಿನಯದ 'ಕಬ್ಜಾ' ಚಿತ್ರದ ಹಾಡಿಗೆ ಹಾಗೂ 'ಯುವ ರತ್ನ' ಚಿತ್ರದ 'ಫೀಲ್ ದ ಪವರ್' ಹಾಡಿಗೆ ಹೆಜ್ಜೆ ಹಾಕಿ ಯುವ ಸಮೂಹವನ್ನು ರಂಜಿಸಿದರು.

ಫ್ಯಾಷನ್ ಲೋಕ: ನವಮಿ ತಂಡದ ರೂಪದರ್ಶಿಯರು ವೆಸ್ಟ್ರನ್ ಹಾಗೂ ಪಾರಂಪರಿಕ ವಸ್ತ್ರವಿನ್ಯಾಸದೊಂದಿಗೆ ಫ್ಯಾಷನ್ ಲೋಕವನ್ನು ಅನಾವರಣಗೊಳಿಸಿದರು. ಬಳುಕುವ ಬೆಕ್ಕಿನಂತೆ ಹೆಜ್ಜೆ ಹಾಕಿದ ಸುಂದರಿಯರು ಯುವ ಮನಸುಗಳ ಹೃದಯ ಗೆದ್ದರು. ನಟಿ ಆಶಿಕಾ ರಂಗನಾಥ್ ಮೋಹಕ ನೋಟಕ್ಕೆ ಮೈಮರೆತ ಪಡ್ಡೆ ಹುಡುಗರು ಫ್ಯಾಷನ್ ಲೋಕದಲ್ಲಿ ತೇಲಾಡಿದರು.


ಬೆನ್ನಿ ದಯಾಳ್ ಮಿಂಚು: 'ಯುವ ದಸರಾ' ವೇದಿಕೆಯ ಕಡೆಯ ದಿನ ಮಿಂಚು ಹರಿಸಿದ ಬಾಲಿವುಡ್ ಗಾಯಕ ಬೆನ್ನಿ ಕಪೂರ್, ರಣವೀರ್ ಕಪೂರ್ ಅಭಿನಯದ 'ಯೇ ಜವಾನಿ ಹೇ ದಿವಾನಿ ಚಿತ್ರದ ಭತ್ತ ಮೇರಿ ದಿಲ್', 'ಬೆಫಿಕ್ರೆ' ಚಿತ್ರ ಬೆಫೀಕ್ರಿ ಚಿತ್ರದ 'ನಶೆ ಸೇ ಚಡ್ ಗಯಾ ಸೆ', 'ದಿಲ್ ಸೆ' ಚಿತ್ರದ 'ಚಯ್ಯ ಚಯ್ಯ', 'ಜಾನೆ ತು ಜಾನೆ ನ್' ಚಿತ್ರದ 'ಪಪ್ಪು ಕಾಂಟ್ ಡ್ಯಾನ್ಸ್' ಸೇರಿದಂತೆ ಹಲವು ಜನಪ್ರಿಯ ಹಿಂದಿ ಹಾಡುಗಳನ್ನು ಹಾಡುವ ಮೂಲಕ ಮಿಂಚು ಹರಿಸಿದರು.

ಎಸ್.ಎಲ್. ಭೈರಪ್ಪನವರ 'ಪರ್ವ' ಕಾದಂಬರಿಗೆ ಸಿನಿಮಾ ಸ್ಪರ್ಶ : 'ದಿ ಕಾಶ್ಮೀರ್ ಫೈಲ್ಸ್' ನಿರ್ದೇಶಕನ ಮಹಾಯೋಜನೆ

ಬೆಂಗಳೂರು, ಅ.21– ಕನ್ನಡದ ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ 'ಪರ್ವ' ಕಾದಂಬರಿಯನ್ನು ಆಧರಿಸಿ ಸಿನಿಮಾ ನಿರ್ಮಾಣವಾಗುತ್ತಿದೆ. ಬಾಲಿವುಡ್ ನಿರ್ದೇಶಕ 'ದಿ ಕಾಶ್ಮೀರ್ ಫೈಲ್ಸ್' ನಿರ್ದೇಶಕರೂ ಆದ ವಿವೇಕ್ ಅಗ್ನಿಹೋತ್ರಿ ಅವರು ಇದನ್ನು ಸಿನಿಮಾ ಮಾಡಲು ನಿರ್ಧರಿಸಿದ್ದಾರೆ.

ಇಂದು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಈ ಸಿನಿಮಾದ ಟೈಟಲ್ ಲಾಂಚ್ ಮಾಡಲಾಯಿತು. 'ದಿ ಕಾಶ್ಮೀರ್ ಫೈಲ್ಸ್', 'ದಿ ವ್ಯಾಕ್ಸಿನ್ ವಾರ್' ಸಿನಿಮಾಗಳ ಖ್ಯಾತಿಯ ವಿವೇಕ್ ಅಗ್ನಿಹೋತ್ರಿ 'ಪರ್ವ' ಕೃತಿಯನ್ನು ಸಿನಿಮಾ ರೂಪಕ್ಕಿಳಿಸುತ್ತಿದ್ದಾರೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡ ವಿವೇಕ್ ಅಗ್ನಿಹೋತ್ರಿ, ಒಂದು ವರ್ಷದ ಹಿಂದೆ ಪ್ರಕಾಶ್ ಬೆಳವಾಡಿ ನನಗೆ ಕರೆ ಮಾಡಿದ್ದರು. ಭೈರಪ್ಪನವರ ಜೊತೆ ಮಾತನಾಡುವಂತೆ ಹೇಳಿದ್ದರು. 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾವನ್ನು ನೋಡಿ ಅವರು ಪರ್ವ ಸಿನಿಮಾ ಮಾಡುವಂತೆ ಹೇಳಿದರು. ಮಹಾಭಾರತದಲ್ಲಿ ನಾವು ಕೇಳದೆ ಇರುವಂತಹ ವಿಷಯಗಳನ್ನು ಬರೆದಿದ್ದಾರೆ. ಇದಕ್ಕಾಗಿ ಸಾಕಷ್ಟು ವರ್ಷಗಳ ಕಾಲ ಶ್ರಮಿಸಿದ್ದಾರೆ. ಈ ಸಿನಿಮಾ ಮೂರು ಪಾರ್ಟ್‌ಗಳಲ್ಲಿ ಬರುತ್ತದೆ ಎಂದು ಹೇಳಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ (ಎಡದಿಂದ) ನಟಿ–ನಿರ್ಮಾಪಕಿ ಪಲ್ಲವಿ ಜೋಷಿ, ಹೆಸರಾಂತ ಕನ್ನಡದ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಚಿತ್ರನಿರ್ದೇಶಕ ವಿವೇಕ್ ಅಗ್ನಿಹೋತ್ರಿ ನಟ–ನಿರ್ದೇಶಕ ಪ್ರಕಾಶ್ ಬೆಳವಾಡಿ ಉಪಸ್ಥಿತರಿದ್ದಾರೆ.

ಪಲ್ಲವಿ ಜೋಷಿ ಮಾತನಾಡಿ, ಪರ್ವ ಕಾದಂಬರಿಯನ್ನು ಸಿನಿಮಾ ಮಾಡುತ್ತಿರುವುದು ಜವಾಬ್ದಾರಿ ಹೆಚ್ಚಿಸಿದೆ. ಈ ವಿಷಯವನ್ನು ನಿರ್ವಹಿಸುವುದು ಅಷ್ಟು ಸುಲಭವಲ್ಲ. ಭೈರಪ್ಪ ಸರ್ ಗುರಿಯನ್ನು ಸಿನಿಮಾ ರೂಪಕ್ಕಿಳಿಸುತ್ತಿರುವುದು ಖುಷಿ ಕೊಟ್ಟಿದೆ. ಪರ್ವ ಸಿನಿಮಾವನ್ನು 3 ಭಾಗದಲ್ಲಿ ಕನ್ನಡ ಹಾಗೂ ಹಿಂದಿ ಎರಡೂ ಭಾಷೆಯಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಪ್ರಕಾಶ್ ಇಲ್ಲದೇ ಇದು ಆಗುತ್ತಿರಲಿಲ್ಲ ಎಂದರು.

ಎಸ್.ಎಲ್. ಭೈರಪ್ಪ ಅವರು ಮಾತನಾಡಿ, 'ಪರ್ವ ಕಾದಂಬರಿಯನ್ನು ಸಿನಿಮಾ ಮಾಡಲು ಬಂದಿದ್ದಾರೆ. ವಿವೇಕ್ ಅಗ್ನಿಹೋತ್ರಿ ಅವರಿಗೆ ಸಾಕಷ್ಟು ಅನುಭವವಿದೆ. ಇವರು ಮಾಡಿರುವ ಸಿನಿಮಾಗಳು ಸಕ್ಸಸ್ ಆಗಿವೆ. ಕನ್ನಡ ಹಾಗೂ ಹಿಂದಿ ಭಾಷೆಯಲ್ಲಿ ಸಿನಿಮಾ ಮಾಡುತ್ತಿದ್ದಾರೆ. ಇಂಗ್ಲೀಷ್ ನಲ್ಲಿ ಸಿನಿಮಾ ಮಾಡಬೇಕು. ನಿಜವಾದ ಮಹಾಭಾರತ್ ಏನು ಅನ್ನೋದನ್ನು ತೋರಿಸಬಹುದು. ಸಿನಿಮಾ ಮಾಡಲು ನನ್ನ ಒಪ್ಪಿಗೆ ಇದೆ. ಹಾರೈಕೆ ಇದೆ ಎಂದರು.

ಪರ್ವ ಕಾದಂಬರಿಯ ವಿಷಯ ಏನು ಅನ್ನುವುದು ಓದಿದವರಿಗೆ ಗೊತ್ತೇ ಇದೆ. ಮಹಾಭಾರತವನ್ನು ಆಯಾ ಪಾತ್ರಗಳ ಮೂಲಕ ಮತ್ತೊಮ್ಮೆ ಹೇಳಿರೋದೇ ಈ ಪರ್ವ ಕಾದಂಬರಿಯ ವಿಶೇಷ. ಅಂತಹ ಈ ಒಂದು ಕಾದಂಬರಿಯನ್ನು ಕ್ಲಾಸಿಕ್ ಕೃತಿ ಎಂದೇ ಪರಿಗಣಿಸಲಾಗುತ್ತದೆ. ಇದೀಗ ಈ ಪರ್ವ ಕಾದಂಬರಿಗೆ ವಿವೇಕ್ ಅಗ್ನಿಹೋತ್ರಿ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಜಂಬೂಸವಾರಿಗೆ ಮಾವುತರು, ಕಾವಾಡಿಗಳಿಗೆ ಹೊಸ ಪೋಷಾಕು

ಮಾವುತರಿಗೆ ಕೆಂಪು ಬಣ್ಣ, ಕಾವಾಡಿಗಳಿಗೆ ಕಪ್ಪು ಬಣ್ಣದ ಧಿರಿಸು



ಮೈಸೂರು,ಅ.21(ಎಂಟಿವೈ)– ಜಂಬೂ ಸವಾರಿ ಮೆರವಣಿಗೆಯಲ್ಲಿ ಗಜಪಡೆಯನ್ನು ಮುನ್ನಡೆಸಲಿರುವ ಮಾವುತ, ಕಾವಾಡಿಗಳಿಗೆ ಅರಣ್ಯ ಇಲಾಖೆ ಹೊಸ ಧಿರಿಸು ವಿತರಿಸಿದ್ದು, ರಾಜಲಾಂಛನ ಗಂಡಭೇರುಂಡ ಚಿತ್ರವುಳ್ಳ ಕೆಂಪು ಬಣ್ಣದ ಪೋಷಾಕಿನಲ್ಲಿ ಮಾವುತರು, ಕಪ್ಪು ಬಣ್ಣದ ಸಮವಸ್ತ್ರದಲ್ಲಿ ಕಾವಾಡಿಗಳು ಆನೆಗಳನ್ನು ಕರೆಯೊಯ್ಯಲಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯ ಜಂಬೂಸವಾರಿಗೆ ಕೇವಲ ಎರಡು ದಿನ ಮಾತ್ರವಿದ್ದು, ಅರಣ್ಯ ಇಲಾಖೆ ಗಜಪಡೆಯನ್ನು ಸಜ್ಜುಗೊಳಿಸುವ ಅಂತಿಮ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇನ್ನು ಎರಡು ದಿನ ಗಜಪಡೆಯ ಮೇಲೆ ಹದ್ದಿನಕಣ್ಣಿಟ್ಟಿರುವ ಅರಣ್ಯ ಇಲಾಖೆ, ಆನೆಗಳ ಆರೋಗ್ಯದ ಮೇಲೆ ನಿಗಾ ವಹಿಸಿದೆ. ಇದರೊಂದಿಗೆ ಲಕ್ಷಾಂತರ ಮಂದಿ ವೀಕ್ಷಿಸುವ ಜಂಬೂಸವಾರಿಯಲ್ಲಿ ಸಾಗುವ ಗಜಪಡೆಗೆ ಮಾಡುವ ಅಲಂಕಾರಕ್ಕೆ ಅನುಗುಣವಾಗಿ ಮಾವುತ, ಕಾವಾಡಿಗಳಿಗೆ ಹೊಸ ಸಮವಸ್ತ್ರ ನೀಡಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿದೆ.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ಶನಿವಾರ ಬೆಳಗ್ಗೆ 14 ಆನೆಗಳ ಮಾವುತ ಹಾಗೂ ಕಾವಾಡಿಗಳಿಗೆ ಸಾಂಪ್ರದಾಯಿಕ ಪೋಷಾಕು ವಿತರಿಸಲಾಯಿತು. ಆನೆಗಳ ಮಾವುತರಿಗೆ ರಾಜಲಾಂಛನವುಳ್ಳ ಕೆಂಪು ಬಣ್ಣದ ಪೋಷಾಕು ನೀಡಿದರೆ, ಕಾವಾಡಿಗಳಿಗೆ ಕಪ್ಪು ಬಣ್ಣದ ಸಮವಸ್ತ್ರ ವಿತರಿಸಲಾಗಿದೆ. ಹೊಸ ಧಿರಿಸನ್ನು ಜಂಬೂಸವಾರಿ ಮೆರವಣಿಗೆಗೆ ಆನೆಗಳನ್ನು ಕರೆತರುವ ಮುನ್ನ ಧರಿಸುವಂತೆ ಸೂಚನೆ ನೀಡಲಾಗಿದೆ. ಕೆಲವರಿಗೆ ನೀಡಿರುವ ಬೆಲ್ಟ್ ಚಿಕ್ಕದಾಗಿದ್ದು, ಅದನ್ನು ಬದಲಿಸಿ, ಸೂಕ್ತ ಅಳತೆಯ ಬೆಲ್ಟ್ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಜಂಬೂಸವಾರಿಯಲ್ಲಿ ಅಲಂಕಾರಗೊಂಡ ಗಜಪಡೆಗೆ ಅನುಗುಣವಾಗಿ ಮಾವುತ, ಕಾವಾಡಿಗಳಿಗೂ ಉತ್ತಮ ಸಮವಸ್ತ್ರ ನೀಡುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಗಜಪಡೆಯ ಗಾಂಭೀರ್ಯ ಹಾಗೂ ಜಂಬೂಸವಾರಿಯ ವೈಭವಕ್ಕೆ ಅನುಗುಣವಾಗಿ ಈ ಬಾರಿ ಹೊಸ ಪೋಷಾಕನ್ನು ಪರಂಪರೆಗೆ ಅನುಗುಣವಾಗಿ ವಿತರಿಸಲಾಗಿದೆ.



ಪ್ರಸಿದ್ಧ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪಡೆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರನ್ನು ಮೈಸೂರು ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ನಗರ ಪ್ರಧಾನ ಕಾರ್ಯದರ್ಶಿ ಪಿ.ಸತೀಶ್, ಉಪಾಧ್ಯಕ್ಷ ಆರ್. ಮುದ್ದುರಾಜ್ ಹಾಗೂ ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹದೇವ, ಅರುಣ್ ಉಪಸ್ಥಿತರಿದ್ದರು.

ಭಗವಾನ್ ಗಡಿಪಾರಿಗೆ ಒಕ್ಕಲಿಗರ ಸಂಘ ಆಗ್ರಹ



ಮೈಸೂರು, ಅ.21(ಜಿಎ)–ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಪೊಲೀಸ್ ಇಲಾಖೆ ಎಫ್ಐಆರ್ ದಾಖಲಿಸಿದ್ದು, ಭಗವಾನ್ ಅವರನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಎಫ್ಐಆರ್ ಅನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಯಾವುದೇ ಪ್ರಭಾವಿಗಳ ಒತ್ತಡಕ್ಕೆ ಮಣಿಯದೇ ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ತನಿಖೆ ನಡೆಸಿ ಅವರಿಗೆ ಯಾವುದೇ ರೀತಿಯ ಜಾಮೀನು ಸಿಗದಂತೆ ಮಾಡಬೇಕು ಹಾಗೂ ಅವರನ್ನು ಗಡಿಪಾರು ಮಾಡಿ ಎಂದು ಒತ್ತಾಯಿಸಿದರು.

ಕೋಟ್ಯಾಂತರ ಹಿಂದುಗಳ ಧಾರ್ಮಿಕ ಭಾವನೆಗಳಿಗೆ ಹಾಗೂ ಒಕ್ಕಲಿಗ ಸಮುದಾಯದವರ ಭಾವನೆಗಳಿಗೆ ನೋವುಂಟು ಮಾಡಿ, ದೇಶದಲ್ಲಿ ವಾಕ್ ಸ್ವಾತಂತ್ರ್ಯ ಇದೆ ಎಂದು ಬಾಯಿಗೆ ಬಂದಂತೆ ಧರ್ಮ ಧರ್ಮಗಳ ನಡುವೆ, ಸಮುದಾಯಗಳ ನಡುವೆ ವಿಷ ಬೀಜ ಬಿತ್ತುತ್ತಿರುವ ಪ್ರೊ.ಕೆ.ಎಸ್. ಭಗವಾನ್ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡು, ಇನ್ನು ಮುಂದೆ ಯಾವುದೇ ವ್ಯಕ್ತಿ ಈ ರೀತಿಯ ಹೇಳಿಕೆಗಳನ್ನು ನೀಡದಂತೆ ಮತ್ತು ಯಾವುದೇ ವೇದಿಕೆಯಲ್ಲಿ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಕೋರಿದರು.

ಪುರಭವನದಲ್ಲಿ ಅ.13ರಂದು ನಡೆದ ಮಹಿಷಾ ಉತ್ಸವ ಕಾರ್ಯಕ್ರಮದಲ್ಲಿ ಕೆ.ಎಸ್.ಭಗವಾನ್ ಅವರು ಮಾತನಾಡುವಾಗ, ಹಿಂದೂ ಧರ್ಮ ಹಾಗೂ ಒಕ್ಕಲಿಗ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದು, ಈ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದಿಂದ ಅ.16 ರಂದು ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಅವರ ಹೇಳಿಕೆ ವಿರುದ್ಧ ದೂರು ದಾಖಲಿಸಿದ್ದೆವು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಡಾ ಸಿ.ವೈ. ಶಿವೇಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಕಾರ್ಯದರ್ಶಿ ಚೇತನ್ ಉಪಸ್ಥಿತರಿದ್ದರು.

ಕರ್ತವ್ಯನಿರತ ಸಂಚಾರ ಪೊಲೀಸರ ಮೇಲೆ ಹಲ್ಲೆ

ಬೆಂಗಳೂರಿನ ಐವರ ಬಂಧನ; ಜಾಮೀನಿನ ಮೇಲೆ ಬಿಡುಗಡೆ

ಮೈಸೂರು, ಅ. 21(ಆರ್‌ಕೆ)– ಸಂಚಾರ ದಟ್ಟಣೆ ನಿಭಾಯಿಸುತ್ತಿದ್ದ ಸಂಚಾರ ಪೊಲೀಸ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ ಬೆಂಗಳೂರಿನ ಐವರ ವಿರುದ್ಧ ಮೈಸೂರಿನ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಗಳೂರಿನ ಗುರಪ್ಪನಪಾಳ್ಯ ನಿವಾಸಿಗಳಾದ ಉಮೇಶ್, ಹರೀಶ್, ಧ್ರುವ ಹಾಗೂ ಇಬ್ಬರು ಮಹಿಳೆಯರ ವಿರುದ್ಧ ಪ್ರಕರಣ ದಾಖಲಿಸಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರಿಗೆ ಛೀಮಾರಿ ಹಾಕಿದ ನ್ಯಾಯಾಧೀಶರು ಮಧ್ಯಂತರ ಜಾಮೀನು ನೀಡಿದ್ದಾರೆ.

ಶುಕ್ರವಾರ ರಾತ್ರಿ ಸುಮಾರು 8.30ರ ವೇಳೆಯಲ್ಲಿ ಇನ್ನೋವಾ ಕಾರಿನಲ್ಲಿ ಬರುತ್ತಿದ್ದ ಅವರನ್ನು ತ್ವರಿತವಾಗಿ ಸಾಗುವಂತೆ ಸೂಚಿಸಿದ ದೇವರಾಜ ಸಂಚಾರ ಠಾಣೆ ಕಾನ್ಸ್‌ಟೇಬಲ್‌ಗಳಾದ ರಾಜು, ಅರುಣ್ ಕೌಶಿಕ್ ಹಾಗೂ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ವಾಲಂಟೀರ್ ಮುತ್ತು ಅವರ ಮೇಲೆರಗಿ, ಹಾರ್ಡಿಂಜ್ ಸರ್ಕಲ್‌ನಲ್ಲಿ ಹಲ್ಲೆ ಮಾಡಿದ್ದರು.

ಅವಾಚ್ಯ ಶಬ್ದಗಳಿಂದ ನಿಂದಿಸಿ ಸಮವಸ್ತ್ರ ಹರಿದು ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಬಂಧಿಸಿ ಇನ್ನೋವಾ ಕಾರನ್ನು ವಶಪಡಿಸಿಕೊಳ್ಳಲಾಗಿತ್ತು ಯಾವುದೋ ಶಾಸಕರೊಬ್ಬರ ಹೆಸರು ಹೇಳಿಕೊಂಡು ದರ್ಪ ಪ್ರದರ್ಶಿಸಿದ ಅವರು, ಕರ್ತವ್ಯ ನಿರತ ಪೊಲೀಸರ ಮೇಲೆರಗಿ ಗಾಯಗೊಳಿಸಿದ್ದಾರೆಂದು ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

ನಿವೇಶನ, ಅಧಿಕಾರಕ್ಕೆ ಕವಿಗಳು ವಿಧಾನಸೌಧದಲ್ಲಿ ಪ್ರೇತಗಳಂತೆ ಅಲೆಯುತ್ತಿದ್ದಾರೆ

- ಖ್ಯಾತ ಕವಯತ್ರಿ ಶಶಿಕಲಾ ವಸ್ತ್ರದ ಕಟು ಟೀಕೆ
- ಆತ್ಮಗೌರವ ಮರೆತಿರುವ ಕವಿಗಳು
- ಕವಿ, ಕವಿತೆಗಳು ಜೀವಂತ ಈಗಿನ ಸುವರ್ಣಯುಗ
- ಬೇರೆ ಭಾಷಿಗರ ಕೈ ಕೆಳಗೆ ಕನ್ನಡಿಗರು ಕೆಲಸ ಮಾಡುವ ದುರ್ಗತಿ
- ಕವಿಗಳು ಕಂಡ ದಸರಾ ವಿಶಿಷ್ಟ

ಮೈಸೂರು, ಅ.21(ಬಿಎಲ್‌ಯು)– ಬಹಳಷ್ಟು ಕವಿಗಳು ನಿವೇಶನ ಹಾಗೂ ನಾನಾ ಅಧಿಕಾರದ ಗದ್ದುಗೆಗಾಗಿ ವಿಧಾನಸೌಧದಲ್ಲಿ ಪ್ರೇತಗಳಂತೆ ಅಲೆಯುತ್ತಾರೆ ಎಂದು ಖ್ಯಾತ ಕವಯತ್ರಿ ಶಶಿಕಲಾ ವಸ್ತ್ರದ ಟೀಕಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ನಡೆದ ದಸರಾ ಪ್ರಧಾನ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ಕವಿಗಳು ಸ್ವಾರ್ಥ ಸಾಧನೆಗಾಗಿ ಆತ್ಮಗೌರವ ಬಿಟ್ಟಿದ್ದಾರೆ ಎಂದು ವಿಷಾದಿಸಿದರು.

ವಿರೋಧ ಪಕ್ಷದ ನಾಯಕನಾಗಿ ಕವಿಗಳು ಸಮಾಜದಲ್ಲಿರುವ ಲೋಪದೋಷಗಳನ್ನು ಗುರುತಿಸಿ ರಾಜಕಾರಣಿಗೆ ಹೇಳಬೇಕು. ಈ ಮೂಲಕ ಸಾಮಾಜಿಕ ಪ್ರಜ್ಞೆ ಮೂಡಿಸಬೇಕು. ಇದು ಪ್ರತಿಯೊಬ್ಬ ಕವಿಯ ಹೊಣೆಗಾರಿಕೆ. ಆದರೆ ಈಗ ಬಹಳಷ್ಟು ಕವಿಗಳು ನಿವೇಶನ ಪಡೆಯಲು, ಅಧಿಕಾರದ ಗದ್ದುಗೆ ಹಿಡಿಯಲು ಪ್ರೇತಗಳಂತೆ ವಿಧಾನಸೌಧದಲ್ಲಿ ಅಲೆಯುತ್ತಾರೆ. ಹೀಗೆ ಸ್ವಾರ್ಥ ಸಾಧನೆ ಮೆರೆಯುವ ಕವಿಗಳಲ್ಲಿ ಆತ್ಮಗೌರವವೇ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಆದರೆ ನಮ್ಮ ಉತ್ತರ ಕರ್ನಾಟಕದ ಜನರಿಗೆ ವಿಧಾನಸೌಧ ದೂರವಾಗಿದೆ. ನಮ್ಮ ಆತ್ಮಗೌರವ ಬಿಟ್ಟು ವಿಧಾನಸೌಧಕ್ಕೆ ಏಕೆ ಹೋಗಬೇಕು ಎಂಬ ಮನೋಭಾವ ಕೂಡ ಹೊಂದಿದ್ದಾರೆ. ಈ ಮೂಲಕ ತಮ್ಮತನವನ್ನು ಅವರು ಉಳಿಸಿಕೊಂಡಿದ್ದಾರೆ ಎಂದರು.



> ಕಾವ್ಯ ಸಮಾಜದ ಸುಧಾರಣೆಗೆ ಪ್ರಮುಖ ಅಸ್ತ್ರವಾಗಿದ್ದು, ಕವಿಗಳು ಹಾಗೂ ಕವಿತೆಗಳು ಜೀವಂತವಾಗಿರುವುದು ಈ ಕಾಲಮಾನದಲ್ಲಿ ಸುವರ್ಣಯುಗವಾಗಿದೆ. ಕಾವ್ಯ ಸೌಹಾರ್ದತೆ, ಸದ್ಭಾವನೆ ಹಾಗೂ ಸದಭಿರುಚಿಗಳನ್ನು ಬೆಳೆಸುತ್ತದೆ.
> – **ಶಶಿಕಲಾ ವಸ್ತ್ರದ**, ಕವಯತ್ರಿ

ಕಾವ್ಯ ರಚನೆ ಮಾಡುವುದು ಎಷ್ಟು ಕಷ್ಟವೋ, ಕಾವ್ಯದ ಬಗ್ಗೆ ಮಾತನಾಡುವುದು ಕೂಡ ಅಷ್ಟೇ ಕಷ್ಟ, ಕಾವ್ಯ ರಚನೆ ಹಾಗೂ ಕಾವ್ಯದ ಬಗ್ಗೆ ಮಾತನಾಡಲು ಜ್ಞಾನ, ಏಕಾಗ್ರತೆ, ಅಂತಃಕರಣ ಇರಬೇಕು. ಪರಕಾಲ ಪ್ರವೇಶ ಮಾಡಬೇಕು. ತಾಯಿತನದ ಗುಣ ಹೊಂದಿರಬೇಕು ಎಂದು ಶಶಿಕಲಾ ವಸ್ತ್ರದ ಅಭಿಪ್ರಾಯಪಟ್ಟರು.

ಬೇರೆಯವರ ನೋವನ್ನು ತನ್ನ ನೋವೆಂದು ಭಾವಿಸುವವನು ನಿಜವಾದ ಕವಿ. ಕವಿಗೆ ಸಾಮಾಜಿಕ ಪ್ರಜ್ಞೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕವಿ ಸಾಗಬೇಕು. ಸಾಹಿತ್ಯ ಮನುಷ್ಯನಿಗೆ ನಿಜವಾದ ನೆಮ್ಮದಿ ನೀಡುತ್ತದೆ. ಆದರೆ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಬೇಕಷ್ಟೆ ಎಂದು ಹೇಳಿದರು.

1975ರ ಕಾಲಘಟ್ಟದಲ್ಲಿ ಕವಿಗೋಷ್ಠಿಗಳು ಮಹಿಳೆಯರಿಗೆ ನಿಷಿದ್ಧವಾಗಿದ್ದವು. ಆದರೂ ನಾನು ಕೆಲವು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದೆ. ಆ ಸಮಯದಲ್ಲಿ ಕೆಲವು ಟೀಕೆಗಳನ್ನು ಎದುರಿಸಬೇಕಾಯಿತು ಎಂದು ಹಿಂದಿನ ಘಟನೆಗಳನ್ನು ಮೆಲುಕು ಹಾಕಿದರು.

ಹೆಣ್ಣು ಮಕ್ಕಳು ಶಕ್ತಿವಂತರಾಗಿದ್ದಾರೆ. ಅವರ ಬಗ್ಗೆ ಮರುಕಬೇಡ. ಬದಲಿಗೆ ಅವರ ಬಗ್ಗೆ ಗೌರವ ಭಾವನೆ ಹೊಂದಿರಬೇಕು ಎಂದರು.

ಬೇರೆ ರಾಜ್ಯದ ಜನರು ತಮ್ಮ ಭಾಷೆ ಬಿಟ್ಟು ಬೇರೆ ಭಾಷೆ ಮಾತನಾಡುವುದಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಬಂದಾಗ ನಾವು ನಮ್ಮ ಕನ್ನಡ ಭಾಷೆಯನ್ನು ಅವರಿಗೆ ಕಲಿಸದೆ, ಅವರ ಭಾಷೆಯನ್ನೂ ನಾವೇ ಕಲಿಯುತ್ತೇವೆ. ಇದರಿಂದ ಬಹಳಷ್ಟು ಕನ್ನಡಿಗರು ಬೇರೆ ಭಾಷಿಗರ ಕೈ ಕೆಳಗೆ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಾವುದೇ ಕಾರಣಕ್ಕೂ ಶ್ರೇಷ್ಠ ಭಾಷೆಯಾದ ಕನ್ನಡವನ್ನು ನಾವು ಬಿಟ್ಟು ಕೊಡಬಾರದು. ಕನ್ನಡ ಭಾಷೆ, ನುಡಿಯನ್ನು ಉಳಿಸುವ ಜವಾಬ್ದಾರಿ ಹೊರಬೇಕು. ಇಲ್ಲದಿದ್ದರೆ ಕನ್ನಡದ ಮಕ್ಕಳು ಅತಂತ್ರರಾಗುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್, ದಸರಾ ಕವಿಗೋಷ್ಠಿ ದಸರಾ ಸಂಭ್ರಮವನ್ನು ಇಮ್ಮಡಿಗೊಳಿಸಿದೆ. ಕವಿಗಳು ಕಂಡ ದಸರಾ ಬಹಳ ವಿಶಿಷ್ಟವಾಗಿದೆ ಎಂದು ಹೇಳಿದರು.

ಪ್ರಧಾನ ಕವಿಗೋಷ್ಠಿಯ ಉದ್ಘಾಟನಾ ಕಾರ್ಯಕ್ರಮದ ನಂತರ ರಾಜ್ಯದ ವಿವಿಧೆಡೆಯಿಂದ ಬಂದಿದ್ದ 30 ಕವಿಗಳು ಕಾವ್ಯ ವಾಚನ ಮಾಡಿದರು.

ಖ್ಯಾತ ಕವಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಶರಣಪ್ಪ ವಿ ಹಲಸೆ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ದಸರಾ ಕವಿಗೋಷ್ಠಿ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ. ದಾಸೇಗೌಡ, ಕಾರ್ಯಾಧ್ಯಕ್ಷೆ ವಿಜಯ ಕುಮಾರಿ ಎಸ್.ಕರಿಕಲ್, ಕಾರ್ಯದರ್ಶಿ ಗಿರಿಧರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಕ್ಟೋಬರ್ 17ರಂದು ಆರಂಭವಾದ ಮೈಸೂರು ದಸರಾ ಕವಿಗೋಷ್ಠಿ ಇಂದು ಸಮಾಪ್ತಿಗೊಂಡಿತು.

ಪ್ರೇಕ್ಷಕರಿಗೆ ಮುದ ನೀಡಿದ ಪಂಡಿತ್ ರಾಜೀವ್ ತಾರಾನಾಥರ ಸರೋದ್ ವಾದನ



ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಕಾರ್ಯಕ್ರಮದಲ್ಲಿ ತರಳಬಾಳು ಜನಪದ ಸಿರಿ ವಿದ್ಯಾರ್ಥಿಗಳ ರೋಮಾಂಚನಕಾರಿ ಮಲ್ಲಗಂಬ ಪ್ರದರ್ಶನ.

ಮೈಸೂರು, ಅ.21 (ಎಸ್‌ಬಿಡಿ)– ಪಂಡಿತ್ ರಾಜೀವ್ ತಾರಾನಾಥರ ಸರೋದ್ ವಾದನ, ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸಿತು.


ಅರಮನೆ ಅಂಗಳದ ದಸರಾ ಸಾಂಸ್ಕೃತಿಕ ಪ್ರಧಾನ ವೇದಿಕೆಯಲ್ಲಿ ಶನಿವಾರ 91ರ ಹರೆಯದ ಪಂಡಿತ್ ರಾಜೀವ್ ತಾರಾನಾಥರು ಸಂಗೀತ ಲೋಕವನ್ನೇ ಸೃಷ್ಟಿಸಿದರು. ಸರಸ್ವತಿಗೆ ತಲೆ ಬಾಗಿ ತನ್ಮಯತೆಯಿಂದ ನುಡಿಸಿದ ಸರೋದ್ ವಾದನ ಕರ್ಣಾನಂದ ನೀಡಿತು. ಪಂಡಿತರ ಬೆರಳ ತುದಿಯಿಂದ ಹೊರಹೊಮ್ಮಿದ ಸಂಗೀತ ನಿನಾದಕ್ಕೆ ದೀಪಾಲಂಕೃತ ಅರಮನೆಯೂ ಕೂಡ ತಲೆದೂಗಿದಂತೆ ಭಾಸವಾಯಿತು. ನೆರೆದಿದ್ದವರೆಲ್ಲಾ ತದೇಕಚಿತ್ತದಿಂದ ಸರೋದ್ ಸಂಗೀತ–ಭಾವಯಾನದಲ್ಲಿ ಮೈಮರೆತರು.

ಕಲಾವಿದರಿಗೆ ವಯಸ್ಸಾದರೂ ಅವರಲ್ಲಿರುವ ಕಲೆ ಮುಪ್ಪಾಗುವುದಿಲ್ಲ, ಸದಾ ಚಿನ್ಮಯಿ ಎನ್ನುವುದಕ್ಕೆ ತಾರಾನಾಥರ ಸರೋದ್ ವಾದನ ಸಾಕ್ಷಿಯಾಯಿತು. ತಾರಾನಾಥರ ಸರೋದ್ ವಾದನ ಸಂಗೀತ ಯಾನದಲ್ಲಿ ಪಂಡಿತ್ ಡಾ.ಉದಯ್ ರಾಜ್ ಕರ್ಪೂರ್, ಪ್ರದ್ಯುಮ್ನ ಕರ್ಪೂರ್, ಡಾ.ಅರಣ್ಯಕುಮಾರ್, ಅನುಪಮ್ ಜೋಷಿ ಹಾಗೂ ಸಚಿನ್ ಹಂಪಿ ಪಕ್ಕವಾದ್ಯ ಸಹಕಾರದೊಂದಿಗೆ ಜೊತೆಯಾಗಿದ್ದರು.

ಇದಕ್ಕೂ ಮುನ್ನ ವಿದ್ವಾನ್ ಸಿ.ಎ. ಶ್ರೀಧರ್ ಅವರಿಂದ ವೇಣು ವಾದನದ ಮೂಲಕ ರಸದೌತಣ ನೀಡಿದರು. 'ಭಾಗ್ಯದಾ ಲಕ್ಷ್ಮೀ ಬಾರಮ್ಮಾ...' 'ಕಾಯೌ ಶ್ರೀಗೌರಿ ಕರುಣಾ ಲಹರಿ...' ಸೇರಿದಂತೆ ಹಲವು ಕೃತಿಗಳನ್ನು ಮನೋಜ್ಞವಾಗಿ ನುಡಿಸಿದರು. ಇವರೊಂದಿಗೆ ವಯೋಲಿನ್‌ನಲ್ಲಿ ವಿದ್ವಾನ್ ಹೆಚ್.ಕೆ.ನರಸಿಂಹ ಮೂರ್ತಿ, ಮೃದಂಗದಲ್ಲಿ ವಿದ್ವಾನ್ ರವಿಶಂಕರ್, ಘಟಂನಲ್ಲಿ ವಿದ್ವಾನ್ ರಾಮಾನುಜಂ, ಫ್ಲ್ಯೂಟ್‌ನಲ್ಲಿ ವಿದ್ವಾನ್ ಕೇಶವ ಚಂದ್ರ ಹಾಗೂ ವಿದುಷಿ ಕಲ್ಯಾಣಿ ಅವರು ಸಹಕಾರ ನೀಡಿದರು.

ಮರೆತ ಮಣ್ಣಿನ ಹಾಡುಗಳು: ಚೌಡಿಕೆ ಪದಗಳ ಮೂಲಕ ಖ್ಯಾತರಾಗಿರುವ ಶಿಲ್ಪಾ ಮುಡಬಿ ಅವರು ಮರೆತ ಮಣ್ಣಿನ ಪದಗಳನ್ನು ಹಾಡುವ ಮೂಲಕ ಪ್ರೇಕ್ಷಕರ ಮನತಟ್ಟಿದರು. ಉತ್ತರ ಕರ್ನಾಟಕ ಶೈಲಿಯಲ್ಲಿ ಆರತಿ ಹಾಡು 'ಕರ್ಪೂರಾರತಿ ಬೆಳಗಿರೇ ಕಾರುಣ್ಯ ಮುರಹರ ದೇವಗೆ..', ಗೀಗೀ ಪದ 'ಶಾರದಾ ದೇವಿ ಆದಿಶಕ್ತಿ...', ಬಾಗಿಲ ಮುಂದ ರಂಗೋಲಿ...', ಬಾರೆ ನನ್ನ ರತನ...', 'ಹಸಿರು ಕಡ್ಡಿಯ ಸೀರಿ...', 'ಇಬ್ಬರಕ್ಕತಂಗ್ಯರ ಕೂಡಿ ಗುರುಲಿಂಗ ಜಂಗಮದಾಡೇ...', 'ಉದೋ ಉದೋ ದೇವಿ ನಿನಗಾ ನಮೋ ನಮೋ ತಾಯಿ...' ಗೀತೆಗಳನ್ನು ಮನೋಜ್ಞವಾಗಿ ಹಾಡಿದರು. ಹಲವು ಸಹ ಗಾಯಕರು, ವಾದ್ಯ ಕಲಾವಿದರು ಸಾಥ್ ನೀಡಿದರು.

ಪಕ್ಕಾ ಉತ್ತರ ಕರ್ನಾಟಕದ ಸೊಗಡಿನ ಹಾಡುಗಳು ಕೇಳುಗರಿಗೆ ಹೊಸದೆನಿಸಿದವು.



ವಿದ್ವಾನ್ ಸಿ.ಎ.ಶ್ರೀಧರ್ ಅವರ ವೇಣು ವಾದನದ ರಸದೌತಣ.



ಕನ್ನಡಮ್ಮನ ಔದಾರ್ಯ ಬಣ್ಣನೆ



ಮೈಸೂರು: ಸರೋದ್ ವಾದನ ಆರಂಭಿಸುವ ಮುನ್ನ ಪಂಡಿತ್ ರಾಜೀವ್ ತಾರಾನಾಥ್ ಅವರು, ಕನ್ನಡಮ್ಮನ ಔದಾರ್ಯ ಬಣ್ಣಿಸಿದರು.

ಎಲ್ಲರಿಗೂ ನಮಸ್ಕಾರ, ಶಾಸ್ತ್ರೀಯ ಸಂಗೀತ ಆಲಿಸಲು ಇಷ್ಟು ಸಂಖ್ಯೆಯಲ್ಲಿ ಜನ ಸೇರಿರುವುದು ತುಂಬಾ ಸಂತೋಷ. ದೇಶದಲ್ಲಿ ಕರ್ನಾಟಕ ಸಂಗೀತ ಹಾಗೂ ಹಿಂದೂಸ್ತಾನಿ ಸಂಗೀತ ಎರಡೂ ಬೆಳೆಯಾಗಿ ಬೆಳೆದಿರುವುದು ಕರ್ನಾಟಕದಲ್ಲಿ ಮಾತ್ರ, ಕನ್ನಡಮ್ಮನ ಮಹಿಮೆ ಇಲ್ಲಿದೆ. ಕನ್ನಡದ ಕಿರೀಟವನ್ನು ಗಮನಿಸಿ ನಾವು–ನೀವೆಲ್ಲಾ ತಲೆಯೊಳಗಿಟ್ಟುಕೊಳ್ಳಬೇಕು. ಕನ್ನಡಮ್ಮನ ಔದಾರ್ಯ ಹೇಗಿದೆ ಎಂದರೆ, ಕನ್ನಡಲ್ಲದವರಿಗೆ ಆ ಕಿರೀಟ ಕೊಟ್ಟರು. ಬೇಂದ್ರೆಯವರು ಮಹಾರಾಷ್ಟ್ರದವರು, ವೆಂಕಟೇಶ್ ಐಯ್ಯಂಗಾರ್ ಅವರು ತಮಿಳರು, ಗಿರೀಶ್ ಕಾರ್ನಾಡ್ ಕೊಂಕಣಿಯವರು. ಇದೇ ಕನ್ನಡಮ್ಮನ ಔದಾರ್ಯ. ಈಗ ನಾವು ಸಣ್ಣ ಸಣ್ಣ ಜಗಳ ಆಡ್ತೀವಿ. ಬೇರೆ ಭಾಷೆ ಬೋರ್ಡ್ ಇದ್ದರೆ ಅದಕ್ಕೆ ಮಸಿ ಬಳಿಯುತ್ತೇವೆ. ಅದಲ್ಲ, ಕನ್ನಡದ ಗುಣವೆಂದರೆ ಎಲ್ಲರೂ ಬನ್ನಿ ಎನ್ನುವುದು. ಇಲ್ಲಿ ನಾನೊಂದು, ಅವರೊಂದು ಶೈಲಿಯಲ್ಲಿ ಮಾತನಾಡುತ್ತೇವೆ. ಎಲ್ಲವನ್ನೂ ಆ ತಾಯಿ ಹೊತ್ತಿದ್ದಾಳೆ. ಆಕೆಯ ಸ್ಮರಿಸೋಣ ಎಂದರು.

ಅರಮನೆ ಅಂಗಳದಲ್ಲಿ ದಿನವಿಡೀ ಮೊಳಗಿದ ಸಾಂಸ್ಕೃತಿಕ ಕಾರ್ಯಕ್ರಮದ ಸುಧೆ

ಮೈಸೂರು,ಅ.21(ಎಂಟಿವೈ)– ದಸರಾ ಮಹೋತ್ಸವ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರವಾಸಿಗರನ್ನು ಮುದಗೊಳಿಸಿದವು. ಅರಮನೆಯ ಮುಂಭಾಗದ ಪ್ರಾಂಗಣದಲ್ಲಿ ಬೆಳಗ್ಗೆ 6ರಿಂದ ಸಂಜೆ 6 ರವರೆಗೆ ನಡೆದ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು. ಬಳಿಕ ಆರಂಭವಾದ ಸಾಂಸ್ಕೃತಿಕ ಕಾರ್ಯಕ್ರಮ ಎಡೆಬಿಡದೆ ಮುಂದುವರೆಯಿತು. ಅರಮನೆ ಆವರಣದಲ್ಲಿ ಕಳೆಕಟ್ಟಿದ್ದ ದಸರಾ ಸಂಭ್ರಮಕ್ಕೆ ಬೆಳಗ್ಗಿನಿಂದ ಸಂಜೆವರೆಗೆ ನಡೆದ ಕಾರ್ಯಕ್ರಮ ಅರಮನೆಗೆ ಆಗಮಿಸಿದ್ದ ಪ್ರವಾಸಿಗರನ್ನು ಆಕರ್ಷಿಸಿತು. ಜಾನಪದ, ಹಿಂದೂಸ್ಥಾನಿ ಗಾಯನ, ಸುಗಮ ಸಂಗೀತ, ರಂಗಗೀತೆ, ಭರತನಾಟ್ಯ, ಮಲ್ಲಗಂಬ, ದೇವಿಕೃತಿ, ಕರ್ನಾಟಕ ಶಾಸ್ತ್ರೀಯ ಸಂಗೀತ, ನಾದಸ್ವರ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಸೇರಿದಂತೆ ಇನ್ನಿತರ ಕಲಾ ಪ್ರಕಾರಗಳ ಕಾರ್ಯಕ್ರಮ ನಿರಂತರವಾಗಿ ಜರುಗಿದವು.

ಒಂದು ಪ್ರಕಾರದ ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಮತ್ತೊಂದು ಪ್ರಕಾರದ ಕಾರ್ಯಕ್ರಮ ಆರಂಭವಾಗುತ್ತಿತ್ತು. ಕೆಲವರಿಗೆ ಸುಗಮ ಸಂಗೀತ ಕಾರ್ಯಕ್ರಮ ಮುದ ನೀಡಿದರೆ, ಮತ್ತೆ ಕೆಲವರಿಗೆ ಹಿಂದೂಸ್ಥಾನಿ ಕಾರ್ಯಕ್ರಮ ತಲೆದೂಗುವಂತೆ ಮಾಡಿತು. ಪ್ರವಾಸಿಗರು ಹಾಗೂ ಕಲಾಸಕ್ತರನ್ನು ಮಂತ್ರಮುಗ್ಧಗೊಳಿಸಿತು.

ಚಾಮುಂಡಿಬೆಟ್ಟದಲ್ಲಿ ಕಾಳರಾತ್ರಿ ವಿಶೇಷ ಪೂಜೆ; ತಪ್ಪಲಲ್ಲೇ ಸಾಲುಗಟ್ಟಿ ನಿಂತ ವಾಹನಗಳು

ಕೆಲಹೊತ್ತು ಆಂಬುಲೆನ್ಸ್ ಸಿಲುಕಿ ತೊಂದರೆ



ಮೈಸೂರು, ಅ.21– ಕಾಳರಾತ್ರಿ ಪೂಜೆ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ರಸ್ತೆಯ ಗೇಟ್ ಬಂದ್ ಮಾಡಿದ್ದರಿಂದ ಉಂಟಾದ ವಾಹನ ದಟ್ಟಣೆ ನಡುವೆ ಆಂಬುಲೆನ್ಸ್ ಸಿಲುಕಿಕೊಂಡಿದ್ದ ಘಟನೆ ಶನಿವಾರ ರಾತ್ರಿ ನಡೆದಿದೆ.

ಸಾಮಾನ್ಯ ದಿನಗಳಲ್ಲಿ ರಾತ್ರಿ 10 ಗಂಟೆ ನಂತರ ಬೆಟ್ಟದ ನಿವಾಸಿಗಳ ಹೊರತುಪಡಿಸಿ ಸಾರ್ವಜನಿಕರ ವಾಹನ ಸಂಚಾರಕ್ಕೆ ಅವಕಾಶ ನೀಡುವುದಿಲ್ಲ. ಆದರೆ ಶನಿವಾರ ದೇವಾಲಯದಲ್ಲಿ ಚಾಮುಂಡೇಶ್ವರಿ ಮೂಲಮೂರ್ತಿಗೆ ಕಾಳರಾತ್ರಿ ವಿಶೇಷ ಪೂಜೆ ನೆರವೇರಿದ ಹಿನ್ನೆಲೆಯಲ್ಲಿ ರಾತ್ರಿ 9 ಗಂಟೆಗೆ ಪೊಲೀಸರು ಗೇಟ್ ಬಂದ್ ಮಾಡಿದ್ದರು. ಪರಿಣಾಮ ಕಾಳರಾತ್ರಿ ವಿಶೇಷ ಪೂಜೆಗೆ ತೆರಳುತ್ತಿದ್ದವರ ವಾಹನಗಳ ಸಾಲುಗಟ್ಟಿ ನಿಂತವು. ಈ ವೇಳೆ ಬೆಟ್ಟಕ್ಕೆ ತೆರಳುತ್ತಿದ್ದ ಆಂಬುಲೆನ್ಸ್ ಸಿಲುಕಿಕೊಂಡಿತು. ತಕ್ಷಣಕ್ಕೆ ದಾರಿ ಮಾಡಿಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಕಡೆಗೆ ಆಂಬುಲೆನ್ಸ್‌ಗೆ ಅವಕಾಶ ಮಾಡಿಕೊಟ್ಟರು. ಬೆಟ್ಟದಿಂದ ಕರೆ ಬಂದಿದ್ದರಿಂದ ಆ ಆಂಬುಲೆನ್ಸ್ ಬೆಟ್ಟಕ್ಕೆ ತೆರಳಿತು ಎಂದು ತಿಳಿದುಬಂದಿದ್ದು, ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಲಿಲ್ಲ.

ಜನರ ಆಕ್ರೋಶ: ಚಾಮುಂಡಿಬೆಟ್ಟದಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಸೇರಿದಂತೆ ವಿಐಪಿಗಳೇ ಹೆಚ್ಚಾಗಿ ತುಂಬಿರುತ್ತಾರೆ. ಅವರ ಅನುಕೂಲಕ್ಕಾಗಿ ಸಾರ್ವಜನಿಕರನ್ನು ತಡೆಯಲಾಗುತ್ತಿದೆ. ಹೊರಗಿನಿಂದ ಬಂದಿರುವ ಪೊಲೀಸರನ್ನು ನಿಯೋಜಿಸಿರುವುದರಿಂದ ಆಂಬುಲೆನ್ಸ್ ಸಿಲುಕಿಕೊಂಡಿದ್ದರೂ ಅವರಿಗೆ ಪರಿಸ್ಥಿತಿ ನಿರ್ವಹಿಸಲು ಸಾಧ್ಯವಾಗಲಿಲ್ಲ. ಸಾಮಾನ್ಯರಿಗೆ ತೊಂದರೆಯಾಗದಂತೆ ಸಂಬಂಧಪಟ್ಟವರು ಕ್ರಮ ವಹಿಸಬೇಕು ಎಂದು ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ್ದವರು ಹೇಳಿದ್ದಾರೆ.

ರಾಜ್ಯ ಸರ್ಕಾರದಿಂದ ನೇಕಾರರಿಗೆ ದಸರಾ ಉಡುಗೊರೆ: ಕೈಮಗ್ಗಗಳಿಗೆ 250 ಯುನಿಟ್‌ವರೆಗೂ ಉಚಿತ ವಿದ್ಯುತ್



ವಿಜಯಪುರ,ಅ.21–ರಾಜ್ಯ ಸರ್ಕಾರ ಆರ್ಥಿಕವಾಗಿ ಸಂಕಷ್ಟದಲ್ಲಿರುವ ನೇಕಾರರಿಗೆ ದಸರಾ ಉಡುಗೊರೆ ನೀಡಿದ್ದು, ಕೈಮಗ್ಗಗಳಿಗೆ 250 ಯುನಿಟ್‌ವರೆಗೂ ಉಚಿತ ವಿದ್ಯುತ್ ನೀಡುವಂತೆ ಆದೇಶ ಹೊರಡಿಸಿದೆ.

ನಗರದಲ್ಲಿ ಮಾಧ್ಯಮದವರಿಗೆ ಈ ಕುರಿತು ಮಾಹಿತಿ ನೀಡಿದ ಜವಳಿ ಸಚಿವ ಶಿವಾನಂದ ಪಾಟೀಲ್, ನೇಕಾರರಿಗೆ ಇದರಿಂದ ದೊಡ್ಡ ಅನುಕೂಲವಾಗಲಿದೆ. ಚುನಾವಣೆಯಲ್ಲಿ ಘೋಷಿಸಿರುವುದನ್ನು ನಮ್ಮ ಸರ್ಕಾರ ಕಾರ್ಯರೂಪಕ್ಕೆ ತಂದಿದೆ ಎಂದರು.

ನೇಕಾರರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಲು ಸರ್ಕಾರ ಕ್ರಮಕೈಗೊಂಡಿದೆ. ಈ ಮೂಲಕ ಆರ್ಥಿಕ ಸಂಕಷ್ಟದಲ್ಲಿರುವ ನೇಕಾರರ ನೆರವಿಗೆ ಧಾವಿಸಿರುವ ಸರ್ಕಾರ ದಸರಾ, ದೀಪಾವಳಿ ಕೊಡುಗೆಯಾಗಿ ಉಚಿತ ವಿದ್ಯುತ್ ನೀಡಲು ಮುಂದಾಗಿದೆ ಎಂದರು.

ಈ ಯೋಜನೆ ಅನುಷ್ಠಾನದಿಂದ ರಾಜ್ಯದ ಸುಮಾರು 40 ಸಾವಿರ ನೇಕಾರರಿಗೆ ಅನುಕೂಲವಾಗಲಿದೆ. ನೇಕಾರರಿಗೆ ಉಚಿತ ವಿದ್ಯುತ್ ಪೂರೈಕೆಯಿಂದ ಮಾಸಿಕ ಅಂದಾಜು 150 ಕೋಟಿ ರೂ. ಅನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಭರಿಸಲಾಗುವುದು. 10ರಿಂದ 20 ಎಚ್.ಪಿ.ವರೆಗಿನ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರತಿ ಯುನಿಟ್‌ಗೆ 1.25 ರೂ.ಯಂತೆ ರಿಯಾಯಿತಿ ದರದಲ್ಲಿ ಮಾಸಿಕ ಗರಿಷ್ಠ 500 ಯುನಿಟ್‌ವರೆಗೆ ವಿದ್ಯುತ್ ಪೂರೈಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಯೋಗ ಶಿಕ್ಷಕ ತರಬೇತಿ

ಮೈಸೂರು, ಅ.21– ಇಂಟರ್‌ನ್ಯಾಷನಲ್ ಆರ್ಗನೈಸೇಷನ್(ಐವೈಓ) ಧನ್ವೋಷ್ಮಿ ಯೋಗ ಸಂಶೋಧನೆ ಮತ್ತು ಚಿಕಿತ್ಸಾ ಕೇಂದ್ರ ಮತ್ತು ಪರಮಹಂಸ ಯೋಗ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಮೂರು ತಿಂಗಳ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಅಂತರರಾಷ್ಟ್ರೀಯ ಯೋಗ ಶಿಕ್ಷಕ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ:9035506790, 9008727172 ಸಂಪರ್ಕಿಸಿ.

ರಾಜ್ಯ ಮಟ್ಟದ ಸಿಎಂ ಕಪ್ ದಸರಾ ಕ್ರೀಡಾಕೂಟಕ್ಕೆ ತೆರೆ

ಅತ್ಯುತ್ತಮ ಅಥ್ಲೆಟ್‌ಗಳಾಗಿ ಹೊರಹೊಮ್ಮಿದ ಬೆಂಗಳೂರಿನ ಕಪಿಲ್ ಆನಂದ್, ಮಂಗಳೂರಿನ ಎಸ್.ಎಸ್.ಸ್ನೇಹಾ

ಮೈಸೂರು,ಅ.21(ಪಿಎಂ)–ರಾಜ್ಯಮಟ್ಟದ ಸಿಎಂ ಕಪ್ ದಸರಾ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಅಥ್ಲೆಟ್ ಆಗಿ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಕಪಿಲ್ ಆನಂದ್ (1,007 ಅಂಕಗಳು) ಹಾಗೂ ಅತ್ಯುತ್ತಮ ಅಥ್ಲೆಟ್ ಆಗಿ ಮಹಿಳೆಯರ ವಿಭಾಗದಲ್ಲಿ ಮಂಗಳೂರಿನ ಎಸ್.ಎಸ್.ಸ್ನೇಹಾ (1,108 ಅಂಕಗಳು) ಹೊರಹೊಮ್ಮಿದರು.

ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಸರಾ ಕ್ರೀಡಾ ಉಪಸಮಿತಿ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ ಹಾಗೂ ಒಲಂಪಿಕ್ ಮಾದರಿಯ ದಸರಾ ಸಿಎಂ ಕಪ್ ರಾಜ್ಯ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಈ ಇಬ್ಬರು ಕ್ರೀಡಾಪಟುಗಳು ಬಹುಮಾನ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಏಷ್ಯನ್ ಗೇಮ್ಸ್‌ನ ಪದಕ ವಿಜೇತರು ಹಾಗೂ ತರಬೇತುದಾರರನ್ನು (ಕರ್ನಾಟಕದವರು) ಸನ್ಮಾನಿಸಲಾಯಿತು. ಏಷ್ಯನ್ಸ್ ಗೇಮ್ಸ್‌ನಲ್ಲಿ 4x400 ರಿಲೇಯಲ್ಲಿ ಚಿನ್ನದ ಪದಕ ವಿಜೇತ ನಿಹಾಲ್ ಜೋಯಲ್, ಕಬಡ್ಡಿ ತರಬೇತುದಾರರಾದ ತೇಜಸ್ವಿನಿ ಬಾಯಿ, ಬಾಕ್ಸಿಂಗ್ ತರಬೇತುದಾರ ಕುಟ್ಟಪ್ಪ ಹಾಗೂ ಬ್ಯಾಡ್ಮಿಂಟನ್ ಪದಕ ವಿಜೇತ ಸಾಯಿಪ್ರತೀಕ್ (ಇವರ ಗೈರು ಹಾಜರಿ ಹಿನ್ನೆಲೆಯಲ್ಲಿ ಅವರ ತಂದೆ ಕೃಷ್ಣಪ್ರಸಾದ್ ಗೌರವ ಸ್ವೀಕರಿಸಿದರು) ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಅಂಧರ ಕ್ರಿಕೆಟ್ ವಿಶ್ವಕಪ್ ವಿಜೇತ ತಂಡದ ಸದಸ್ಯರಾದ (ಕರ್ನಾಟಕದವರು) ವರ್ಷಾ ಉಮಾಪತಿ, ಎನ್.ಹೆಚ್.ಗಂಗತ್ವ ಮತ್ತು ಟಿ.ಸಿ.ದೀಪಿಕಾ ಅವರನ್ನೂ ಸನ್ಮಾನಿಸಲಾಯಿತು.

ಕರ್ನಾಟಕ ಒಲಂಪಿಕ್ ಸಂಸ್ಥೆ ಅಧ್ಯಕ್ಷರೂ ಆದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜ್ ಮಾತನಾಡಿ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪೊಲೀಸ್ ಮತ್ತು ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ.3ರಷ್ಟು ಮೀಸಲಾತಿಗೆ ಮುಖ್ಯ ಮಂತ್ರಿಗಳು ಹಸಿರುನಿಶಾನೆ ಕೊಟ್ಟಿದ್ದಾರೆ. ಮೊನ್ನೆ ಏಷ್ಯನ್ ಗೇಮ್ಸ್‌ನಲ್ಲಿ ಸಾಧನೆ ತೋರಿದ ರಾಜ್ಯದ ಕ್ರೀಡಾಪಟುಗಳ ಸನ್ಮಾನ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳಲ್ಲಿ ಶೇ.2ರಷ್ಟು ಉದ್ಯೋಗಾವಕಾಶವನ್ನು ಕ್ರೀಡಾ ಸಾಧಕರಿಗೆ ಮೀಸಲಿರಿಸಬೇಕೆಂದು ಪ್ರಸ್ತಾಪಿಸಿದಾಗ, ಇದಕ್ಕೆ ಮುಖ್ಯಮಂತ್ರಿಗಳು ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ ಎಂದು ತಿಳಿಸಿದರು.

ಈಗಾಗಲೇ ಪೊಲೀಸ್ ಇಲಾಖೆಯಲ್ಲಿ 8 ಮಂದಿ ಸಬ್‌ಇನ್ಸ್‌ಪೆಕ್ಟರ್‌ಗಳು, 160 ಮಂದಿ ಪೊಲೀಸ್ ಪೇದೆಯಾಗಿ ಉದ್ಯೋಗ ಪಡೆದಿದ್ದಾರೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ಸಾಧಕರ ಉದ್ಯೋಗ ಮೀಸಲಾತಿ ಶೇ.2ರಷ್ಟು ಇತ್ತು. ಇದನ್ನು ಈಗ ಶೇ.3ಕ್ಕೆ ಹೆಚ್ಚಳ ಮಾಡಲಾಗಿದೆ. ಉದ್ಯೋಗದ ಗ್ಯಾರಂಟಿ ದೊರೆಯಲಿದೆ ಎಂದು ಬಹಳ ಮಂದಿ ಕ್ರೀಡೆಯಲ್ಲಿ ಸಾಧನೆ ಮಾಡಲು ಮುಂದಾಗುತ್ತಿದ್ದಾರೆ. ಇದನ್ನು ರಾಜ್ಯ ಸರ್ಕಾರ ನೀಡಿರುವ ಉದ್ಯೋಗದ ಆರನೇ ಗ್ಯಾರಂಟಿ ಎಂದೂ ಕರೆಯಬಹುದು ಎಂದು ಹರ್ಷ ವ್ಯಕ್ತಪಡಿಸಿದರು.

ರಾಜ್ಯಮಟ್ಟದ ದಸರಾ ಕ್ರೀಡಾಕೂಟ ಪ್ರತಿವರ್ಷ ನಡೆಯುತ್ತಾ ಬಂದಿದೆ. 2018ರಲ್ಲಿ ಇದಕ್ಕೆ ಸಿಎಂ ಕಪ್ ಸೇರ್ಪಡೆ ಮಾಡಲಾಯಿತು. ಬಳಿಕ 5 ವರ್ಷಗಳ ಕಾಲ ಸಿಎಂ ಕಪ್ ಸ್ಥಗಿತವಾಗಿತ್ತು. ಈ ವರ್ಷ ಮತ್ತೆ ಪ್ರಾರಂಭಿಸಿ, ಯಶಸ್ವಿಯಾಗಿ ನಡೆಸಲಾಗಿದೆ. ಇದನ್ನು ಪ್ರತಿ ವರ್ಷ ಮುಂದುವರೆಸಬೇಕೆಂಬ ಉದ್ದೇಶ ಹೊಂದಲಾಗಿದೆ ಎಂದರು.

ಜೊತೆಗೆ ಇತ್ತೀಚೆಗೆ ಏಷ್ಯನ್ ಗೇಮ್ಸ್‌ನಲ್ಲಿ ಸುಮಾರು 11 ಮಂದಿ ರಾಜ್ಯದ ಪಟುಗಳು ಪದಕ ವಿಜೇತರಾಗಿದ್ದಾರೆ. ಇದರ ಜೊತೆಗೆ ಸರ್ಕಾರ ಇವರಿಗೆ ಕಳೆದ 3 ವರ್ಷಗಳಿಂದ ಅಮೃತ ಕ್ರೀಡಾ ದತ್ತು ಯೋಜನೆಯಡಿಯಲ್ಲಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಈ ಯೋಜನೆ ಮುಂದಿನ ವರ್ಷದ ಒಲಂಪಿಕ್ಸ್‌ವರೆಗೂ ಮುಂದುವರೆಯಲಿದೆ. ಈ ವರ್ಷವೂ ತಲಾ 10 ಲಕ್ಷ ರೂ. 75 ಮಂದಿಗೆ ದೊರೆಯಲಿದೆ ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಮಾತನಾಡಿ, ರಾಜ್ಯದಲ್ಲಿ ಬರ ಇರುವ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ದಸರಾ ಆಯೋಜಿಸುವ ಮೂಲಕ ಇತರ ಕಾರ್ಯಕ್ರಮಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದರೂ ಕ್ರೀಡಾಕೂಟಕ್ಕೆ ಯಾವುದೇ ಕೊರತೆ ಇಲ್ಲದಂತೆ ಆಯೋಜಿಸಲು ಸರ್ಕಾರ ಸಹಕಾರ ನೀಡಿತು ಎಂದರು.

ಏಷ್ಯನ್ ಗೇಮ್ಸ್‌ನಲ್ಲಿ ರಾಜ್ಯದ 5 ಮಂದಿ ಕ್ರೀಡಾಪಟುಗಳು ಚಿನ್ನದ ಪದಕ ವಿಜೇತರಾಗಿದ್ದಾರೆ. ನಾಲ್ವರು ಬೆಳ್ಳಿ ಪದಕ ವಿಜೇತರಾಗಿದ್ದಾರೆ. ಹೀಗಾಗಿ ದೇಶಕ್ಕೆ ಕೀರ್ತಿ ತಂದವರು ಕರ್ನಾಟಕದಲ್ಲೂ ಇದ್ದಾರೆ ಎಂಬ ಹೆಮ್ಮೆ ನಮಗೆ ಇದೆ. ಇವರಿಗೆ ಉತ್ತೇಜನ ನೀಡಲು ಮುಖ್ಯಮಂತ್ರಿಗಳು ಚಿನ್ನದ ಪದಕ ವಿಜೇತರಿಗೆ ತಲಾ 25 ಲಕ್ಷ ರೂ., ಬೆಳ್ಳಿ ಪದಕ ವಿಜೇತರಿಗೆ ತಲಾ 15 ಲಕ್ಷ ನಗದು ಪುರಸ್ಕಾರ ನೀಡಿದ್ದಾರೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಕ್ರೀಡೆಗೆ ವಿಶೇಷ ಸ್ಥಾನಮಾನ ಕೊಟ್ಟಿದೆ. ಮುಂದಿನ ದಿನಗಳಲ್ಲಿ ವಿವಿಧ ಕ್ರೀಡೆಗಳಿಗೆ ಸಂಬಂಧಿಸಿದಂತೆ 176 ತರಬೇತುದಾರರ ನೇಮಕಾತಿ ಮಾಡಲಿದೆ. ಅಂಧರ ಕ್ರಿಕೆಟ್ ವಿಶ್ವಕಪ್ ವಿಜೇತ ತಂಡದ ಮೂವರು ಪಟುಗಳಾದ ವರ್ಷಾ ಉಮಾಪತಿ, ಎನ್.ಹೆಚ್.ಗಂಗತ್ವ ಮತ್ತು ಟಿ.ಸಿ.ದೀಪಿಕಾ ಅವರಿಗೆ ಇಲಾಖೆಯಿಂದ ತಲಾ 5 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು ಎಂದರು.



ಸಿಎಂ ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಅತ್ಯುತ್ತಮ ಅಥ್ಲೆಟ್ ಆಗಿ ಹೊರಹೊಮ್ಮಿರುವ ಮಂಗಳೂರಿನ ಎಸ್.ಎಸ್.ಸ್ನೇಹಾ (ಮಹಿಳೆಯರ ವಿಭಾಗ) ಅವರು ಸಚಿವ ಬಿ.ನಾಗೇಂದ್ರ ಅವರಿಂದ ಬಹುಮಾನ ಸ್ವೀಕರಿಸಿದರು.

ಮೈಸೂರು ದಸರಾ ಮಹೋತ್ಸವಲ್ಲಿ ಪ್ರಮುಖವಾಗಿ ಕಳೆಗಟ್ಟುವ ವೇದಿಕೆ ದಸರಾ ಕ್ರೀಡಾಕೂಟವಾಗಿದೆ. ಈ ಕ್ರೀಡೆಯಲ್ಲಿ ಭಾಗವಹಿಸಿದ ಎಲ್ಲಾ ಕ್ರೀಡಾಪಟುಗಳಿಗೆ ಸರ್ಕಾರ ಅಭಿನಂದಿಸುತ್ತದೆ. ಈ ಎಲ್ಲರೂ ಕೂಡ ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ಸೌಹಾರ್ದತೆ, ಅಖಂಡತೆ ಮತ್ತು ಬಹುತ್ವವನ್ನು ಎತ್ತಿ ಹಿಡಿಯಬೇಕು.
–ಡಾ.ಹೆಚ್.ಸಿ.ಮಹದೇವಪ್ಪ

ದಸರಾ ಕ್ರೀಡಾಕೂಟ; ಗೆಲುವು ದಾಖಲಿಸಿದ ತಂಡಗಳು

ಮೈಸೂರು,ಅ.21(ಪಿಎಂ)–ರಾಜ್ಯಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ವಿವಿಧ ತಂಡಗಳು ಗೆಲುವು ಸಾಧಿಸಿವೆ. ಹಾಕಿಯಲ್ಲಿ ಪುರುಷರ ವಿಭಾಗದಲ್ಲಿ ಹಾಸನ ಹಾಗೂ ಮಹಿಳಾ ವಿಭಾಗದಲ್ಲಿ ಮೈಸೂರು ತಂಡ ಜಯಗಳಿಸಿವೆ. ಕ್ರಮವಾಗಿ ಧಾರವಾಡ ಹಾಗೂ ದಕ್ಷಿಣ ಕನ್ನಡ ರನ್ನರ್ ಅಪ್ ಸ್ಥಾನ ಪಡೆದಿವೆ.

ಬಾಸ್ಕೆಟ್ ಬಾಲ್ ಪುರುಷ ವಿಭಾಗದಲ್ಲಿ ಯಂಗ್ ಓರಿಯನ್ಸ್ ಬೆಂಗಳೂರು ತಂಡ ಜಯಗಳಿಸಿದ್ದು, ಬ್ಯಾಂಕ್ ಆಫ್ ಬರೋಡಾ ಮೊದಲ ರನ್ನರ್ ಅಪ್, ಮಹಿಳಾ ವಿಭಾಗದಲ್ಲಿ ಮೌಂಟ್ಸ್ ಬೆಂಗಳೂರು ವಿಜೇತ ತಂಡ, ಡಿವೈಇಎಸ್ ಮೈಸೂರು ತಂಡ ರನ್ನರ್ ಅಪ್ ಸ್ಥಾನ ಪಡೆದಿದೆ. ಫುಟ್‌ಬಾಲ್‌ನ ಪುರುಷರ ವಿಭಾಗದಲ್ಲಿ ಮೈಸೂರು ತಂಡ ವಿಜೇತ, ಹಾಸನ ತಂಡ ರನ್ನರ್ ಅಪ್. ಹ್ಯಾಂಡ್ ಬಾಲ್‌ನ ಪುರುಷರ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ತಂಡ ವಿಜೇತ, ಮೈಸೂರು ತಂಡ ರನ್ನರ್ ಅಪ್. ಮಹಿಳಾ ವಿಭಾಗದಲ್ಲಿ ದಾವಣಗೆರೆ ತಂಡ ವಿಜೇತ, ಬೆಳಗಾವಿ ತಂಡ ರನ್ನರ್ ಅಪ್. ಕಬಡ್ಡಿಯ ಪುರುಷರ ವಿಭಾಗದಲ್ಲಿ ದಕ್ಷಿಣ ಕನ್ನಡ ತಂಡ ವಿಜೇತ, ಹಾಸನ ತಂಡ ರನ್ನರ್ ಅಪ್. ಮಹಿಳೆಯರ ವಿಭಾಗದಲ್ಲಿ ದಕ್ಷಿಣ ಕನ್ನಡ ತಂಡ ವಿಜೇತ, ರಾಮನಗರ ತಂಡ ರನ್ನರ್ ಅಪ್. ಖೋ ಖೋದ ಪುರುಷರ ವಿಭಾಗದಲ್ಲಿ ಬಾಗಲಕೋಟೆ ತಂಡ ವಿಜೇತ, ಬೆಳಗಾವಿ ತಂಡ ರನ್ನರ್ ಅಪ್. ಮಹಿಳಾ ವಿಭಾಗದಲ್ಲಿ ಯಾದಗಿರಿ ತಂಡ ವಿಜೇತ, ಬೆಳಗಾವಿ ತಂಡ ರನ್ನರ್ ಅಪ್. ನೆಟ್‌ಬಾಲ್‌ನ ಪುರುಷರ ವಿಭಾಗದಲ್ಲಿ ದಕ್ಷಿಣ ಕನ್ನಡ ತಂಡ ವಿಜೇತ, ಮೈಸೂರು ತಂಡ ರನ್ನರ್ ಅಪ್.

ಮಹಿಳೆಯರ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ತಂಡ ವಿಜೇತ, ದಕ್ಷಿಣ ಕನ್ನಡ ರನ್ನರ್ ಅಪ್. ವಾಲಿಬಾಲ್‌ನ ಪುರುಷ ವಿಭಾಗದಲ್ಲಿ ರಾಮನಗರ ತಂಡ ವಿಜೇತ, ಬೆಂಗಳೂರು ಪೋಸ್ಟಲ್ ತಂಡ ರನ್ನರ್ ಅಪ್. ಮಹಿಳಾ ವಿಭಾಗದಲ್ಲಿ ಮೈಸೂರು ತಂಡ ವಿಜೇತ, ದಕ್ಷಿಣ ಕನ್ನಡ ತಂಡ ರನ್ನರ್ ಅಪ್ ಆಗಿ ಹೊರಹೊಮ್ಮಿವೆ.



ಏಷ್ಯನ್ ಗೇಮ್ಸ್‌ನಲ್ಲಿ ಸಾಧನೆ ತೋರಿದ (ಎಡದಿಂದ) ಬಾಕ್ಸಿಂಗ್ ತರಬೇತುದಾರ ಕುಟ್ಟಪ್ಪ, ಕಬಡ್ಡಿ ತರಬೇತುದಾರರಾದ ತೇಜಸ್ವಿನಿ ಬಾಯಿ, 4x400 ರಿಲೇಯಲ್ಲಿ ಚಿನ್ನದ ಪದಕ ವಿಜೇತ ನಿಹಾಲ್ ಜೋಯಲ್ ಅವರು ಗಣ್ಯರಿಂದ ಸನ್ಮಾನ ಸ್ವೀಕರಿಸಿದ ಬಳಿಕ 'ಮೈಸೂರು ಮಿತ್ರ'ನಿಗೆ ಪೋಸು ನೀಡಿದ ಕ್ಷಣ.



ಅಂಧರ ಕ್ರಿಕೆಟ್ ವಿಶ್ವಕಪ್ ವಿಜೇತ ತಂಡದ ಸದಸ್ಯರಾದ ವರ್ಷಾ ಉಮಾಪತಿ, ಗಂಗತ್ವ, ಟಿ.ಸಿ.ದೀಪಿಕಾ ಅವರನ್ನು ಸನ್ಮಾನಿಸಲಾಯಿತು.



ಹಾಕಿ ಮಹಿಳಾ ವಿಭಾಗದಲ್ಲಿ ಗೆಲುವು ಸಾಧಿಸಿದ ವಿಜೇತ ಮೈಸೂರು ತಂಡವನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಮಿತ್ರ

ಹಿರಿಯರನ್ನು ಪೋಷಿಸದವರ ಮೇಲೆ ಕಾನೂನು ಕ್ರಮ

ಹೆಚ್.ಡಿ.ಕೋಟೆ ಸಿವಿಲ್ ಕೋರ್ಟ್‌ನ ಹಿರಿಯ ನ್ಯಾಯಾಧೀಶ ಕೆ.ಜಿ.ಸತೀಶ್ ಎಚ್ಚರಿಕೆ

ಹೆಚ್.ಡಿ.ಕೋಟೆ, ಅ.21– ಪಾಲಕರಿಗೆ ಮತ್ತು ಅಜ್ಜ, ಅಜ್ಜಿಯರಿಗೆ ಅವರ ಮೊಮ್ಮಕ್ಕಳು ನಿಗದಿತ ಅವಧಿಯಲ್ಲಿ ಜೀವನ ನಿರ್ವಹಣೆ ಮಾಡಲು ಸಹಕರಿಸಬೇಕು, ತೊಂದರೆ ಕೊಟ್ಟರೆ ಅಂತವರ ಮೇಲೆ ಕೇಸು ದಾಖಲಿಸಲು ಕಾನೂನಿನಲ್ಲಿ ಅವಕಾಶ ಇದೆ ಎಂದು ಹೆಚ್.ಡಿ. ಕೋಟೆ ಸಿವಿಲ್ ನ್ಯಾಯಾಲಯದ ಹಿರಿಯ ನ್ಯಾಯಾಧೀಶರಾದ ಕೆ.ಜಿ. ಸತೀಶ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ತಾಲೂಕು ಆರೋಗ್ಯ ಇಲಾಖೆ ಕಚೇರಿ ಸಭಾಂಗಣದಲ್ಲಿ ಶನಿವಾರ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಕಾನೂನು ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಮಾನಸಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

2007ರ ಅಧಿನಿಯಮದ ಪ್ರಕಾರ ತಂದೆ ತಾಯಿ ಹಾಗೂ ಹಿರಿಯ ನಾಗರಿಕರನ್ನು ಪೋಷಣೆ ಮಾಡಬೇಕು ಎಂದು ಕೇಂದ್ರ ಸರ್ಕಾರ ಕಾಯಿದೆ ಜಾರಿಗೆ ತಂದಿದ್ದೆ, ಹಿರಿಯ ನಾಗರಿಕರು ಒಂಟಿಯಾಗಿ ವಾಸಿಸುತ್ತಿದ್ದರೆ ಅಂತವರನ್ನು ವಿಕಲಚೇತನ, ಕಂದಾಯ, ಆರೋಗ್ಯ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳು ಪರಿಷ್ಕೃತ ಪಟ್ಟಿಯನ್ನು ಮಾಡಬೇಕು, ಪಟ್ಟಿ ಮಾಡಿ ತಿಂಗಳಿಗೆ ಒಂದು ಬಾರಿ ಕಡ್ಡಾಯವಾಗಿ ಭೇಟಿ ಮಾಡಿ ಅವರ



ಆರೈಕೆ ಮಾಡಬೇಕು, ಹಿರಿಯ ನಾಗರಿಕರ ಬಗ್ಗೆ ಸಮಿತಿ ರಚನೆ ಆಗಬೇಕು, ಹಿರಿಯ ನಾಗರಿಕರ ಮೇಲೆ ದೈಹಿಕ ಹಲ್ಲೆ ಮಾಡಿದರೆ ಅಂಥವರ ಮೇಲೆ ಕಠಿಣ ಕ್ರಮ ವಹಿಸಲಾಗುವುದು, ಇದು ಪೊಲೀಸ್ ಇಲಾಖೆಯ ಕರ್ತವ್ಯವಾಗಿರುತ್ತದೆ ಎಂದರು.

ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರಿಗಾಗಿ ಹೆಚ್ಚುವರಿ ಹಾಸಿಗೆಯನ್ನು ಒದಗಿಸಬೇಕು ಹಾಗೂ ಒಪಿಡಿ ಚೀಟಿ ಪಡೆಯಲು ಪ್ರತ್ಯೇಕ ಸಾಲುಗಳ ವ್ಯವಸ್ಥೆ ಮಾಡಬೇಕು. ಹಿರಿಯ ನಾಗರಿಕರು ತೀವ್ರ ಕಾಯಿಲೆಯಿಂದ ಬಳಲುತ್ತಿದ್ದರೆ ಅಂತವರಿಗೆ ಅಗತ್ಯ ಸೌಲಭ್ಯ ನೀಡಬೇಕು, ಇದು ಆರೋಗ್ಯಕ್ಕೆ ಇಲಾಖೆಯ ಜವಾಬ್ದಾರಿಯಾಗಿರುತ್ತದೆ ಎಂದರು.

ಮೆಂಟಲ್ ಹೆಲ್ತ್ ಕೇರ್ 2017ರಲ್ಲಿ ಜಾರಿಗೆ ತಂದಿದ್ದು, 2023ರ ಮಾನಸಿಕ ಆರೋಗ್ಯ ದಿನ ಕಾಯಿದೆ ಪ್ರಕಾರ ಮಾನಸಿಕ ರೋಗಿಗಳು ಉಚಿತವಾಗಿ ಚಿಕಿತ್ಸೆಯನ್ನು ಪಡೆಯುವ ಹಕ್ಕನ್ನು ಹೊಂದಿದ್ದಾರೆ ಹಾಗೂ ಹೆಚ್ಚುವರಿ ಚಿಕಿತ್ಸೆಗೆ ಬೇರೆ ಸ್ಥಳಕ್ಕೆ ಹೋಗುವುದಾದರೆ ಅವರಿಗೆ ಹೋಗುವ ವೆಚ್ಚವನ್ನು ಸರ್ಕಾರ ಒದಗಿಸಬೇಕು. ಮಾನಸಿಕ ರೋಗಿಗಳು ಆತ್ಮಹತ್ಯೆಗೆ ಪ್ರಯತ್ನಪಟ್ಟರೆ ಅದು ಶಿಕ್ಷಾರ್ಹ ಅಪರಾಧವಾಗಿರುವುದಿಲ್ಲ ಎಂದು ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ವಿಶ್ವ ಮಾನಸಿಕ ದಿನಾಚರಣೆ ಎಷ್ಟು ಮುಖ್ಯವಾಗಿದೆಯೋ ಅದೇ ಹಿರಿಯ ನಾಗರಿಕರ ದಿನಾಚರಣೆ ಕೂಡ ಮುಖ್ಯ, ನಾವು ಹಿರಿಯರನ್ನು ಗೌರವಿಸುವ ಕೆಲಸವನ್ನು ಮಾಡಬೇಕು. 1992 ರಿಂದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಮಾಡಿಕೊಂಡು ಬಂದಿದ್ದೇವೆ. ಶೇಕಡ 13 ರಷ್ಟು ಜನರು ಮಾನಸಿಕ ರೋಗದಿಂದ ನರಳಾಡುತ್ತಿದ್ದಾರೆ ಎಂದರು.

ಆರೋಗ್ಯವನ್ನು ಸಮತೋಲನವಾಗಿ ನೋಡಿಕೊಂಡಾಗ ಮಾನಸಿಕ ರೋಗದಿಂದ ದೂರ ಇರಬಹುದು. ಹಲವಾರು ಕಾರಣಗಳಿಂದ ನಾವು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದೇವೆ, ಸಮತೋಲನ ಆಹಾರವನ್ನು ನಾವು ರೂಢಿಸಿಕೊಂಡಿದ್ದೇ ಆದರೆ ನಾವು ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ಮಾನಸಿಕ ರೋಗದಿಂದ ದೂರ ಇರಲು ಸಾಧ್ಯ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ವಕೀಲೆ ನಾಗಶ್ರೀ ಮಾತನಾಡಿ, ಮಾನಸಿಕವಾಗಿ ಇರುವ ವ್ಯಕ್ತಿಗಳನ್ನು ಸಂತೋಷದಿಂದ ನೋಡಿಕೊಂಡಿದ್ದೇ ಆದರೆ, ಅವರನ್ನು ಮಾನಸಿಕ ರೋಗದಿಂದ ದೂರ ಉಳಿಸಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ.ಟಿ.ರವಿಕುಮಾರ್, ಸಿಡಿಪಿಒ ಆಶಾ, ವಕೀಲರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಉಪಾಧ್ಯಕ್ಷ ನಾಗೇಶ್, ನಾಗಶ್ರೀ, ಮಣಿರಾಜ್ ಇದ್ದರು.

ಬೂದುಗುಂಬಳಕಾಯಿ, ಹೂವಿನ ದರ ಕುಸಿತ



ಬೆಟ್ಟದಪುರ, ಅ.21– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಸೋಮವಾರ ನಡೆಯಲಿರುವ ಆಯುಧಪೂಜೆ ಅಂಗವಾಗಿ ಭಾರಿ ಪ್ರಮಾಣದಲ್ಲಿ ಬೂದು ಕುಂಬಳ ಕಾಯಿ ಶೇಖರಣೆಯಾಗಿದ್ದು, ಬೆಲೆ ಕುಸಿತಗೊಂಡಿದ್ದು, ರೈತರು ಆತಂಕಗೊಂಡಿದ್ದಾರೆ.

ಈ ಹಿಂದಿನ ಆಯುಧ ಪೂಜೆಯಲ್ಲಿ ನೂರಾರು ರೂ.ಗಳಿದ್ದ ಕುಂಬಳಕಾಯಿ ಇಂದು ಕೇವಲ 20 ರಿಂದ 30ಕ್ಕೆ ಕುಸಿದಿದೆ. ಇದೇ ರೀತಿ ಹೂವಿನ ಬೆಲೆ ಸಹ ಕುಸಿತವಾಗಿ ಸೇವಂತಿಗೆ ಹೂವು 50ರಿಂದ ಎಪ್ಪತ್ತು ರೂಪಾಯಿಗೆ ಮಾರಾಟವಾಗುತ್ತಿದೆ. ಗ್ರಾಹಕರಿಗೆ ಬೆಟ್ಟದಪುರ ವ್ಯಾಪ್ತಿಯಲ್ಲಿ ಹೂವು ಮತ್ತು ಬೂದು ಬೂದುಗುಂಬಳ ಕಾಯಿ ವಾಹನ ಮಾಲೀಕರಿಗೆ ಇದು ಸಂತಸ ಸುದ್ದಿಯಾಗಿದೆ. ಆದರೆ ಬಾಳೆಹಣ್ಣು ಗಗನಕುಸುಮವಾಗಿದೆ. ಕೆಜಿಗೆ 100 ರಿಂದ 150 ರೂಪಾಯಿ ಬಾಳೆ ಹಣ್ಣಿನ ಬೆಲೆ ಏರಿಕೆಯಾಗಿದ್ದು ಇದರಿಂದ ಹಬ್ಬ ಆಚರಿಸುವವರಿಗೆ ಭಾರಿ ಬಿಸಿ ತಟ್ಟಿದೆ.

ಪೌರಕಾರ್ಮಿಕರ ಸಮಾನ ವೇತನಕ್ಕಾಗಿ ಶ್ರಮಿಸುವೆ

ಪೌರಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅಭಯ

ನಂಜನಗೂಡು, ಅ.21– ನಗರ ಮತ್ತು ಗ್ರಾಮಗಳ ಸ್ವಚ್ಛತೆಯಲ್ಲಿ ಪೌರಕಾರ್ಮಿಕರ ಶ್ರಮ ಅಪಾರವಾಗಿದೆ. ಪೌರಕಾರ್ಮಿಕರ ಪರಿಶ್ರಮ ಹಾಗೂ ಸೇವೆಗೆ ಸರಿಯಾದ ಗೌರವ, ಸಮಾನ ವೇತನ ದೊರಕಿಸುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಪಂಚಾಯ್ತಿ ವತಿಯಿಂದ ಏರ್ಪಡಿಸಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಗ್ರಾಪಂ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರನ್ನು ಸನ್ಮಾನಿಸಿ ಮಾತನಾಡಿದರು.

ಗ್ರಾಮ ಮತ್ತು ನಗರವನ್ನು ಸ್ವಚ್ಛಗೊಳಿಸಿ, ಜನರ ಆರೋಗ್ಯದ ಜೊತೆಗೆ ನೈರ್ಮಲ್ಯ ಕಾಪಾಡುವ ಪೌರಕಾರ್ಮಿಕರು ಪರಿಸರ ಸಂರಕ್ಷಣೆಗಾಗಿಯೂ ಸಹ ಶ್ರಮವಹಿಸಿ ದುಡಿಯುತ್ತಿದ್ದಾರೆ. ಅವರ ಪರಿಶ್ರಮಕ್ಕೆ ಸರ್ಕಾರಗಳು ಸಮಾನ ಗೌರವ ಮತ್ತು ಸಮಾನ ವೇತನವನ್ನು ನೀಡುವ ಮೂಲಕ ಪೌರಕಾರ್ಮಿಕರ ಸಬಲೀಕರಣಕ್ಕೆ ಮುಂದಾಗಬೇಕು ಎಂದ ಅವರು ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ನಿರತ



ರಾಗುವ ವೇಳೆ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಮುಂದಾಗಬೇಕು. ಗ್ರಾಮ ಪಂಚಾಯ್ತಿಗಳು ಪೌರಕಾರ್ಮಿಕರಿಗೆ ಅಗತ್ಯವಾದ ಸುರಕ್ಷತಾ ಸಾಮಗ್ರಿಗಳನ್ನು ವಿತರಿಸ ಬೇಕು, ಅವರಿಗೆ ಪ್ರತಿ 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ನಡೆಸಬೇಕು. ಮತ್ತು ಪೌರಕಾರ್ಮಿಕರ ಸಬಲೀಕರಣದ ಉದ್ದೇಶದಿಂದ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವಂತೆ ಇಓ ಅವರಿಗೆ ಸೂಚನೆ ನೀಡಿದರು.

ನಾವು ಜನಸಂಪರ್ಕ ಸಭೆಗಳನ್ನು ಮಾಡುವ ಸಂದರ್ಭದಲ್ಲಿ ಪೌರಕಾರ್ಮಿಕರು ನಿವೇಶನಗಳನ್ನು ಕೊಡುವಂತೆ, ಮನೆ ನಿರ್ಮಿಸಿಕೊಡುವಂತೆ ಮನವಿ ಸಲ್ಲಿಸುತ್ತಿದ್ದಾರೆ. ಪೌರಕಾರ್ಮಿಕರಿಗೆ ಮನೆ ನಿರ್ಮಿಸಿಕೊಡುವ ಸಲುವಾಗಿ ಈಗಾಗಲೇ ಪ್ರತಿ ಗ್ರಾಮ ಪಂಚಾಯ್ತಿಯ ಗ್ರಾಮಗಳ ವ್ಯಾಪ್ತಿಯಲ್ಲಿ 3 ರಿಂದ 4 ನಿವೇಶನಗಳನ್ನು ಪೌರಕಾರ್ಮಿಕರಿಗಾಗಿ ನಿಗದಿಗೊಳಿಸುವಂತೆ ತಾಪಂ ಇಓ ಅವರಿಗೆ ಸೂಚನೆ ನೀಡಲಾಗಿದೆ. ನಿವೇಶನ ರಹಿತ ಪೌರಕಾರ್ಮಿಕರಿಗೆ ನಿವೇಶನ ನೀಡುವ ಜೊತೆಗೆ ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಡಲು ತೀರ್ಮಾನಿಸಲಾಗಿದ್ದು. ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪೌರಕಾರ್ಮಿಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಚೆಲುವರಾಜು, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಪೌರಾಯುಕ್ತ ನಂಜುಂಡಸ್ವಾಮಿ, ಹೊಸಕೋಟೆ ಗ್ರಾಪಂ ಅಧ್ಯಕ್ಷೆ ಆರ್. ಇಂದ್ರಾಣಿ ಕುಮಾರ್, ಸಿಂದುವಳ್ಳಿ ಗ್ರಾಪಂ ಅಧ್ಯಕ್ಷ ಹೊಣಕಾರನಾಯಕ, ನವಿಲೂರು ಗ್ರಾಪಂ ಅಧ್ಯಕ್ಷ ರೇವಣ್ಣ ಸೇರಿದಂತೆ ಹಲವಾರು ಪ್ರಮುಖರು ಮತ್ತು ಪಿಡಿಓಗಳು ಇದ್ದರು.

ಹುಣಸೂರಲ್ಲಿ 'ನನ್ನ ಮಣ್ಣು ನನ್ನ ದೇಶ' ಅಮೃತ ಕಳಸ ಯಾತ್ರೆ

ಹುಣಸೂರು, ಅ.21– ಮಣ್ಣಿನಲ್ಲಿ ಸಾವಿರ ತರಹದ ಬೀಜ ಬಿತ್ತಿದರೂ ಗಿಡವಾಗಿ ಫಲ ಕೊಡುವ ಮೂಲಕ ಬೆಳೆಯುವುದಕ್ಕೆ ಆಸ್ಪದ ನೀಡುತ್ತದೆ ಅದೇ ರೀತಿ ಮನುಷ್ಯರಾದ ನಾವು ಸಹ ನಮ್ಮ ನಡವಳಿಕೆಯನ್ನು ಬೆಳೆಸಿ ಉಳಿಸಿಕೊಳ್ಳುವತ್ತ ಮಾನಸಿಕ ಮತ್ತು ದೈಹಿಕ ಮನೋವಿಕಾಸಕ್ಕೆ ಸಾಕ್ಷಿಯಾಗಬೇಕು ಎಂದು ಸಂಪನ್ಮೂಲ ವ್ಯಕ್ತಿ ರೇಣುಕಾ ಪ್ರಸಾದ್ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಹುತಾತ್ಮ ವೀರ ಯೋಧರರನ್ನು ಗೌರವಿಸುವ ನಿಟ್ಟಿನಲ್ಲಿ ನಗರದ ಸರ್ಕಾರಿ ಮಹಿಳಾ



ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಕಲಾ ಯುವಕರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ "ನನ್ನ ಮಣ್ಣು ನನ್ನ ದೇಶ" ಅಮೃತ ಕಳಶ ಯಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇದಕ್ಕೂ ಮುನ್ನ ದೇಶಕ್ಕಾಗಿ ಸೇವೆ ಸಲ್ಲಿಸಿದ ತಾಲೂಕಿನ ನಿವೃತ್ತ ಯೋಧರಾದ ವಿಲ್ಸನ್ ಹಾಗೂ ಲೂಯಿಸ್ ಫೆರೆರ್ ಅವರನ್ನು ನನ್ನ ಮಣ್ಣು ನನ್ನ ದೇಶ ಕಾರ್ಯಕ್ರಮದ ಅಂಗವಾಗಿ ಸನ್ಮಾನಿಸಿ, ಗೌರವಿಸಲಾಯಿತು. ಜೊತೆಗೆ ನೆರೆದಿದ್ದ ಗಣ್ಯರು ಹಾಗೂ ವಿದ್ಯಾರ್ಥಿನಿಯರಿಂದ ಪಂಚ ಪ್ರಾಣ ಶಪಥ ಮಾಡಿಸಲಾಯಿತು

ಅಮೃತ ಕಳಶ ಹಸ್ತಾಂತರ: ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯರಾದ ಪುಟ್ಟಶೆಟ್ಟಿ, ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಹೆಚ್.ಡಿ.ಲೋಕೇಶ್ ಹಾಗೂ ತಾಲೂಕು ಯೋಜನಾಧಿಕಾರಿ ಎಂ.ಎಸ್. ರಾಜೇಶ್ ಅವರು ಗ್ರಾಮ ಪಂಚಾಯಿತಿಗಳಿಂದ ಸಂಗ್ರಹ ಮಾಡಲಾಗಿದ್ದ ಅಮೃತ ಕಳಶವನ್ನು ನೆಹರು ಯುವ ಕೇಂದ್ರದ ರಾಷ್ಟ್ರೀಯ ಸ್ವಯಂ ಸೇವಾ ಪ್ರತಿನಿಧಿ ಗೋವಿಂದನಾಯಕ ಅವರಿಗೆ ಹಸ್ತಾಂತರ ಮಾಡಿದರು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಿಂದ ಸಾಗಿದ ಅಮೃತ ಕಳಶ ಯಾತ್ರೆಯು ಹೆಚ್.ಡಿ.ಕೋಟೆ ವೃತ್ತದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಂವಿಧಾನ ವೃತ್ತದವರೆಗೂ ತಲುಪಿ ಬಳಿಕ ಕಾಲೇಜಿನ ಆವರಣಕ್ಕೆ ವಿವಿಧ ವಾದ್ಯಮೇಳದೊಂದಿಗೆ ಬಂದು ತಲುಪಿತು.

ಅ.28ರಿಂದ ರಾಜ್ಯಮಟ್ಟದ ಸೀನಿಯರ್ ಹೊನಲು ಬೆಳಕಿನ ಖೋ–ಖೋ ಪಂದ್ಯಾವಳಿ

ತಿ.ನರಸೀಪುರ, ಅ. 21 – ನವೋದಯ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ತಾಲೂಕಿನ ಸೋಸಲೆ ಗ್ರಾಮದಲ್ಲಿ ಪುರುಷರ ಮತ್ತು ಮಹಿಳೆಯರ ರಾಜ್ಯಮಟ್ಟದ ಸೀನಿಯರ್ ಹೊನಲು ಬೆಳಕಿನ ಖೋ–ಖೋ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಕ್ಲಬ್‌ನ ಅಧ್ಯಕ್ಷ ಎಂ.ಪುಟ್ಟಸ್ವಾಮಿ ಹೇಳಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಪಂದ್ಯಾವಳಿಯ ಬಗ್ಗೆ ಮಾಹಿತಿ ನೀಡಲು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಸೋಸಲೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಅ.28ರ ಶನಿವಾರದಿಂದ 31ರ ಮಂಗಳವಾರದವರೆಗೆ ರಾಜ್ಯಮಟ್ಟದ ಪಂದ್ಯಾವಳಿ ನಡೆಯಲಿದ್ದು ಈಗಾಗಲೇ ಪಂದ್ಯಾವಳಿಯಲ್ಲಿ ಭಾಗವಹಿಸಲು 78 ತಂಡಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿವೆ. 40 ಪುರುಷ ಹಾಗೂ 35 ರಿಂದ 40 ಮಹಿಳಾ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸುವ ಸಾಧ್ಯತೆ ಇದ್ದು, ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಉಪಾಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ಇದೇ ಮೊದಲ ಬಾರಿಗೆ ಗ್ರಾಮದಲ್ಲಿ ನಡೆಯಲಿರುವ ಹೊನಲು ಬೆಳಕಿನ ಖೋ–ಖೋ ಪಂದ್ಯಾವಳಿಯ ಸಮಾರಂಭದ ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ವಹಿಸಲಿದ್ದು, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಪಂದ್ಯಾವಳಿ ಉದ್ಘಾಟನೆ ಮಾಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕ್ಲಬ್ ನ ಕಾರ್ಯದರ್ಶಿ ಪಿ.ಚಂದ್ರಶೇಖರ್, ಖಜಾಂಚಿ ಎಸ್.ವಿ. ತಿರುಮಲ್ಲೇಶ್, ಸಹಕಾರ್ಯದರ್ಶಿ ನಾಗೇಶ್ ಸೋಸ್ಲೆ ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್, ಸದಸ್ಯರಾದ ನಾಗರಾಜು ಅರವಿಂದ್, ಸಚ್ಚಿದಾನಂದ, ಸೂರಜ್ ಪೃಥ್ವಿ, ಹರೀಶ್ ಸೋಸ್ಲೆ, ಪಂಕಜ, ಮಹೇಶ್ ಹಾಜರಿದ್ದರು.

ಸರ್ಕಾರಿ ಕಚೇರಿಗೆ ಅಲೆಯಬೇಡಿ, ನಾನೇ ಮನೆ ಬಾಗಿಲಿಗೆ ಬರುತ್ತೇನೆ

ಸಾರ್ವಜನಿಕರ ಅಹವಾಲು ಆಲಿಸಿದ ಶಾಸಕರ ಭರವಸೆ

ಮಲ್ಕುಂಡಿ, ಅ.21– ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿಯಾಗಿದೆ ಎಂದು ತಿಳಿಸಿದ ಶಾಸಕ ದರ್ಶನ್ ಧ್ರುವನಾರಾಯಣ್, ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡಬೇಡಿ. ನಾನೇ ಅಧಿಕಾರಿಗಳ ಜೊತೆ ನಿಮ್ಮ ಮನೆ ಬಾಗಿಲಿಗೆ ಬರುತ್ತೇನೆ ಎಂದರು.

ನಂಜನಗೂಡು ತಾಲೂಕಿನ ಕುರಿಹುಂಡಿ ಗ್ರಾಪಂ ವ್ಯಾಪ್ತಿಗೆ ಬರುವ ತರಗನಹಳ್ಳಿ, ಕಣೇನೂರು, ಕುರಿಹುಂಡಿ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಹಲವು ಸಮಸ್ಯೆಗಳಿವೆ. ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆ ಎಂದರು.

ಗ್ರಾಮೀಣ ಭಾಗದ ರೈತರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಪ್ರತಿ ಗ್ರಾಮಗಳಿಗೆ ಅಧಿಕಾರಿಗಳ ಜೊತೆ



ಸಭೆ ನಡೆಸಲಾಗುವುದು. ಏನೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತನ್ನಿ. ಸ್ಥಳದಲ್ಲೇ ಪರಿಹರಿಸಲಾಗುವುದು ಎಂದರಲ್ಲದೆ ಈಗಾಗಲೇ ನಮ್ಮ ಕಾಂಗ್ರೆಸ್ ಸರ್ಕಾರ ಚುನಾವಣೆ ಸಂದರ್ಭದಲ್ಲಿ ನೀಡಿದ ಗ್ಯಾರಂಟಿಗಳನ್ನು ಈಗಾಗಲೇ 4 ಗ್ಯಾರಂಟಿ ಜಾರಿಯಾಗಿದೆ. ಸರ್ಕಾರಕ್ಕೆ ಒತ್ತು ನೀಡಿ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆ ಎಂದರು.

ಸಾರ್ವಜನಿಕರು ತಮ್ಮ ಅಹವಾಲುಗಳನ್ನು ನನಗೆ ನೀಡಿ, ಗ್ರಾಮೀಣ ಭಾಗದ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಗ್ರಾಪಂ ಅಧ್ಯಕ್ಷೆ ನಾಗಮಣಿ, ಉಪಾಧ್ಯಕ್ಷ ಮಂಜುನಾಯಕ, ಸದಸ್ಯರಾದ ಜಗದೀಶ್, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಗ್ರಾಪಂ ಉಪಾಧ್ಯಕ್ಷಅನಂದ್, ಇಓ ರಾಜೇಶ್, ಸಿಡಿಪಿಓ ಕವಿತಾ, ಕಾಂಗ್ರೆಸ್ ಯುವ ಘಟಕದ ತಾಲ್ಲೂಕು ಅಧ್ಯಕ್ಷ ದೇಬೂರು ಅಶೋಕ್, ಹಗಿನವಾಳು ಕೆಂಡಗಣ್ಣಪ್ಪ ಹಾಜರಿದ್ದರು.

ಪರಮಾತ್ಮನ ಮಾರ್ಗದರ್ಶನದಲ್ಲಿ ಸೃಜನಶೀಲರಾಗಿ ಕೆಲಸ ಮಾಡಬೇಕು

ತಿ.ನರಸೀಪುರ, ಅ.21– ಪರಮಾತ್ಮನ ಮಾರ್ಗದರ್ಶನದಲ್ಲಿ ಭೂಮಿ ಮೇಲೆ ನಾವು ಸೃಜನಶೀಲ ಪ್ರಕ್ರಿಯೆ ಮೂಲಕ ಕೆಲಸ ಮಾಡುವುದು ಒಂದು ಜೀವನ ಕಲೆಯಾಗಿದೆ ಎಂದು ಬೆಂಗಳೂರಿನ ಚಾಮರಾಜಪೇಟೆಯ ಬ್ರಹ್ಮ ಕುಮಾರೀಸ್ ಉಪವಲಯದ ರಾಜಯೋಗಿನಿ ಬಿ.ಕೆ.ಲೀಲಾಜೀ ಹೇಳಿದರು.

ತಾಲೂಕಿನ ಕಗ್ಗಲೀಪುರ ಗ್ರಾಮದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಶ್ರೀರಂಗರಾಜಪುರ ಸರ್ಕಲ್ ಬಳಿ ನಿರ್ಮಿಸಿರುವ ನೂತನ ಸೇವಾ ಕೇಂದ್ರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೀವನವನ್ನು ನಿಜವಾದ ಸೃಜನಶೀಲ ಪ್ರಕ್ರಿಯೆಯಾಗಿ ವಿನ್ಯಾಸಗೊಳಿಸಲಾಗಿದೆ. ನಮ್ಮ ದೈನಂದಿನ ಜೀವನದಲ್ಲಿ ತೊಡಗಿಸಿಕೊಂಡಾಗ ಕಾರ್ಯಗಳ ಮೇಲೆ ನಿಯಂತ್ರಿಸಲು ಧ್ಯಾನ ಅತ್ಯವಶ್ಯ. ನಾವು ನಮ್ಮ ಜೀವನದಲ್ಲಿ ಶುದ್ಧ ಭಾವನೆಗಳನ್ನು ಅಳವಡಿಸಿ



ಕೊಳ್ಳಬೇಕು, ಆಗ ನಮ್ಮ ಬದುಕಿಗೆ ಶುಭವಾಗುತ್ತದೆ. ನಾವು ಅಧ್ಯಾತ್ಮಿಕ ಮೌಲ್ಯಗಳ ದೃಷ್ಟಿಯಿಂದ ಬದಲಾದಾಗ, ಪ್ರಪಂಚ ಬದಲಾಗುತ್ತದೆ. ಇದುವೇ ಜೀವನದ ಕಲೆಯಾಗಿದೆ ಎಂದು ಹೇಳಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ಆಧ್ಯಾತ್ಮಿಕ ಚಿಂತನೆಗಳು ಆರೋಗ್ಯಕರ ಬದುಕಿಗೆ ಕಾರಣವಾಗುತ್ತವೆ. ಇಲ್ಲಿನ ಈಶ್ವರೀಯ ವಿದ್ಯಾಲಯವು ಉತ್ತಮವಾದ ಆಧ್ಯಾತ್ಮಕ ಚಿಂತನೆಗಳನ್ನು ಕಾರ್ಯಕ್ರಮಗಳ ಮೂಲಕ ಹೇಳಿಕೊಡುವ ಮೂಲಕ ಸಮಾಜ ಸೇವೆ ಮಾಡುತ್ತಿರುವುದು ಶ್ಲಾಘನೀಯ. ಇಂದಿನ ಆಧುನಿಕ ಜೀವನ ಶೈಲಿಯ ಬದುಕಿನಿಂದ ನೆಮ್ಮದಿಯ ಬದುಕು ವಿರಳವಾಗುತ್ತಿದೆ. ಹಾಗಾಗಿ ಆದ್ಯಾತ್ಮಕ ಚಿಂತನೆಗಳಿಂದ ನೆಮ್ಮದಿಯ ಬದುಕು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು. ಈಶ್ವರೀಯ ವಿದ್ಯಾಲಯದಂತಹ ಆಧ್ಯಾತ್ಮಕ ಕೇಂದ್ರಗಳು ನಮ್ಮ ಮನಸ್ಸನ್ನು ಪರಮಾತ್ಮನೆಡೆಗೆ ಯಾವ ರೀತಿ ಜೋಡಿಸಬೇಕು ಎಂಬುದನ್ನು ತಿಳಿಸಿಕೊಡುವ ಮೂಲಕ ಪ್ರತಿಯೊಬ್ಬರನ್ನು ಧರ್ಮ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸುತ್ತಿದೆ ಎಂದರು.

ಕಡಪಾ ಜಿಲ್ಲೆಯ ಬ್ರಹ್ಮಕುಮಾರಿಸ್ ಉಪವಲಯದ ಉಪ ನಿರ್ದೇಶಕಿ ರಾಜಯೋಗಿನಿ ಬಿ.ಕೆ.ಗೀತಾಜೀ ಈಶ್ವರೀಯ ಸಂದೇಶ ತಿಳಿಸಿದರು.

ರಾಜಯೋಗಿನಿ ಬಿ.ಕೆ.ಪವಿತ್ರಾಜೀ, ಸಣ್ಣೇಗೌಡರ ಮಗ ನಾಗಣ್ಣ, ಸಹಕಾರ ಸಂಘದ ಸದಸ್ಯ ಬೋರೇಗೌಡ, ಯಜಮಾನರಾದ ಚಿನ್ನಸ್ವಾಮಿ, ಹೆಚ್.ಹನುಮಂತಪ್ಪ, ಸೋಮನಾಥಪುರ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರಾಜೇಶ್, ಮಹೇಶ್, ರಾಜಣ್ಣ, ಗೌರಮ್ಮ, ಮಂಜೇಶ್ ಗೌಡ, ಅರ್ಚನ, ಡೈರಿ ಅಧ್ಯಕ್ಷ ರಂಗಯ್ಯನ ರಾಜು, ಸದಸ್ಯ ಕಪಾಲಿ ಮಂಜು ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಗಣಪತ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಲಿಯೋ (ತ)	2 ಪ್ರದರ್ಶನಗಳು
ಲಿಯೋ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಣಪತ್ (ಹಿ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಲಿಯೋ (ತ):** ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, **ಘೋಸ್ಟ್ (ಕ):** ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	**ದಸರಾ ಚಿತ್ರಗಳು:** ಬೆ10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಗಣಪತ್ (ಹಿಂ):** ರಾ.10.20ಕ್ಕೆ.
ಸ್ಕ್ರೀನ್ 3	**ಯಾರಿಯನ್ 2 (ಹಿಂ):** ಬೆ.10.05ಕ್ಕೆ, **ಗಣಪತ್ (ಹಿಂ):** ಮ.1ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಮ.3.35ಕ್ಕೆ, ರಾ.7ಕ್ಕೆ, **ಭಗವಂತ್ ಕೇಸರಿ (ತೆ):** ರಾ.10.25ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, **ಲಿಯೋ (ತ):** ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಲಿಯೋ (ತ):** ಬೆ.9.35ಕ್ಕೆ, ಮ.3.55ಕ್ಕೆ, **ಘೋಸ್ಟ್ (ಕ):** ಮ.1ಕ್ಕೆ, ರಾ.7.20ಕ್ಕೆ, **ಗಣಪತ್ (ಹಿಂ):** ರಾ.10.15ಕ್ಕೆ.
ಸ್ಕ್ರೀನ್ 2	**ಲಿಯೋ (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಭಗವಂತ್ ಕೇಸರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ಟೈಗರ್ ನಾಗೇಶ್ವರ್ ರಾವ್ (ತೆ):** ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧುಂಧ್ವ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, **ಗಣಪತ್ (ಹಿಂ):** ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, **ಘೋಸ್ಟ್ (ಕ):** ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, **ಲಿಯೋ (ಕ):** ಮ.12.15ಕ್ಕೆ, **ಲಿಯೋ (ತ):** ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಲಿಯೋ (ತ):** ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, **ಯಾರಿಯನ್ 2 (ಹಿಂ):** ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಳಲೆ ಶ್ರೀ ಅರವಿಂದ ನಾಯಕಿ ಅಮ್ಮನವರ ವಿಜೃಂಭಣೆಯ ರಥೋತ್ಸವ



ನಂಜನಗೂಡು, ಅ.21– ತಾಲೂಕಿನ ಕಳಲೆ ಲಕ್ಷ್ಮಿಕಾಂತಸ್ವಾಮಿ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಶ್ರೀ ಅರವಿಂದ ನಾಯಕಿ ಅಮ್ಮನವರ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ರಥೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ ನವಗ್ರಹ ಹೋಮ ನೆರವೇರಿಸಿದ ನಂತರ ಉತ್ಸವ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಲಾಯಿತು. ಬೆಳಗ್ಗೆ 10.45 ರಿಂದ 11.15ಕ್ಕೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಋತ್ವಿಕರ ವೇದ ಪಾರಾಯಣಗಳೊಂದಿಗೆ ನೆರೆದಿದ್ದ ಭಕ್ತರು ರಥವನ್ನು ಶ್ರದ್ಧಾ–ಭಕ್ತಿಯಿಂದ ಎಳೆಯುವ ಮೂಲಕ ಇಷ್ಟಾರ್ಥಗಳನ್ನು ಪೂರೈಸುವಂತೆ ಬೇಡಿಕೊಂಡರು. ರಥೋತ್ಸವವು ರಥಬೀದಿಯಲ್ಲಿ ಚಲಿಸುವ ಮಾರ್ಗದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಭಕ್ತರು ಹಣ್ಣು–ಧವನ ಸಮರ್ಪಿಸಿ ಭಕ್ತಿ ಮೆರೆದರು.

ನೂತನ ರಥದ ಲೋಕಾರ್ಪಣೆ: ಭಕ್ತರು ಮತ್ತು ದಾನಿಗಳು ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ತಯಾರಿಸಲಾಗಿರುವ ನೂತನ ರಥೋತ್ಸವವನ್ನು ಅರವಿಂದನಾಯಕಿ ಅಮ್ಮನವರ ರಥೋತ್ಸದ ಹಿನ್ನೆಲೆಯಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಮೊದಲಿಗೆ ನೂತನ ರಥಕ್ಕೆ ದ್ವಾರ ಸಂಗ್ರಹಣಾ ಪೂಜೆ ನೆರವೇರಿಸಿ. ಪ್ರತಿಷ್ಠಾಪನಾ ಹೋಮವನ್ನು ನೆರವೇರಿಸಲಾಯಿತು. ನೂತನ ರಥವನ್ನು ದೇವಾಲಯದ ಪಾರುಪತ್ತೆದಾರ್ ಜಯರಾಂ ಅವರ ಮೂಲಕ ದೇವಾಲಯಕ್ಕೆ ಸಮರ್ಪಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ದೇವಾಲಯದ ಪಾರುಪತ್ತೆದಾರ್ ಜಯರಾಂ ಮಾತನಾಡಿ, ನವರಾತ್ರಿ ಪ್ರಯುಕ್ತ ದೇವಾಲಯದಲ್ಲಿ ಅ.14 ರಿಂದ 24 ರವರೆಗೆ ಪ್ರತಿದಿನ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ನವರಾತ್ರಿಯ 7ನೇ ಸಪ್ತಮಿ ದಿನ ಅಮ್ಮನವರ ರಥೋತ್ಸವನ್ನು ನೆರವೇರಿಸಲಾಗಿದ್ದು. 27ರ ಶುಕ್ರವಾರ ಪವಿತ್ರೋತ್ಸವ ಹಾಗೂ ರಾತ್ರಿ ಪೂರ್ಣಾಹುತಿಯೊಂದಿಗೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಸಂಪನ್ನಗೊಳ್ಳಲಿವೆ ಎಂದರು.

ರಥೋತ್ಸವದ ಸಂದರ್ಭದಲ್ಲಿ ಗ್ರಾಮದ ಮುಖ್ಯಸ್ಥರು ಮತ್ತು ಯಜಮಾನರು ಇದ್ದರು.

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

ಸಂಖ್ಯೆ : ಸಶಿಕ/ಸಿ3/ಎಸ್.ಆರ್.ಪಿ.ಕೇಂದ್ರ/ಸಾ.ಸ.ಖ/01/2023-24, ದಿನಾಂಕ :21/10/2023

ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ

ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಕೆ. ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಸಶಿಕ/ಸಶಿ/ಕಾ.ಅ/182022–23, ಇ–7096, ದಿನಾಂಕ: 05/07/2023ರ ರೀತ್ಯಾ 2022–23 ನೇ ಸಾಲಿನಲ್ಲಿ ಸಮನ್ವಯ ಶಿಕ್ಷಣ ಕಾರ್ಯಕ್ರಮದಡಿ ಸಂಪನ್ಮೂಲ ಕೇಂದ್ರಗಳ ಬಲವರ್ಧನೆಗಾಗಿ ಮೈಸೂರು ಜಿಲ್ಲೆಯ 02 ಕೇಂದ್ರಗಳಿಗೆ ಸಾಧನ ಸಲಕರಣೆ ಹಾಗೂ ಕಲಿಕೋಪಕರಣಗಳನ್ನು ಸರಬರಾಜು ಮಾಡಲು ದ್ವಿ ಲಕೋಟೆಯಡಿ ಟೆಂಡರ್ ಕರೆದಿದ್ದು, ಟೆಂಡರ್ ಅರ್ಜಿ ಶುಲ್ಕ ರೂ.500/– ಡಿಡಿ.ಯನ್ನು ಡಿ.ಪಿ.ಒ. ಎಸ್.ಎಸ್.ಕೆ ಮೈಸೂರು ರವರಿಗೆ ಪಡೆದು ದಿನಾಂಕ: 25/10/2023 ರಿಂದ 03/11/2023ರ ಸಂಜೆ 4.00 ಗಂಟೆಯವರೆಗೆ ಕಛೇರಿಯಲ್ಲಿ ಪಡೆದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಸೂಚಿಸಿದೆ, ಸಂಪೂರ್ಣ ವಿವರಗಳು ಟೆಂಡರ್ ಅರ್ಜಿಯಲ್ಲಿದ್ದು ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಎಸ್.ಎಸ್.ಕೆ. ಶಾಲಾ ಶಿಕ್ಷಣ ಇಲಾಖೆ, ಮೈಸೂರುರವರ ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ: 0821-2496686, ಮೊಬೈಲ್ ಸಂಖ್ಯೆ: 9448999404 ಸಂಪರ್ಕಿಸಲು ಸೂಚಿಸಿದೆ.

ಸಹಿ/–ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.